ದೈವಿಕ ಧರ್ಮ

ಡಾ॥ ಶ್ರೀ ರಾಜೇಂದ್ರ ನಾರಾಯಣ್ ಲಾಲ್ ಎಂ.ಎ.

ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ

ಪ್ರಕಾಶಕರ ಮಾತು

ಪವಿತ್ರ ಕುರ್‌ಆನ್ ಒಂದು ಅದ್ಭುತವಾಗಿದೆ. ಪ್ರವಾದಿ ಮುಹಮ್ಮದ್‌ರು(ಸ) ಇನ್ನೊಂದು ಅದ್ಭುತವಾಗಿದ್ದಾರೆ. ಕುರ್‌ಆನಿನ ಬೆಳಕಿನಲ್ಲಿ ಪ್ರವಾದಿವರ್ಯರು(ಸ) ನಡೆಸಿದ ಜೀವನ ಮಾರ್ಗವೇ ಇಸ್ಲಾಮ್. ಅದು 'ದೈವಿಕ ಧರ್ಮ'ವಾಗಿದೆ. ಮಾನವನನ್ನು ಆಮೂಲಾಗ್ರವಾಗಿ ಬದಲಾಯಿಸುವ ಶಕ್ತಿ ಇಸ್ಲಾಮಿಗಿದೆ. ಪೂರ್ವಗ್ರಹವಿಲ್ಲದೆ ಇಸ್ಲಾಮಿನ ಅಧ್ಯಯನ ನಡೆಸುವ ಯಾರೇ ಆದರೂ ಇಸ್ಲಾಮಿನ ಈ ಸತ್ಯತೆಯನ್ನು ಒಪ್ಪಿಕೊಳ್ಳದೆ ಇರಲಾರನು. ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಮುಹಮ್ಮದ್‌ರ(ಸ) ಜೀವನವನ್ನು ಅಭ್ಯಸಿಸಿದರೆ ಅವೆರಡರ ಮಧ್ಯೆ ಸಾಮ್ಯತೆಯಿರುವುದು ಯಾರಿಗೂ ಗೋಚರಿಸದಿರಲಾರದು.

ಇಸ್ಲಾಮ್ ಆರಂಭ ಕಾಲದಲ್ಲಿ ಜನರ ಮೇಲೆ ಪ್ರಭಾವ ಬೀರಿದ್ದಂತೆಯೇ ಈ ಕಾಲದಲ್ಲೂ ಬೀರುತ್ತದೆ. ಇತಿಹಾಸದುದ್ದಕ್ಕೂ ಅನೇಕ ಮುಸ್ಲಿಮೇತರ ಬುದ್ಧಿಜೀವಿಗಳು, ದಾರ್ಶನಿಕರು, ವಿಜ್ಞಾನಿಗಳು, ಇತಿಹಾಸ ತಜ್ಞರು, ರಾಜಕಾರಣಿಗಳಾದಿಯಾಗಿ ಎಲ್ಲರೂ ಇಸ್ಲಾಮಿನ ಅಧ್ಯಯನ ನಡೆಸಿದ ನಂತರ ಅದು ಮಾತ್ರ ಮಾನವನ ಸಮಸ್ಯೆಗಳಿಗೆ ಏಕೈಕ ಪರಿಹಾರವಾಗಿದ್ದು ಅದರಿಂದ ಮಾತ್ರ ಲೋಕದಲ್ಲಿ ಶಾಂತಿ, ನೆಮ್ಮದಿ ಸ್ಥಾಪನೆ ಸಾಧ್ಯವೆಂಬುದನ್ನು ಒಪ್ಪಿಕೊಂಡಿದ್ದಾರೆ. ಈಗಲೂ ಒಪ್ಪಿಕೊಳ್ಳುತ್ತಿದ್ದಾರೆ. ಅಂತಹವರಲ್ಲಿ ಶ್ರೀ ರಾಜೇಂದ್ರ ನಾರಾಯಣ ಲಾಲ್‌ಜೀ ಕೂಡಾ ಒಬ್ಬರು.

ನಿವೃತ್ತ ಜೀವನದಲ್ಲಿ ವಿವಿಧ ಧರ್ಮಗಳ ಅಧ್ಯಯನ ನಡೆಸಿದ ಅವರಿಗೆ, ಇಸ್ಲಾಮಿನ ಕುರಿತು ಬಹಳಷ್ಟು ತಪ್ಪುಕಲ್ಪನೆಗಳನ್ನು ಹರಡಲಾಗಿದೆಯೆಂಬ ಸತ್ಯ ಮನವರಿಕೆಯಾಗಿದ್ದು, ಅದರ ನಿವಾರಣೆಗಾಗಿ 'ಇಸ್ಲಾಮ್ ಸ್ವಯಂ ಸಿದ್ಧ ಈಶ್ವರೀಯ ವ್ಯವಸ್ಥಾ' ಎಂಬ ಹೆಸರಿನಲ್ಲಿ ಹಿಂದೀ ಭಾಷೆಯಲ್ಲಿ ಈ ಪುಸ್ತಕವನ್ನು ರಚಿಸಿದ್ದಾರೆ. ಎಲ್ಲ ಧರ್ಮಗಳ ಅಂತಿಮ ಸಾರಸರ್ವಸ್ವವಾಗಿರುವ ಇಸ್ಲಾಮಿನ ವಸ್ತುನಿಷ್ಠ ಅಧ್ಯಯನ ನಡೆಸಿ ಸತ್ಯಾನ್ವೇಷಣೆಯ ಒಂದು ಪ್ರಯತ್ನವನ್ನು ಲೇಖಕರು ಮಾಡಿರುತ್ತಾರೆ. ಇದರಲ್ಲಿ ಇಸ್ಲಾಮಿನ ಕುರಿತು ಮುಸ್ಲಿಮೇತರ ಬಾಂಧವರಲ್ಲಿ ಅಡಗಿರುವ ಅನೇಕ ಸಂದೇಹಗಳಿಗೆ ವಸ್ತುನಿಷ್ಠವಾಗಿ ಸಮರ್ಪಕ ಉತ್ತರ ನೀಡಿದ್ದಾರೆ. ಅದರ ಕನ್ನಡಾನುವಾದವೇ 'ದೈವಿಕ ಧರ್ಮ.' ಇಸ್ಲಾಮನ್ನು ವಸ್ತುನಿಷ್ಠವಾಗಿ ಗ್ರಹಿಸಿದ ಓರ್ವ ಮುಸ್ಲಿಮೇತರ ದಾರ್ಶನಿಕನ ರಚನೆಯೆಂಬ ನೆಲೆಯಲ್ಲಿ ಈ ಪುಸ್ತಕ ಬಹಳ ಮಹತ್ವ ಪಡೆದಿದೆ. ಈ ಪುಸ್ತಕದ ಅಧ್ಯಯನದಿಂದ ಮುಸ್ಲಿಮೇತರ ಬಾಂಧವರಲ್ಲಿರುವ ಇಸ್ಲಾಮಿನ ಬಗೆಗಿನ ಸಂದೇಹಗಳು ದೂರವಾಗಬಹುದೆಂದು ಆಶಿಸುತ್ತೇವೆ.

ಶಾಂತಿ ಪ್ರಕಾಶನ

ಅನುಕ್ರಮಣಿಕೆ

ಅರಿಕೆ

ಶ್ರೀ ರಾಜೇಂದ್ರ ಲಾಲ್‌ಜೀಯವರ ಈ ಪುಸ್ತಕವನ್ನು ಪ್ರಕಾಶನಗೊಳಿಸಲು ನಾವು ಸಂತೋಷ ಪಡುತ್ತೇವೆ. ರಾಜೇಂದ್ರಜೀಯವರು ಹಿಂದೂ, ಬೌದ್ಧ ಮತ್ತು ಕ್ರೈಸ್ತ ಧರ್ಮಗಳ ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯಗಳು ಮತ್ತು ನಾವು ಅದಕ್ಕೆ ಸಮರ್ಥನೆಯಾಗಿ ಬರೆದ ಟಿಪ್ಪಣಿಗಳನ್ನು ವಿಚಾರವಂತ ಓದುಗರು ವಿವಾದವೆಂದು ಪರಿಗಣಿಸಬಾರದೆಂದು ವಿನಂತಿಸುತ್ತಿದ್ದೇವೆ.

ವಾಸ್ತವಿಕಾಂಶಗಳ ಆಧಾರದಲ್ಲಿರುವ ರಾಜೇಂದ್ರಜೀಯವರ ವಿಚಾರಗಳು ಬಹಳಷ್ಟು ಅರ್ಥಪೂರ್ಣವಾಗಿವೆ. ಇಸ್ಲಾಮಿನ ಕುರಿತು ಈ ರೀತಿ ಅಭಿಪ್ರಾಯ ಪ್ರಕಟಿಸಿರುವವರಲ್ಲಿ ರಾಜೇಂದ್ರಜೀಯವರೇ ಮೊದಲಿಗರಲ್ಲ. ಭಾರತ ಹಾಗೂ ವಿದೇಶಗಳ ಅನೇಕ ವಿದ್ವಾಂಸರು ಇಂತಹ ಅಭಿಪ್ರಾಯಗಳನ್ನು ಪ್ರಕಟಿಸಿದ್ದಾರೆ. ಆ ಪೈಕಿ ಕೆಲವರು ಇಸ್ಲಾಮನ್ನು ಅಂಗೀಕರಿಸಿದ್ದಾರೆ. ಹಾಗೆಯೇ ಇಸ್ಲಾಮನ್ನು ಹೊಗಳುವವರೂ ಧಾರಾಳವಾಗಿದ್ದಾರೆ.

ಈ ನಿಟ್ಟಿನಲ್ಲಿ ಒಂದು ನಿದರ್ಶನವನ್ನು ಇಲ್ಲಿ ಪ್ರಸ್ತುತಪಡಿಸುತ್ತೇವೆ. 1979ರ ಜನವರಿ ತಿಂಗಳ ಕೊನೆಯಲ್ಲಿ ಕರ್ನಾಟಕ ರಾಜ್ಯದ ರಾಯಚೂರಿನಲ್ಲಿ ಹೈಕೋರ್ಟ್‌ನ ನ್ಯಾಯಾಧೀಶರಾಗಿದ್ದ ಶ್ರೀ ರಾಮ್‌ಜೀಯವರಿಗೆ ಮುಸ್ಲಿಮರ ವತಿಯಿಂದ ಸನ್ಮಾನ ಸಮಾರಂಭವೊಂದನ್ನು ಏರ್ಪಡಿಸಲಾಗಿತ್ತು.

ಅದರಲ್ಲಿ ಡೆಪ್ಯೂಟಿ ಕಮಿಶನರ್, ಸ್ಪೆಶಲ್ ಡೆಪ್ಯೂಟಿ ಕಮಿಶನರ್, ಪೊಲೀಸ್, ಎಸ್.ಪಿ. ಮತ್ತು ಜಿಲ್ಲೆಯ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು. ನ್ಯಾಯಾಧೀಶರು ಹಾಗೂ ಅಲ್ಲಿ ನೆರೆದಿದ್ದ ಎಲ್ಲ ಮಹಾಶಯರಿಗೆ ಕುರ್‌ಆನ್ ಗ್ರಂಥದ ಕನ್ನಡಾನುವಾದ ಪ್ರತಿಯನ್ನು ಉಡುಗೊರೆಯಾಗಿ ನೀಡಲಾಯಿತು. ಪವಿತ್ರ ಕುರ್‌ಆನ್ ಅನುವಾದವನ್ನು ಸ್ವೀಕರಿಸಿ ಮಾತಾಡಿದ ನ್ಯಾಯಾಧೀಶರು ಹೀಗೆ ಹೇಳಿದರು, "ಪವಿತ್ರ ಕುರ್‌ಆನಿನ ಈ ಅನುವಾದ ದೊರೆತಿರುವುದರಿಂದ ನನಗೆ ಅಪಾರ ಸಂತೋಷವಾಗಿದೆ. ವಸ್ತುತಃ ಇದು ನನ್ನ ಪಾಲಿಗೆ ಮಹಾ ಅನುಗ್ರಹ ಮತ್ತು ಸೌಭಾಗ್ಯವಾಗಿದೆ. ನಾನು ಈ ಮಹಾನ್ ಗ್ರಂಥದ ಅಧ್ಯಯನ ನಡೆಸಿಲ್ಲ. ಆದ್ದರಿಂದ ಈ ಪವಿತ್ರ ಗ್ರಂಥದ ಬಗ್ಗೆ ನಾನು ಹೆಚ್ಚೇನೂ ಹೇಳ ಬಯಸುವುದಿಲ್ಲ. ಹಾಗಿದ್ದರೂ ಕುರ್‌ಆನಿನ ಬೋಧನೆಗಳಿಗೆ ಸಂಬಂಧಿಸಿದ ಕೆಲವು ಪುಸ್ತಕಗಳನ್ನು ಓದಿದ್ದೇನೆ. ಕುರ್‌ಆನಿನ ಕೆಲವು ಅಧ್ಯಾಯಗಳ ಅಧ್ಯಯನವನ್ನೂ ನಡೆಸಿದ್ದೇನೆ. ಅವುಗಳಿಂದ ನನಗೆ ಮನವರಿಕೆಯಾಗಿರು

ವಂತೆ ಪ್ರವಾದಿ ಮುಹಮ್ಮದರಿಗೆ ಅವತೀರ್ಣವಾದ ಕುರ್‌ಆನ್ ಗ್ರಂಥವು ದೇವಸಂದೇಶವಾಗಿದೆ. ಈ ಸಂದೇಶವು ಯಾವುದೇ ನಿರ್ದಿಷ್ಟ ಅಥವಾ ವಿಶಿಷ್ಟ ಜನಾಂಗಕ್ಕೆ ಸೀಮಿತವಾಗಿಲ್ಲ. ಬದಲಾಗಿ ಅದು ಸಕಲ ಮಾನವಕುಲಕ್ಕೆ ಅನ್ವಯವಾಗುತ್ತದೆ. ಇಸ್ಲಾಮ್ ಎಂಬ ಪದವೇ ಸಕಲ ಮಾನವರಿಗೆ ಶಾಂತಿಯ ಸಂದೇಶವನ್ನು ನೀಡುತ್ತದೆ.

ಕುರ್‌ಆನ್ ಹೇಳುತ್ತದೆ: 'ದೇವನು ಏಕನು, ಅವನು ಸಕಲ ಸೃಷ್ಟಿಗಳ ಕರ್ತ, ಪ್ರಭು ಮತ್ತು ಸಕಲ ಮಾನವರಿಗೆ ದಯಾಳು ಹಾಗೂ ಕರುಣಾಮಯನಾಗಿದ್ದಾನೆ.' ಪವಿತ್ರ ಕುರ್‌ಆನಿನ ಆರಂಭವೇ ದೇವನ ಸ್ತುತಿಯಿಂದ ಆಗಿದೆ. 'ಸರ್ವಸ್ತುತಿಯೂ ದೇವನಿಗೆ ಮೀಸಲು, ಅವನು ಸಕಲ ಸೃಷ್ಟಿಗಳ ಪ್ರಭು. ದಯಾಳು ಮತ್ತು ಕರುಣಾಮಯನಾಗಿದ್ದಾನೆ. ಅಂತ್ಯ ದಿನದ ಒಡೆಯನೂ ಅವನೇ. ನಾವು ನಿನ್ನನ್ನು ಮಾತ್ರ ಆರಾಧಿಸುತ್ತೇವೆ. ನಿನ್ನಿಂದ ಮಾತ್ರ ಸಹಾಯ ಯಾಚಿಸುತ್ತೇವೆ. ನೀನು ನಮಗೆ ಸನ್ಮಾರ್ಗವನ್ನು ತೋರಿಸು.'

ನಾನು **'ಸನ್ಮಾರ್ಗವನ್ನು ತೋರಿಸು'** ಎಂಬ ಪದವನ್ನು ಇಲ್ಲಿ ಪುನರುಚ್ಚರಿಸುತ್ತೇನೆ. ವಸ್ತುತಃ ಪ್ರಥಮ ಅಧ್ಯಾಯದ ಈ ಪದಗಳು ಕೀಲಿಕೈಯ ಸ್ಥಾನವನ್ನು ಪಡೆದಿವೆ. ಈ ಪವಿತ್ರ ಗ್ರಂಥದಲ್ಲಿ ಸಕಲ ಮಾನವರ ಸನ್ಮಾರ್ಗ ದರ್ಶನಕ್ಕಾಗಿ ಆರಂಭದ ಪದಗಳನ್ನೇ ವ್ಯಾಖ್ಯಾನಿಸಲಾಗಿದೆ.

ಪವಿತ್ರ ಕುರ್‌ಆನ್ ಹೀಗೆ ಹೇಳುತ್ತದೆ: 'ದೇವನು ಒಬ್ಬನೇ. ಅವನೇ ಸಕಲ ಸೃಷ್ಟಿಗಳ ಪ್ರಭು. ಆದ್ದರಿಂದ ಅವನು ತೋರಿದ ದಾರಿಯಲ್ಲಿಯೇ ನಡೆಯಬೇಕು.' ಕುರ್‌ಆನಿನ ಬೋಧನೆಯಂತೆ ನಡೆಯುವುದರಿಂದ ಮಾನವರ ಹೆಚ್ಚಿನ ಸಮಸ್ಯೆಗಳಿಗೆ ಪರಿಹಾರ ದೊರೆಯಬಹುದು." **(ದಾವತ್ ದೈನಿಕ, ದೆಹಲಿ, 4.2.1979)**

ಈ ಕುರ್‌ಆನ್ ಅನುವಾದದ ಪರಿಚಯ ಸಮಾರಂಭಗಳು ಕರ್ನಾಟಕದ ಅನೇಕ ನಗರಗಳಲ್ಲಿ ಜರಗಿವೆ. ಅಲ್ಲಿ ಸೇರಿದ್ದ ಹಿಂದೂ ಬಾಂಧವರಿಗೂ ಅನುವಾದ ಗ್ರಂಥವನ್ನು ನೀಡಲಾಗಿದೆ. ಆ ನ್ಯಾಯಾಧೀಶರಂತೆ ಇತರ ಹಿಂದೂ ಧಾರ್ಮಿಕ ನಾಯಕರೂ ಕುರ್‌ಆನಿನ ಬಗ್ಗೆ ತಮ್ಮ ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ.

ಒಂದು ವೇಳೆ ಪವಿತ್ರ ಕುರ್‌ಆನನ್ನು ದೇವಗ್ರಂಥವೆಂದು ನಂಬಿದರೂ ನಂಬದಿದ್ದರೂ ಅದೊಂದು ಅಂತಿಮ ದೇವ ಗ್ರಂಥವೆಂಬುದನ್ನು ಯಾರಿಂದಲೂ ನಿರಾಕರಿಸಲು ಸಾಧ್ಯವಿಲ್ಲ. ಪವಿತ್ರ ಕುರ್‌ಆನ್ ಅವತೀರ್ಣಗೊಂಡು 1400 ವರ್ಷಗಳೇ ಸಂದಿವೆ. ಈ ಸುದೀರ್ಘ ಕಾಲಾವಧಿಯಲ್ಲಿ ಮಹಾ ದಾರ್ಶನಿಕರೂ, ವಿಜ್ಞಾನಿಗಳೂ, ರಾಜಶಾಸ್ತ್ರಜ್ಞರೂ, ಸಾಹಿತಿಗಳೂ, ಕವಿಗಳೂ ಆಗಿ ಹೋಗಿದ್ದಾರೆ. ಆದರೆ ಅವರ ಪೈಕಿ ಯಾರೊಬ್ಬರೂ, ನಾವು ದೇವ ಸಂದೇಶವಾಹಕರು, ನಮಗೆ ದಿವ್ಯಜ್ಞಾನ ಅವತೀರ್ಣವಾಗುತ್ತಿದೆ ಅಥವಾ ನಮ್ಮ ಗ್ರಂಥವು ದೈವಿಕ ಗ್ರಂಥವೆಂದು ವಾದಿಸಿಲ್ಲ. ಇದು ಪ್ರವಾದಿ ಮುಹಮ್ಮದ್‌ರು ದೇವನ ಸಂದೇಶವಾಹಕರು ಮತ್ತು ಕುರ್‌ಆನ್ ಅಂತಿಮ ದೇವ ಗ್ರಂಥವೆಂಬುದಕ್ಕೆ ಪ್ರತ್ಯಕ್ಷ ನಿದರ್ಶನವಾಗಿದೆ.

ಒಬ್ಬ ದೇವನ ಹೊರತು ಅನ್ಯ ದೇವರಿಲ್ಲ ಮತ್ತು ಅವನ ದೇವತ್ವದಲ್ಲಿ ಯಾರೂ ಪಾಲುದಾರರಿಲ್ಲವೆಂಬುದು ನೈಜ ದೇವ ಧರ್ಮದ ಬುನಾದಿಯಾಗಿದೆ. ಅವನೇ ಸೃಷ್ಟಿಗಳ ನಿರ್ಮಾತೃ, ಪ್ರಭು ಹಾಗೂ ನಿಯಂತ್ರಕನಾಗಿದ್ದಾನೆ. ಆದ್ದರಿಂದ ಅವನೊಬ್ಬನೇ ಆರಾಧ್ಯ. ಅವನ ಹೊರತು ಬೇರೆ ಆರಾಧ್ಯರಿಲ್ಲ. ಯಾರಾದರೂ ನಿಷ್ಕಳಂಕ ಮನಸ್ಸಿನಿಂದ ಪವಿತ್ರ ಕುರ್‌ಆನಿನ ಗಾಢ ಅಧ್ಯಯನ ನಡೆಸಿದರೆ ಪವಿತ್ರ ಕುರ್‌ಆನ್ ಸಾದ್ಯಂತ ಇದೇ ನಂಬಿಕೆಯ ಬುನಾದಿಯಲ್ಲಿದೆಯೆಂದು ಮನವರಿಕೆಯಾದೀತು. ಅದರಲ್ಲಿ ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಮತ್ತು ಆರ್ಥಿಕವೇ ಮುಂತಾದ ಮಾನವ ಜೀವನಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳ ಬೋಧನೆಗಳ ಮೂಲವು ಇದೇ ನಂಬಿಕೆಯ ಆಧಾರದಲ್ಲಿದೆ. ಆ ಧರ್ಮದ ಹೆಸರೇ ಇಸ್ಲಾಮ್, ಅರ್ಥಾತ್ ಸಂಪೂರ್ಣ ಜೀವನದಲ್ಲಿ ದೇವನ ಆಜ್ಞಾನುವರ್ತಿಯಾಗುವ ಧರ್ಮ.

ಕೇವಲ ಇದೊಂದೇ ದೇವ ಗ್ರಂಥ ಮತ್ತು ಇದು ಹೊಸ ಧರ್ಮದೊಂದಿಗೆ ಅವತೀರ್ಣಗೊಂಡಿದೆಯೆಂದು ಪವಿತ್ರ ಕುರ್‌ಆನ್ ಹೇಳುವುದಿಲ್ಲ. ಬದಲಾಗಿ ದೇವನು ಸೃಷ್ಟಿಯ ಆರಂಭದಿಂದ ಮಾನವರಿಂದಲೇ ಅವರಿಗಾಗಿ ಸಂದೇಶವಾಹಕರನ್ನು ನೇಮಿಸಿದ್ದಾನೆ ಮತ್ತು ಅವರ ಮೂಲಕವೇ ತನ್ನ ಸಂದೇಶ ಮತ್ತು ಆಜ್ಞೆಗಳನ್ನು ತಲಪಿಸಿದ್ದಾನೆಂದು ಕುರ್‌ಆನ್ ಸ್ಪಷ್ಟವಾಗಿ ತಿಳಿಸಿದೆ. ಅವರನ್ನೇ ನಬಿ ಮತ್ತು ರಸೂಲರೆಂದು ಕರೆಯಲಾಯಿತು. ಪವಿತ್ರ ಕುರ್‌ಆನ್ ತಿಳಿಸಿರುವಂತೆ, ಜಗತ್ತಿನ ಪ್ರತಿಯೊಂದು ಸಮುದಾಯದಲ್ಲಿಯೂ ದೇವ ಸಂದೇಶವಾಹಕರು ಬಂದಿದ್ದಾರೆ. ಅವರೆಲ್ಲರ ಮೂಲ ಬೋಧನೆ ಒಂದೇ ಆಗಿತ್ತು. ಅದನ್ನು ಇಸ್ಲಾಮ್ ಎಂದು ಕರೆಯಲಾಗಿದೆ. ದೇಶ ಮತ್ತು ಕಾಲಕ್ಕೆ ತಕ್ಕಂತೆ ಬೋಧನೆಯಲ್ಲಿ ಬಾಹ್ಯವಾಗಿ ಅಲ್ಪಸ್ವಲ್ಪ ವ್ಯತ್ಯಾಸವಿದ್ದರೂ ಅವರೆಲ್ಲರ ಬೋಧನೆಗಳ ಸಾರಾಂಶ ಒಂದೇ ಆಗಿತ್ತು.

ಈ ರೀತಿ ಆಗಮಿಸಿದ ಎಲ್ಲ ದೇವ ಸಂದೇಶವಾಹಕರು ತಮಗಿಂತ ಮುಂಚಿನ ಸಂದೇಶ ವಾಹಕರನ್ನು ಮತ್ತು ಅವರಿಗೆ ಅವತೀರ್ಣಗೊಂಡ ಗ್ರಂಥಗಳನ್ನು ದೃಢೀಕರಿಸುವ ಪರಂಪರೆಯನ್ನು ಹೊಂದಿದ್ದರು. ಆ ಪರಂಪರೆಯಂತೆಯೇ ಹಝ್ರತ್ ಮುಹಮ್ಮದ್‌ರು ತಮಗಿಂತ ಮೊದಲಿನ ಸಂದೇಶವಾಹಕರನ್ನು ಸಮರ್ಥಿಸಿದ್ದಾರೆ. ಹಾಗೆಯೇ ಪವಿತ್ರ ಕುರ್‌ಆನ್ ಗ್ರಂಥವು ಅದಕ್ಕಿಂತ ಹಿಂದಿನ ದೇವಗ್ರಂಥಗಳನ್ನು ದೃಢೀಕರಿಸಿದೆ. ಇಸ್ಲಾಮ್, ದೇವ ಧರ್ಮದ ಅಂತಿಮ ರೂಪವಾಗಿದೆಯೆಂಬ ರಾಜೇಂದ್ರ ನಾರಾಯಣ್‌ಜೀಯವರ ಹೇಳಿಕೆಯು ವಾಸ್ತವಿಕವಾಗಿದೆ. ಅದೇ ಮಾತನ್ನು ಅಲ್ಲಾಹನು ಪವಿತ್ರ ಕುರ್‌ಆನಿನಲ್ಲಿ ಈ ರೀತಿ ಹೇಳಿದ್ದಾನೆ:

"ಓ ಪೈಗಂಬರರೇ, ನಾವು ನಿಮಗೆ ಈ ಗ್ರಂಥವನ್ನು ಕಳುಹಿಸಿದೆವು. ಇದು ಸತ್ಯದೊಂದಿಗೆ ಬಂದಿದೆ ಮತ್ತು 'ಅಲ್ ಕಿತಾಬ್'ನ ಪೈಕಿ ತನ್ನ ಮುಂದಿರುವುದನ್ನೆಲ್ಲ ದೃಢಪಡಿಸುವಂತಹದೂ ಅದರ ಸಂರಕ್ಷಕವೂ ಆಗಿರುತ್ತದೆ."

(ಕುರ್‌ಆನ್, 5:48)

ಇಲ್ಲಿ "ದೃಢಪಡಿಸುವ ಮತ್ತು ಸಂರಕ್ಷಕ"ವೆಂದು ನಾವು ಅರ್ಥೈಸಿರುವ ಪದವು ಬಹಳ ಅರ್ಥಪೂರ್ಣವಾಗಿದೆ. ಮೂಲದಲ್ಲಿರುವ 'ಮುಹೈಮಿನ್' ಎಂಬ ಪದಕ್ಕೆ ಮೇಲ್ವಿಚಾರಣೆ, ಸಾಕ್ಷ್ಯ, ನ್ಯಾಸ, ಸಮರ್ಪಣೆ, ಸಹಾಯ ಎಂಬಿತ್ಯಾದಿ ಅರ್ಥಗಳೂ ಇವೆ. ಆದ್ದರಿಂದ ಪ್ರಸ್ತುತ ವಚನದ ತಾತ್ಪರ್ಯವೇನೆಂದರೆ, ಈ ಹಿಂದಿನ ದೈವಿಕ ಗ್ರಂಥಗಳ ಎಲ್ಲ ಸತ್ಯ ಸಂದೇಶಗಳನ್ನು ಕುರ್‌ಆನ್ ತನ್ನಲ್ಲಿ ಸುರಕ್ಷಿತಗೊಳಿಸಿದೆ. ಅದು ಅವುಗಳ ಮೇಲ್ವಿಚಾರಕ ಮತ್ತು ಸಂರಕ್ಷಕವಾಗಿವೆ. ಇನ್ನು ಅದರ ಯಾವುದೇ ಭಾಗವು ಲೋಪವಾಗಲಾರದು. ಕುರ್‌ಆನ್ ಅವುಗಳ ಸಮರ್ಥಕವಾಗಿದ್ದು ಅವುಗಳಲ್ಲಿರುವ ದೈವಿಕ ಶಿಕ್ಷಣಗಳನ್ನು ಸತ್ಯವೆಂದು ದೃಢೀಕರಿಸುತ್ತದೆ ಹಾಗೂ ಅವುಗಳ ಸತ್ಯದ ಬಗ್ಗೆ ಸಾಕ್ಷ್ಯವಹಿಸುತ್ತದೆ. ಪೂರ್ವ ಗ್ರಂಥಗಳಲ್ಲಿ ದೇವ ಶಿಕ್ಷಣದೊಂದಿಗೆ ಬೆರೆತಿರುವ ಇತರರ ಮಾತುಗಳನ್ನು ಕುರ್‌ಆನಿನ ಸಾಕ್ಷ್ಯಾಧಾರಗಳ ಮೂಲಕ ಸೋಸಿ ಪ್ರತ್ಯೇಕಿಸಬಹುದಾಗಿದೆ.

ಈ ವಾಸ್ತವಿಕತೆಯನ್ನು ತಿಳಿಯದೆ ಕುರ್‌ಆನ್ ಅವತೀರ್ಣಗೊಂಡ ಕಾಲದಲ್ಲಿದ್ದ ಪರಧರ್ಮೀಯರು ಮತ್ತು ಈ ಕಾಲದ ವಿರೋಧಿಗಳು ಕುರ್‌ಆನಿನಲ್ಲಿ ಪೂರ್ವಗ್ರಂಥಗಳ ಉಲ್ಲೇಖವಿದೆಯೆಂದು ಹೇಳುತ್ತಾರೆ. ಯಾವುದಾದರೂ ಜನಾಂಗವು ಧರ್ಮಭ್ರಷ್ಟಗೊಂಡಾಗ ಅದರ ಸುಧಾರಣೆಗಾಗಿ ದೇವನ ವತಿಯಿಂದ ಓರ್ವ ಸಂದೇಶವಾಹಕರನ್ನು ಕಳುಹಿಸಲಾಗುತ್ತದೆ. ಆಗ ಆ ಜನಾಂಗವು ಎರಡು ಗುಂಪುಗಳಾಗಿ ಮಾರ್ಪಡುತ್ತದೆ. ಆ ಪೈಕಿ ಒಂದು ಗುಂಪು ಜನಸಾಮಾನ್ಯರದ್ದಾಗಿದ್ದು ಅದರಲ್ಲಿ ಮುಕ್ತವಾಗಿ ಆಲೋಚಿಸುವ ಮುಗ್ಧ ಜನರಿರುತ್ತಾರೆ. ಅವರು ದೇವ ಸಂದೇಶವಾಹಕರನ್ನು ಅಂಗೀಕರಿಸಿ ಅವರ ಬೆಂಬಲಿಗರಾಗುತ್ತಾರೆ. ಇನ್ನೊಂದು ಗುಂಪಿನಲ್ಲಿ ಸ್ವಾರ್ಥಿಗಳಾದ ಜನಾಂಗೀಯವಾದಿ ಗಣ್ಯರು ಮತ್ತು ಪುರೋಹಿತರಿರುತ್ತಾರೆ. ಅವರು ಈ ವ್ಯಕ್ತಿಯನ್ನು ದೇವ ಸಂದೇಶವಾಹಕರೆಂದು ಅಂಗೀಕರಿಸಿದರೆ, ಅವರ ಅಧೀನವಿರಬೇಕಾಗುತ್ತದೆ, ಅದರಿಂದ ತಮ್ಮ ಅಭಿಮಾನ, ಸ್ಥಾನಮಾನ ಮತ್ತು ಸ್ವಾರ್ಥ ಹಿತಕ್ಕೆ ಅಡ್ಡಿಯಾಗುವುದೆಂದು ಭಾವಿಸುತ್ತಾರೆ. ತನ್ಮೂಲಕ ಅವರು ವಿರೋಧಿಗಳಾಗಿ ಮಾರ್ಪಟ್ಟು ಸಂದೇಶವಾಹಕರ ಹತ್ಯೆಗೂ ಸಿದ್ಧರಾಗುತ್ತಾರೆ. ಈ ಪರಿಸ್ಥಿತಿಗೆ ತಲಪಿದಾಗ ದೇವನ ಶಿಕ್ಷೆಯು ಬಂದೆರಗಿ ಅವರು ನಾಶ ಹೊಂದುತ್ತಾರೆ. ಸಂದೇಶವಾಹಕರಲ್ಲಿ ವಿಶ್ವಾಸವಿರಿಸಿದವರು ಸುರಕ್ಷಿತರಾಗುತ್ತಾರೆ. ಕಾಲಕ್ರಮೇಣ ಕೆಲವು ತಲೆಮಾರುಗಳ ಬಳಿಕ ಅವರ ಸಂತಾನಗಳಲ್ಲಿಯೂ ಕರ್ಮಭ್ರಷ್ಟತೆ ವ್ಯಾಪಿಸುತ್ತದೆ. ಅವರು ತಮ್ಮ ಧಾರ್ಮಿಕ ಶಿಕ್ಷಣಗಳನ್ನು ಬದಲಾಯಿಸಿ ಹೊಸ ಶಾಸ್ತ್ರ-ಪುರಾಣ ಮತ್ತು ಗ್ರಂಥಗಳನ್ನು ರಚಿಸಿ ಧರ್ಮವನ್ನು ತಮ್ಮ ಆಚಾರ ವ್ಯವಹಾರಗಳಿಗೆ ತಕ್ಕಂತೆ ಬದಲಾಯಿಸುತ್ತಾರೆ. ಆ ಮೂಲಕ ನಮ್ಮನ್ನು ಕರ್ಮಭ್ರಷ್ಟರೆಂದು ಕರೆಯುವಂತಾಗಬಾರದು ಮತ್ತು ನಮ್ಮ ಸ್ಥಾನಮಾನ ಗೌರವಗಳು ಸುರಕ್ಷಿತವಾಗಿರಬೇಕೆಂಬುದೇ ಅವರ ಉದ್ದೇಶವಾಗಿದೆ.

ಯಹೂದಿಯರು ಮತ್ತು ಕ್ರೈಸ್ತರು ತಮ್ಮ ಧರ್ಮ ಹಾಗೂ ಧರ್ಮಗ್ರಂಥಗಳೊಂದಿಗೆ ಇದೇ ರೀತಿ ವ್ಯವಹರಿಸಿದ್ದಾರೆ. ಮೂಸಾ, ಈಸಾ, ದಾವೂದ್ ಮುಂತಾದ ದೇವಪ್ರವಾದಿಗಳು ನೀಡಿದ ಬೋಧನೆಗಳೇನು, ಅದನ್ನು ಯಹೂದಿ ಮತ್ತು ಕ್ರೈಸ್ತರು ಎಷ್ಟಂಶ ಭ್ರಷ್ಟಗೊಳಿಸಿದ್ದಾರೆಂಬುದನ್ನು ಪವಿತ್ರ ಕುರ್‌ಆನ್ ಸುಸ್ಪಷ್ಟವಾಗಿ ವಿವರಿಸಿದೆ. ಈ ಹಿನ್ನೆಲೆಯಲ್ಲಿ ನಮ್ಮ ಭಾರತ ದೇಶದಲ್ಲಿಯೂ ಏನೆಲ್ಲ ನಡೆದಿರಲಾರದು? ಒಂದು ವೇಳೆ ಹಾಗೆ ಸಂಭವಿಸಿಲ್ಲದಿರುತ್ತಿದ್ದರೆ ಶ್ರೀಕೃಷ್ಣನು, "ಧರ್ಮಕ್ಕೆ ಹಾನಿ ಸಂಭವಿಸಿದಾಗಲೆಲ್ಲಾ ನಾನು ಅವತರಿಸಿ ಬರುವೆನು" ಎಂದು ಹೇಳಿರುವುದಕ್ಕೆ ಏನರ್ಥ? ಆದ್ದರಿಂದ ನನ್ನ ಅಭಿಪ್ರಾಯದಲ್ಲಿ, ಶ್ರೀಕೃಷ್ಣನು ತನ್ನನ್ನು ದೇವನೆಂದು ಹೇಳಿರಲಾರನು. ದೇವನಿಂದ ಕಳುಹಿಸಲ್ಪಟ್ಟವನೆಂದೇ ಹೇಳಿರಬೇಕು. ಅದೇನಿದ್ದರೂ ಈ ಮಾತಿನಿಂದ ಕಾಲಕ್ರಮೇಣ ಭಾರತದಲ್ಲಿಯೂ ಧರ್ಮವು ವಿಕೃತಗೊಂಡಿದೆಯೆಂದು ಸ್ಪಷ್ಟವಾಗುತ್ತದೆ. ಅನ್ಯಥಾ ಗೀತೆಯ ಶ್ರೀಕೃಷ್ಣನು ವೃಂದಾವನದಲ್ಲಿ ಗೋಪಿಕಾ ಸ್ತ್ರೀಯರೊಂದಿಗೆ ವಿಹರಿಸುವುದನ್ನು ನಾವು ಯಾವ ದೃಷ್ಟಿಯಿಂದ ನೋಡಬೇಕು? ಗೌತಮ ಬುದ್ಧನು ವೇದಶಾಸ್ತ್ರಗಳನ್ನೇ ನಂಬುತ್ತಿರಲಿಲ್ಲ. ಆತನಲ್ಲಿಯೂ ದೇವತ್ವವನ್ನು ಅಂಗೀಕರಿಸಲಾಯಿತು ಮತ್ತು ಅವನನ್ನು ಅವತಾರ ಪುರುಷರಲ್ಲಿ ಸೇರಿಸಲಾಯಿತು. ಸ್ವಾಮಿ ದಯಾನಂದರು ಈ ಲೋಕವನ್ನು ತ್ಯಜಿಸುವಾಗ ಹೇಳಿದ್ದೇನು? "ಒಂದು ವೇಳೆ ನಮ್ಮಲ್ಲಿ ಧರ್ಮದ ಕುರಿತು ಸದ್ಭಾವನೆಯಿದ್ದರೆ ಮತ್ತು ನಾವು ಸತ್ಯದ ಜಿಜ್ಞಾಸುಗಳಾಗಿದ್ದರೆ ನಿಷ್ಪಕ್ಷವಾಗಿ ನಾವು ವೇದ, ಉಪನಿಷತ್ತು ಮತ್ತು ಕುರ್‌ಆನಿನ ಅಧ್ಯಯನ ನಡೆಸಬೇಕು. ಹಾಗಾದರೆ ಈ ಗ್ರಂಥಗಳಲ್ಲಿ ಎಷ್ಟಂಶ ದೈವಿಕ ಶಿಕ್ಷಣಗಳಿವೆ ಮತ್ತು ಎಷ್ಟಂಶ ಮಿಶ್ರಣಗಳಿವೆಯೆಂದು ನಮಗೆ ಮನವರಿಕೆಯಾದೀತು."

ಅಬೂ ಮುಹಮ್ಮದ್ ಇಮಾಮುದ್ದೀನ್
ಇಸ್ಲಾಮಿ ಸಾಹಿತ್ಯ ಸದನ
ರಾಮನಗರ(ವಾರಣಾಸಿ).

ಮುನ್ನುಡಿ

ಅದ್ಭುತ ಅಥವಾ ಕ್ಷುಲ್ಲಕವಾದ ಎಲ್ಲ ಘಟನೆಗಳೂ ದೇವೇಚ್ಛೆಯ ಪರಿಣಾಮವಾಗಿದೆ. ಆ ಸಿದ್ಧಾಂತವು ಈ ಸಾಮಾನ್ಯ ಪ್ರಯತ್ನಕ್ಕೂ ಅನ್ವಯವಾಗುತ್ತದೆ. ಅದು ಈ ಪುಸ್ತಕ ರೂಪದಲ್ಲಿ ವಾಚಕರ ಮುಂದಿದೆ. ಈ ಪುಸ್ತಕವನ್ನು ಪ್ರಶ್ನೋತರ ರೀತಿಯಲ್ಲಿ ಬರೆಯಲಾಗಿದೆ. ಸಂಕ್ಷಿಪ್ತತೆ ಇದರ ವೈಶಿಷ್ಟ್ಯವಾಗಿದೆ. ಈ ಚಿಂತನೆಯಿಂದ ಪ್ರೇರಿತರಾಗುವವರು ಸತ್ಯವನ್ನು ಜನಸಾಮಾನ್ಯರ ಮುಂದೆ ನಿಚ್ಚಳವಾಗಿ ಸಮರ್ಪಿಸುವಂತಾಗಬೇಕು. ವಿಷಯದ ಪರಿಚಯವು ಸರಳವಾಗಿ ಆಗಬೇಕೆಂಬ ಉದ್ದೇಶದಿಂದ ಉದ್ಧರಣೆಗಳಿಗೆ ಇದರಲ್ಲಿ ಸ್ಥಾನ ನೀಡಿಲ್ಲ. ಏಕೆಂದರೆ ವಾಚಕರು ತಮ್ಮ ಸಾಮಾನ್ಯ ಜ್ಞಾನದ ಆಧಾರದಲ್ಲಿಯೇ ಸ್ವತಃ ತೀರ್ಮಾನಿಸಬೇಕು ಮತ್ತು ಅವರಿಗೆ ಯಾವುದೇ ರೀತಿಯ ಮಾನಸಿಕ ಒತ್ತಡ ಅಥವಾ ಗೊಂದಲವಾಗಬಾರದು.

ವೃದ್ಧಾಪ್ಯದಲ್ಲಿ ನನ್ನ ಸೇವಾ ನಿವೃತ್ತಿಯ ಬಳಿಕ ನನಗೆ ಆಧ್ಯಾತ್ಮಿಕತೆ ಮತ್ತು ಮಾನಸಿಕ ಶಾಂತಿಯ ತೀವ್ರ ಅಗತ್ಯ ಮನವರಿಕೆಯಾಯಿತು. ಆ ಸಂದರ್ಭದಲ್ಲಿ ನನಗೆ ನನ್ನ ಧರ್ಮ ಮತ್ತು ಇತರ ಧರ್ಮಗಳಿಂದ ಸಹಕಾರ ಪಡೆಯಬೇಕಾಯಿತು. ತುಲನಾತ್ಮಕ ವಿಶ್ಲೇಷಣೆ ಮತ್ತು ಅಧ್ಯಯನದ ಆಧಾರದಲ್ಲಿ ನಾನು ಇಸ್ಲಾಮನ್ನು ಮಾನವರ ಎಲ್ಲ ಸಮಸ್ಯೆಗಳ ಮೂಲಾಧಾರ ಮತ್ತು ಅದರ ಏಕೈಕ ಪರಿಹಾರವಾಗಿ ಮನಗಂಡಿದ್ದೇನೆ. ಈ ಸಮಸ್ಯೆಗಳು ವೈಯಕ್ತಿಕ, ಕೌಟುಂಬಿಕ, ರಾಜಕೀಯ, ನೈತಿಕ, ಧಾರ್ಮಿಕ, ಮನೋವೈಜ್ಞಾನಿಕ, ಆರ್ಥಿಕ, ರಾಷ್ಟ್ರೀಯ, ಅಂತಾರಾಷ್ಟ್ರೀಯ, ಐಹಿಕ ಅಥವಾ ಲೌಕಿಕವಾಗಿರಬಹುದು- ಒಟ್ಟಿನಲ್ಲಿ ಈ ಎಲ್ಲ ಮಾನವ ಸಮಸ್ಯೆಗಳೆಂಬ ಬೀಗಗಳಿಗೆ ಇಸ್ಲಾಮ್ ಪ್ರಧಾನ ಕೀಲಿಕೈ(Master key) ಆಗಿದೆ.

ಇಸ್ಲಾಮಿನ ಸಮಗ್ರತೆ, ಶಕ್ತಿ, ಸರಳತೆ, ವಿಶಾಲತೆ ಮತ್ತು ಪ್ರಾಮಾಣಿಕತೆಗಳು ಶಾಶ್ವತವಾಗಿವೆ. ಏಕದೇವವಾದವು ನಿಷ್ಕಳಂಕವಾಗಿದೆ. ಹಾಗೆಯೇ ಇಸ್ಲಾಮಿನ ಪ್ರವಾದಿ ಹಝ್ರತ್ ಮುಹಮ್ಮದರ ವ್ಯಕ್ತಿತ್ವವು ಅಪ್ರತಿಮ ಮತ್ತು ಪರಿಪೂರ್ಣವಾಗಿದೆ. ಒಂದು ವೇಳೆ ಯಾವನಾದರೂ ಇಸ್ಲಾಮನ್ನು ಸಹೃದಯದಿಂದ ನಿಷ್ಪಕ್ಷವಾಗಿ ತಿಳಿಯುವ ಪ್ರಯತ್ನ ಮಾಡಿದರೆ ನಿಶ್ಚಯವಾಗಿಯೂ ಆತನು ಇಸ್ಲಾಮ್ ಸ್ವಯಂ ಸಿದ್ಧ ಸತ್ಯವೆಂಬ ನಿರ್ಧಾರಕ್ಕೆ ತಲುಪದಿರಲಾರನು.

ಇಸ್ಲಾಮಿಗಿಂತ ಪೂರ್ವದಲ್ಲಿ ಅರಬಸ್ಥಾನವು ಸಂಪೂರ್ಣ ಪಾಪಗ್ರಸ್ತವಾಗಿತ್ತು. ಹಝ್ರತ್ ಮುಹಮ್ಮದ್‌ರು ಆ ಅರಬರನ್ನು ಅತ್ಯಲ್ಪ ಕಾಲದಲ್ಲಿ ಇಸ್ಲಾಮಿ ಶಿಕ್ಷಣದ ಮೂಲಕ ಸಮಗ್ರವಾಗಿ ಧಾರ್ಮಿಕ ಮತ್ತು ಮಾನವೀಯತೆಯ ಮಾದರಿಯನ್ನಾಗಿ ಮಾಡಿದರು. ಕಾಮುಕ, ಕೋಪಿಷ್ಠ, ಲೋಭಿ, ವ್ಯಭಿಚಾರಿ, ಜೂಜುಕೋರ, ಜಗಳಗಂಟ, ಕುಡುಕ, ಕ್ರೂರಿ, ದರೋಡೆಕೋರ ಮತ್ತು ಅಂಧವಿಶ್ವಾಸಿಗಳಿಂದ ತುಂಬಿದ ಆ ಜನಾಂಗದ ಹೊಸಪೀಳಿಗೆಯ

ಮನಪರಿವರ್ತನೆ ಮಾಡಿದಂತಹ ಅದ್ಭುತ ಉದಾಹರಣೆ ಇತಿಹಾಸದಲ್ಲಿ ಬೇರೊಂದಿಲ್ಲ.[1] ಅರೇಬಿಯಾದಲ್ಲಿ ಸಾಮೂಹಿಕವಾಗಿದ್ದ ಸುದೀರ್ಘ ಕಾಲದ ಅಪರಾಧೀ ಸ್ವರೂಪದ ರೋಗವು 'ಇಸ್ಲಾಮ್' ಎಂಬ ಔಷಧಿಯಿಂದ ಅಲ್ಪಾವಧಿಯಲ್ಲಿ ಗುಣಮುಖವಾಯಿತು. ಆದ್ದರಿಂದ ಆ ಔಷಧಿಯು ಐತಿಹಾಸಿಕ ಪುರಾವೆಯ ಆಧಾರದಲ್ಲಿ, ಅಂತಹ ರೋಗಗಳಿಂದ ಬಳಲುವ ಯಾವುದೇ ಮಾನವ ಸಮೂಹಕ್ಕೂ ಒಂದು ಪ್ರಾಮಾಣಿಕ ಮತ್ತು ಅಪ್ಪಟ ಔಷಧದ ಮಾನ್ಯತೆ ಪಡೆದಿದೆ.

[1]ಭಾರತದಲ್ಲಿ ಆಗಮಿಸಿದ್ದ ಶ್ರೀರಾಮಚಂದ್ರ, ಶ್ರೀಕೃಷ್ಣ ಮತ್ತು ಮಹಾತ್ಮ ಬುದ್ಧ ಮುಂತಾದ ಮಹಾಪುರುಷರೆಲ್ಲರೂ ವಿದ್ವಾಂಸರು ಮತ್ತು ರಾಜ ಕುಟುಂಬದವರಾಗಿದ್ದರೆಂಬುದು ಸ್ಮರಣೀಯ. ದೇಶದ ನಿವಾಸಿಗಳಲ್ಲಿಯೂ ಮಹಾ ವಿದ್ವಾಂಸರು ಮತ್ತು ದಾರ್ಶನಿಕರಿದ್ದರು. ಶ್ರೀರಾಮಚಂದ್ರನ ತಂದೆ ದಶರಥ ಮಹಾರಾಜನ ಸಾಮ್ರಾಜ್ಯವು ಆದರ್ಶಮಯವಾಗಿತ್ತು. ಶ್ರೀಕೃಷ್ಣನ ಮಾವ ದುಷ್ಟನಾಗಿದ್ದ. ಕೌರವ ಮತ್ತು ಪಾಂಡವರ ವಿವಾದವು ಕೌಟುಂಬಿಕವಾಗಿತ್ತು. ಇದರ ಹೊರತಾಗಿ ದೇಶದಲ್ಲಿ ಇತರ ಯಾವುದೇ ಅಧರ್ಮ ನಡೆದಿರುವುದರ ಉಲ್ಲೇಖವಿಲ್ಲ. ಬುದ್ಧನೂ ದೇಶದಲ್ಲಿ ವ್ಯಾಪಿಸಿದ್ದ ಅಧರ್ಮದ ವಿರುದ್ಧ ಹೋರಾಡಿರಲಿಲ್ಲ. ವೃದ್ಧಾಪ್ಯ ಮತ್ತು ಹೆಣವನ್ನು ನೋಡಿ ಪ್ರಭಾವಿತನಾಗಿ ಜಗತ್ತಿನಿಂದ ವಿರಕ್ತನಾಗಿದ್ದನು.

ಸರ್ವಾದರಣೀಯ ಮುಹಮ್ಮದ್‌ರ(ಸ) ಇಡೀ ದೇಶವೇ ಗೋತ್ರಗಳಲ್ಲಿ ಹರಿ ಹಂಚಾಗಿತ್ತು. ಅಲ್ಲಿ ಯಾವ ಕಾನೂನು ವ್ಯವಸ್ಥೆಯೂ ಇರಲಿಲ್ಲ. ದೇಶದಾದ್ಯಂತ ಕೆಡುಕುಗಳು ವ್ಯಾಪಿಸಿದ್ದುವು. ಮದ್ಯಪಾನ, ವ್ಯಭಿಚಾರ, ಅತ್ಯಾಚಾರ, ದರೋಡೆ, ಲೂಟಿ ಇತ್ಯಾದಿ ಎಲ್ಲ ರೀತಿಯ ಕೆಡುಕುಗಳೂ ಸಾರ್ವತ್ರಿಕವಾಗಿತ್ತು. ಯಹೂದಿ ಮತ್ತು ಕ್ರೈಸ್ತರೂ ಧರ್ಮಭ್ರಷ್ಟ ಮತ್ತು ಕರ್ಮಭ್ರಷ್ಟರಾಗಿದ್ದರು. ಬಹುದೇವತ್ವವು ಇಡೀ ದೇಶದಲ್ಲಿ ರೂಢಿಯಲ್ಲಿತ್ತು. ಅವಿದ್ಯಾವಂತರಾಗಿದ್ದ ಪ್ರವಾದಿಯ ಗೋತ್ರದವರು ಬಹುದೇವಾರಾಧಕರ ಧಾರ್ಮಿಕ ಮುಖಂಡರಾಗಿದ್ದರು. ಬಹುದೇವಾರಾಧಕರ ಕೇಂದ್ರವಾಗಿದ್ದ ಮಕ್ಕಾದಲ್ಲಿ ಬೆರಳೆಣಿಕೆಯಷ್ಟು ಮಂದಿ ಮಾತ್ರ ಓದು ಬರಹ ಬಲ್ಲವರಾಗಿದ್ದರು. ಜನರೆಲ್ಲರೂ ಅವಿದ್ಯಾವಂತರಾಗಿರುವ ಸ್ಥಿತಿಯಲ್ಲಿ ಪಾಠ ಶಾಲೆ ಎಲ್ಲಿದ್ದೀತು? ಕಲಿಸುವವರು ಯಾರು? ಪ್ರವಾದಿಯವರೂ(ಸ) ಅನಕ್ಷರಸ್ಥರಾಗಿಯೇ ಉಳಿದರು. ಮಕ್ಕಾ ನಿವಾಸಿಗಳ ಬಳಿ ನಾಲ್ಕಾರು ಪುಟಗಳ ಧಾರ್ಮಿಕ ಪುಸ್ತಕವೂ ಇರಲಿಲ್ಲ ಅಥವಾ ಅವರ ದೇವ ದೇವತೆಗಳ ಕಥೆಗಳೂ ಇರಲಿಲ್ಲ. ಎಲ್ಲವೂ ಕೇವಲ ಕಪೋಲ ಕಲ್ಪಿತವಾಗಿದ್ದುವು. ಅದರಲ್ಲಿಯೂ ಅರಬ್ ಜನಾಂಗದಲ್ಲಿದ್ದಂತಹ ದುಷ್ಕರ್ಮಗಳ ಕಥೆಗಳೇ ತುಂಬಿದ್ದುವು.

ಅಂದು ಜಗತ್ತಿನಲ್ಲೆಲ್ಲೂ ಸತ್ಯಧರ್ಮ ಸ್ಥಾಪನೆ ಗೊಂಡಿರಲಿಲ್ಲ. ಅಂತಹ ದೇಶ, ಜನಾಂಗ ಹಾಗೂ ಜಗತ್ತನ್ನು ಏಕದೇವವಾದಿಯಾದ ಸತ್ಯಧರ್ಮದಿಂದ ಉದ್ಧರಿಸುವುದಕ್ಕಾಗಿ ಮತ್ತು ಆಚಾರ ವಿಚಾರಗಳ ಶುದ್ಧೀಕರಣಕ್ಕಾಗಿ ದೇವನು ಮಹಾತ್ಮರಾದ ಮುಹಮ್ಮದ್‌ರನ್ನು(ಸ) ಒಂಟಿಯಾಗಿ ಎಬ್ಬಿಸಿದನು. ಅವರ ಉಪದೇಶ ಮತ್ತು ಆದೇಶಗಳಿಂದ ಏಕದೇವವಾದಿ ಸಮೂಹವು ಸ್ಥಾಪನೆಯಾಯಿತು. 23 ವರ್ಷಗಳ ನಿರಂತರ ಪರಿಶ್ರಮದ ಫಲವಾಗಿ ಸಂಪೂರ್ಣ ಮತ್ತು ಸಮಗ್ರ ಕ್ರಾಂತಿಯಾಗಿ ದೈವಿಕ ಧರ್ಮ ಸ್ಥಾಪನೆಯಾಯಿತು. ಒಂದು ಪರಿಶುದ್ಧ ಆಚಾರ ಮತ್ತು ಸಂಸ್ಕೃತಿಯು ಬೆಳೆಯಿತು. ಹಾಗೆಯೇ ಒಂದು ಸುದೃಢವಾದ ಕಾನೂನು ವ್ಯವಸ್ಥೆ ಅಸ್ತಿತ್ವಕ್ಕೆ ಬಂತು. ಇಂತಹ ಕ್ರಾಂತಿಯ ಉದಾಹರಣೆಯು ಮಾನವೇತಿಹಾಸದಲ್ಲಿ ಬೇರೊಂದು ದೊರೆಯಲಾರದು.

ಪ್ರಾಯಶಃ ಇಂದು ಇಡೀ ಜಗತ್ತು ಹೆಚ್ಚು ಕಡಿಮೆ ಅಂತಹ ರೋಗಗಳಿಂದಲೇ ತುಂಬಿದೆ. ಅದೇ ವೇಳೆ ಭಾರತದಲ್ಲಿ ಈ ರೋಗವು ಮಹಾಮಾರಿಯ ರೂಪ ತಾಳುತ್ತಿದೆ. ಅದಕ್ಕೆ ಈ ದೇವದತ್ತ ಔಷಧಿಯ ಪ್ರಯೋಗವು ಅನಿವಾರ್ಯ ಆವಶ್ಯಕತೆಯಾಗಿದೆ. ಭಾರತೀಯ ಉಪ ಭೂಖಂಡವು ಮಂತ್ರಿಯಿಂದ ಹಿಡಿದು ಪೇದೆಯವರೆಗೆ, ಹಾಗೆಯೇ ಪೇಟೆಯಿಂದ ಕಚೇರಿಯ ವರೆಗೆ ಭ್ರಷ್ಟಾಚಾರದಲ್ಲಿ ಮುಳುಗಿದೆ. ಕೆಲವು ಅಪವಾದಗಳಿರ ಬಹುದಾದರೂ ಇಡೀ ರಾಷ್ಟ್ರವೇ ಅಪರಾಧೀಕರಣಗೊಳ್ಳುವ ಭೀತಿಯಿದೆ.

ಇಸ್ಲಾಮ್ ಇತರ ಯಾವುದೇ ಧರ್ಮವನ್ನು ದ್ವೇಷಿಸುವುದಿಲ್ಲ. ಅದು ಪ್ರವಾದಿ ಮುಹಮ್ಮದ್‌ರಿಗಿಂತ ಮುಂಚಿನ ಎಲ್ಲ ಪ್ರವಾದಿ(ದೇವ ಸಂದೇಶವಾಹಕರು)ಗಳನ್ನೂ ಗೌರವಿಸುತ್ತದೆ. ಮುಹಮ್ಮದ್‌ರು ಅಂತಿಮ ದೇವ ಪ್ರವಾದಿಯೆಂದು ಅದು ಅಂಗೀಕರಿಸಿದೆ. ಅವರಿಗಿಂತ ಮುಂಚಿನ ಇತರ ದೇವ ಸಂದೇಶವಾಹಕರ ಮೂಲಕ ಅವತೀರ್ಣಗೊಂಡ ದೈವಿಕ ನಿರ್ದೇಶನಗಳಲ್ಲಿ ಸ್ವಾರ್ಥಿಗಳಿಂದ ಅಥವಾ ಕಾಲಾಂತರಗಳಿಂದ ಅನೇಕ ಸೇರ್ಪಡೆಗಳಾದುವು. ಅದರಿಂದಾಗಿ ಮಾನವರು ಸನ್ಮಾರ್ಗದಿಂದ ದೂರವಾದರು. ಈ ಹಿನ್ನೆಲೆಯಲ್ಲಿ ಅವರಿಗೆ ಕುರ್‌ಆನನ್ನು ದೇವ ನಿರ್ದೇಶನಗಳ ರೂಪದಲ್ಲಿ ಅಂತಿಮ ಪರಿಹಾರ ಮತ್ತು ಯಾವುದೇ ತಿದ್ದುಪಡಿಗೆ ಆಸ್ಪದವಿಲ್ಲದ ನಿಯಮವಾಗಿ ನೀಡಲಾಯಿತು. ರಾಮ, ಕೃಷ್ಣ, ಬುದ್ಧ, ಮೂಸಾ ಮತ್ತು ಈಸಾ ಮುಂತಾದವರ ಬಳಿಕ ಮುಹಮ್ಮದ್‌ರ ಆಗಮನವು ದೇವೇಚ್ಛೆಯಿಂದ ಮಾನವ ಕಲ್ಯಾಣದ ಬೇಡಿಕೆಯನ್ನು ಈಡೇರಿಸುವ ಹೇತುವಾಯಿತೆನ್ನುವುದು ವಾಸ್ತವಿಕತೆಯಾಗಿದೆ.

"ದೇವನೊಬ್ಬನೇ" ಮತ್ತು "ಮುಹಮ್ಮದ್‌ರು ಆತನ ಅಂತಿಮ ಸಂದೇಶವಾಹಕರು" ಎಂಬುದು ಇಸ್ಲಾಮಿನ ಮೂಲ ಮಂತ್ರವಾಗಿದೆ. ವೇದವು ಐತಿಹಾಸಿಕ ದೃಷ್ಟಿಯಲ್ಲಿ ಪ್ರಾಚೀನ ಕಾಲದ ಗ್ರಂಥವಾಗಿದೆ. ಹಿಂದುಗಳ ನಂಬಿಕೆಯಂತೆ ಅದು ದೇವದತ್ತವಾಗಿದೆ. ವೇದದ ಪ್ರಕಾರ ದೇವನ ಏಕತ್ವವು ದೃಢ ಪಟ್ಟಿದೆ. ಅದರಲ್ಲಿ ಸ್ಪಷ್ಟವಾಗಿ ಘೋಷಿಸಲಾಗಿರುವ "ಏಕಮೇವಾದ್ವಿತಿಯೋ ನಾಸ್ತಿ" ಎನ್ನುವುದರ ಅರ್ಥವು ದೇವನು ಏಕನು, ಬೇರೆ ಯಾರೂ ಇಲ್ಲವೆಂದಾಗಿದೆ. ಇತರ ಆಸ್ತಿಕ ಧರ್ಮಗಳು ಕೂಡ ದೇವನೊಬ್ಬನೆಂಬುದನ್ನು ನಂಬುತ್ತದೆ. ಆದರೆ ಕಾಲಕ್ರಮೇಣ ಅವುಗಳ ಏಕದೇವವಾದವು ನಿಷ್ಕಳಂಕವಾಗಿ ಉಳಿಯಲಿಲ್ಲ. ಆದ್ದರಿಂದ ಇಸ್ಲಾಮಿನ ಸಾಕ್ಷ್ಯವಚನದ (ಕಲಿಮಾ) ಪ್ರಥಮ ಅಂಶವಾಗಿರುವ ಏಕದೇವತ್ವವು ಸುಪರಿಚಿತವಾಗಿದೆ. ಕಲಿಮಾದ ಎರಡನೆಯ ಅಂಶವು ಮುಹಮ್ಮದ್‌ರು "ದೇವನ ಅಂತಿಮ ಸಂದೇಶವಾಹಕರು" ಎಂದಾಗಿದೆ. ಇದು ಕೂಡ ಸ್ವಯಂ ದೃಢೀಕೃತ ಸತ್ಯವಾಗಿದೆ. ಇದಕ್ಕೆ ಪುರಾವೆಯ ಅಗತ್ಯವಿದೆಯೇ? "ಪ್ರತ್ಯಕ್ಷ ಕಿಮು ಪ್ರಮಾಣಮು" ಎಂದು ಹೇಳಲಾಗಿದೆ. ಅರ್ಥಾತ್ ಪ್ರತ್ಯಕ್ಷವಾಗಿರುವುದಕ್ಕೆ ಯಾವ ಪುರಾವೆಯ ಅಗತ್ಯವೂ ಇಲ್ಲ. ಗಣಿತ ಮತ್ತು ವಿಜ್ಞಾನದಲ್ಲಿ ಚುಕ್ಕೆಗೆ ಸಂಬಂಧಿಸಿದ ವ್ಯಾಖ್ಯಾನದಲ್ಲಿ ಚುಕ್ಕೆ(Point)ಗೆ ಮಾಪಕವಿಲ್ಲವೆಂದು ಹೇಳಲಾಗಿದೆ. ಅದರ ಪುರಾವೆಯು ಸ್ವಯಂ ಖಚಿತ (Axiom)ಗೊಂಡಿದೆಯೆಂದು ಹೇಳಲಾಗುತ್ತದೆ. ಹಾಗೆಯೇ ಅದೇ ಸತ್ಯವು ಮುಹಮ್ಮದ್‌ರು ಅಂತಿಮ ಸಂದೇಶವಾಹಕರೆಂಬುದಕ್ಕೂ ಅನ್ವಯವಾಗುತ್ತದೆ.[2]

[2]ಈಗ ವೈದಿಕ ಋಷಿಗಳ ಭವಿಷ್ಯವಾಣಿ ಮತ್ತು ಬುದ್ಧನ ವಚನಗಳಿಂದ ಸನ್ಮಾನ್ಯ

ಪ್ರವಾದಿ ಮುಹಮ್ಮದ್‌ರಂತೆ ಓರ್ವ ಧರ್ಮ ಪ್ರಚಾರಕನೆಂಬ ನೆಲೆಯಲ್ಲಿ ಇಷ್ಟೊಂದು ಅಪಾರ ಅನುಯಾಯಿಗಳನ್ನು ಮತ್ತು ಅನಂತ ಮನ್ನಣೆ ಪಡೆದ ಯಾರೊಬ್ಬರೂ ಜಗತ್ತಿನಲ್ಲಿ ಆಗಿಲ್ಲ ಮತ್ತು ಈಗಲೂ ಇಲ್ಲವೆಂಬ ಸತ್ಯವನ್ನು ಓರ್ವ ಮುಸ್ಲಿಮೇತರನೂ ತನ್ನ ಸಾಮಾನ್ಯ ಬುದ್ಧಿಯಿಂದಲೇ ಪ್ರಾಮಾಣಿಕವಾಗಿ ಒಪ್ಪಬಹುದು. ಒಂದು ವೇಳೆ ಯಾವನಾದರೂ ಭವಿಷ್ಯ ದಲ್ಲಿ ಇಸ್ಲಾಮಿನ ಸಮಾನಾಂತರ ಜನಸಂಖ್ಯೆ ಮತ್ತು ನಂಬಿಕೆಯ ದೃಷ್ಟಿಯಿಂದ ಯಾವುದೇ ವಿಶ್ವವ್ಯಾಪೀ ಧರ್ಮವು ಸಂಭವನೀಯವೆಂದು ಹೇಳುವುದಿದ್ದರೆ ಆತನನ್ನು ತಿಳಿಗೇಡಿ ಎಂದೇ ಹೇಳಬೇಕಾದೀತು. ರೇಖಾಗಣಿತದಲ್ಲಿ ಯಾವುದೇ ಸೂತ್ರ(Theorem)ವನ್ನು ಸಾಧಿಸುವ ಪ್ರಕ್ರಿಯೆಯ ಕೊನೆಯಲ್ಲಿ Q.E.D. ಎಂದು ಬರೆಯಲಾಗುತ್ತದೆ. ಯಾವುದು ಸಾಧಿಸ ಬೇಕಾಗಿತ್ತೋ ಅದು ಸಿದ್ಧಿಸಿದೆಯೆಂಬುದೇ ಅದರ ಅರ್ಥ. ಅದೇ ಪ್ರಕಾರ 'ಲಾ ಇಲಾಹ ಇಲ್ಲಲ್ಲಾಹು ಮುಹಮ್ಮದುರ್ರಸೂಲುಲ್ಲಾಹ್' ಎಂಬ ಸಾಕ್ಷ್ಯ ವಚನವೂ ಸಾಧಿಸಲ್ಪಟ್ಟಿದೆ.

ಮುಹಮ್ಮದ್‌ರು(ಸ) ಅಂತಿಮ ಸಂದೇಶವಾಹಕರೆಂಬುದು ರುಜುವಾತುಗೊಂಡಿದೆ. ಈ ವಿಷಯದ ಹೆಚ್ಚಿನ ಮಾಹಿತಿಗಾಗಿ ಡಾ| ವೇದ ಪ್ರಕಾಶ್ ಉಪಾಧ್ಯಾಯ ಎಂ.ಎ. (ಸಂಸ್ಕೃತ ವೇದ), ಡಿ.ಫಿಲ್. (ಧರ್ಮಶಾಸ್ತ್ರಾಚಾರ್ಯ), ಡಿಪ್.ಇನ್. ಜರ್ಮನ್ ಅವರ ಪುಸ್ತಕ ಮತ್ತು ನಾನು ಬರೆದಿರುವ ಅದರ ವ್ಯಾಖ್ಯಾನ 'ವೇದೋಂಕೆ ಅಂತಿಮ್ ಋಷಿ ನರಾಶಂಸ್' ಮತ್ತು 'ಕುರ್‌ಆನ್ ಕೆ ಅಂತಿಮ್ ಈಶ್‌ದೂತ್ ಮುಹಮ್ಮದ್' ಎಂಬ ಪುಸ್ತಕಗಳನ್ನು ನೋಡಬಹುದು.

ವೇದಪ್ರಕಾಶರು ತಮ್ಮ ಪುಸ್ತಕದ ಪೀಠಿಕೆಯಲ್ಲಿ ಹೀಗೆ ಬರೆದಿದ್ದಾರೆ:

"ಐತಿಹಾಸಿಕ ವಿಷಯಗಳ ಕುರಿತು ಸಂಶೋಧನೆ ನಡೆಸುವ ನನ್ನ ತೀವ್ರ ಹಂಬಲವು ದೇವದತ್ತವಾಗಿದೆ. ವೇದ, ಬೈಬಲ್ ಹಾಗೂ ಬೌದ್ಧ ಗ್ರಂಥಗಳಲ್ಲಿರುವ ಓರ್ವ ಋಷಿಯ ಆಗಮನದ ಬಗೆಗಿನ ಭವಿಷ್ಯವಾಣಿಯು ಮುಹಮ್ಮದ್‌ರಿಗೆ ಸರಿ ಹೊಂದುತ್ತದೆ. ಆದ್ದರಿಂದ ಈ ಸತ್ಯವನ್ನು ಅನಾವರಣಗೊಳಿಸುವುದು ಆವಶ್ಯಕವೆಂದು ನನ್ನ ಅಂತರಾತ್ಮ ಪ್ರೇರೇಪಿಸಿತು. ಇದು ಜನರಿಗೆ ಕೆಟ್ಟದೆನಿಸಲೂ ಬಹುದು."

"ನಾನು ಧರ್ಮದಲ್ಲಿ ಸಂಕುಚಿತ ಭಾವನೆಯ ಪಕ್ಷಪಾತಿಯಲ್ಲ. ಯಾವುದೇ ಮಾತು ಎಲ್ಲಿಯಾದರೂ ಒಂದು ವೇಳೆ ಸಮರ್ಥ ಮತ್ತು ಉಪಯುಕ್ತವಾಗಿ ಹೇಳಲಾಗಿದ್ದರೆ ನಾನು ಅದನ್ನು ತಿರಸ್ಕರಿಸುವ ಸಾಹಸಕ್ಕೆ ಕೈ ಹಾಕುವುದಿಲ್ಲ. ವೇದಗಳಲ್ಲಿ ಹನ್ನೆರಡು ಪತ್ನಿಯರಿರುವ ಓರ್ವ ಉಷ್ಟ್ರಾರೋಹಿ(ಒಂಟೆಯಲ್ಲಿ ಕುಳಿತ) ವ್ಯಕ್ತಿಯು ಆಗಮಿಸಲಿರುವ ಭವಿಷ್ಯವಾಣಿಯಿದೆ. ಅವರ ಹೆಸರು 'ನರಾಶಂಸ್' ಎಂದಿದೆ. ಸಾಯಣನು 'ನರಾಶಂಸ್' ಎಂಬ ಪದವನ್ನು 'ಮಾನವರಿಂದ ಪ್ರಶಂಸಿಸಲ್ಪಡುವವನು' ಎಂದು ಅರ್ಥೈಸಿದ್ದಾರೆ. ಈ ಬಗ್ಗೆ ನನಗೆ ಸಾಯಣರೊಂದಿಗೆ ಸಹಮತವಿಲ್ಲ. 'ನರಾಶಂಸ್' ಎಂಬ ಪದವು ಪ್ರಶಂಸಿಸಲ್ಪಟ್ಟ 'ನರ' ಅರ್ಥಾತ್ ವ್ಯಕ್ತಿಯ ಸೂಚಕವಾಗಿದೆ. ಹೀಗೆ ಮುಹಮ್ಮದ್ ಎಂಬ ಪದವು 'ನರಾಶಂಸ್'ನ ಅರಬಿ ಅನುವಾದವಾಗಿದೆ.

'ಮುಹಮ್ಮದ್' ಪದದ ಅರ್ಥವು ವೇದ ಪ್ರಕಾಶರು ನೀಡಿರುವುದೇ ಆಗಿದೆ. ಸಾಯಣಾಚಾರ್ಯರ ಅರ್ಥವನ್ನು ತೆಗೆದು ಕೊಂಡರೂ ಅದು ಕೂಡಾ ಸನ್ಮಾನ್ಯ ಮುಹಮ್ಮದ್‌ರಿಗೆ(ಸ) ಸಂಪೂರ್ಣವಾಗಿ ಅನ್ವಯವಾಗುತ್ತದೆ. ಏಕೆಂದರೆ ಜಗತ್ತಿನಲ್ಲಿ ಮುಹಮ್ಮದ್‌ರ ಪ್ರಶಂಸೆಯು ಆ ರೀತಿಯಲ್ಲಿಯೇ ನಡೆಯುತ್ತಿದೆ. ಇತರ ಯಾವನೇ ವ್ಯಕ್ತಿಯನ್ನು ಆ ರೀತಿ ಪ್ರಶಂಸಿಸಲಾಗಿಲ್ಲ ಅಥವಾ ಪ್ರಶಂಸಿಸಲ್ಪಡುತ್ತಿಲ್ಲ.

ಇಸ್ಲಾಮಿನ ಪರವಾಗಿ ನೀಡಲಾದ ಈ ಸಮರ್ಥನೆಯ ಬಗ್ಗೆ ಮುಸ್ಲಿಮೇತರರಿಗೆ ಮುಜುಗರವಾಗಬೇಕಾಗಿಲ್ಲ. ಹಗಲನ್ನು ಹಗಲೆಂದೂ ರಾತ್ರಿಯನ್ನು ರಾತ್ರಿಯೆಂದೂ ಕರೆಯುವುದೇ ಸೂಕ್ತವಾಗಿದೆ. ನನ್ನ ಸಂಗಾತಿ ಮತ್ತು ಸಹಧರ್ಮೀಯರಾದ ಹಿಂದೂಗಳಲ್ಲಿ ನಾನು ವಿಶೇಷವಾಗಿ ವಿನಂತಿಸುವುದೇನೆಂದರೆ, ನೀವು ನನ್ನ ಈ ನಿಷ್ಕರ್ಷೆಯನ್ನು ನಿಮ್ಮ ಚಿರಪರಿಚಿತ ಸಹಿಷ್ಣುತೆ ಮತ್ತು ವಿಚಾರ ಸ್ವಾತಂತ್ರ್ಯದ ಆಧಾರದಲ್ಲಿ ಪರಿಶೀಲಿಸಬೇಕು. ಹಾಗೆಯೇ ಇಸ್ಲಾಮ್ ಮತ್ತು ಮುಹಮ್ಮದ್‌ರನ್ನು ನಿಷ್ಪಕ್ಷವಾಗಿ ಅರಿತುಕೊಳ್ಳಲು ಪ್ರಯತ್ನಿಸಬೇಕು. ಅವರ ಕುರಿತು ನಿಮ್ಮ ನಿರಾಧಾರ ಸಂಶಯಗಳನ್ನು ನಿವಾರಿಸಿಕೊಳ್ಳಬೇಕು. ಹಾಗೆ ಮಾಡುವುದರಿಂದ ನಿಮ್ಮ ವಿಚಾರ ಸ್ವಾತಂತ್ರ್ಯದ ಸಿದ್ಧಾಂತವನ್ನು ಯಶಸ್ವಿಯಾಗಿ ಗೌರವಿಸಿದಂತಾಗುವುದು. ನಿಮ್ಮ ಧರ್ಮದಲ್ಲಿ ಸರ್ಪ, ಅರಳಿಮರ ಇತ್ಯಾದಿಗಳನ್ನು ಆರಾಧಿಸುವುದರಿಂದ ನಿಮ್ಮ ಸಹಿಷ್ಣುತೆ ಅಭಿವ್ಯಕ್ತವಾಗುವುದಿಲ್ಲ. ಅಂತೆಯೇ ಮಾಂಸ, ಮದಿರೆ, ಮತ್ಸ್ಯ, ಮೈಥುನ ಮತ್ತು ಮುದ್ರೆಗಳ ಸಿದ್ಧಾಂತದ ಅನುಯಾಯಿಗಳಿಗೆ ಧಾರ್ಮಿಕ ಮಾನ್ಯತೆ ನೀಡುವುದರಿಂದ ವಿಚಾರ ಸ್ವಾತಂತ್ರ್ಯವು ಶ್ಲಾಘನೀಯವಾಗುವುದಿಲ್ಲ. ನಾವು ಜಗತ್ತಿನ ಸರ್ವಶ್ರೇಷ್ಠ ದೇವಸಂದೇಶವಾಹಕ ಮತ್ತು ಆಧ್ಯಾತ್ಮಿಕ ಸುಧಾರಕ ಹಾಗೂ ಮಾನವಕುಲದ ಮಹೋನ್ನತ ಉಪಕಾರಿ ಹಝ್ರತ್

ಮಹಾತ್ಮ ಬುದ್ಧನ ಸೂಚನೆಯ ವಿಷಯದಲ್ಲಿ ವೇದಪ್ರಕಾಶರು ಹೀಗೆ ಬರೆದಿದ್ದಾರೆ: "ಋಷಿಯನ್ನು ಬೌದ್ಧ ಧರ್ಮದ ಭಾಷೆಯಲ್ಲಿ ಬುದ್ಧನೆಂದು ಕರೆಯಲಾಗುತ್ತದೆ. ಗೌತಮ ಬುದ್ಧನು ತನ್ನ ಮರಣಕಾಲದಲ್ಲಿ ಪ್ರಿಯ ಶಿಷ್ಯನಾಗಿದ್ದ ನಂದಾನೊಂದಿಗೆ ಈ ರೀತಿ ಹೇಳಿದ್ದಾನೆ:

ನಂದಾ! ಈ ಜಗತ್ತಿನಲ್ಲಿ ನಾನು ಮೊದಲ ಅಥವಾ ಕೊನೆಯ ಬುದ್ಧನಲ್ಲ. ಈ ಜಗತ್ತಿನಲ್ಲಿ ಸತ್ಯ ಮತ್ತು ಪರೋಪಕಾರದ ಶಿಕ್ಷಣ ನೀಡುವುದಕ್ಕಾಗಿ ನಿರ್ದಿಷ್ಟ ಕಾಲದಲ್ಲಿ ಇನ್ನೋರ್ವ ಬುದ್ಧ ಬರಲಿದ್ದಾನೆ. ಅವನು ಪವಿತ್ರ ಅಂತಃಕರಣದವನಾಗಿರುತ್ತಾನೆ. ಅವನ ಹೃದಯವು ಪರಿಶುದ್ಧವಾಗಿರುವುದು. ಜ್ಞಾನ ಮತ್ತು ಬುದ್ಧಿಯಲ್ಲಿ ಸಂಪನ್ನ ಹಾಗೂ ಸಕಲ ಜನರ ನಾಯಕನಾಗಿರುತ್ತಾನೆ. ಯಾವ ರೀತಿ ನಾನು ಜಗತ್ತಿಗೆ ಅವಶ್ಯಕವಾದ ಸತ್ಯದ ಶಿಕ್ಷಣವನ್ನು ನೀಡಿರುವೆನೋ ಅದೇ ಪ್ರಕಾರ ಅವನೂ ಜಗತ್ತಿಗೆ ಸತ್ಯದ ಶಿಕ್ಷಣ ಕೊಡಲಿದ್ದಾನೆ. ಅವನು ಜಗತ್ತಿಗೆ ಪರಿಶುದ್ಧ ಹಾಗೂ ಸಮಗ್ರವಾದ ಜೀವನ ಮಾರ್ಗವನ್ನು ತೋರಿಸಿಕೊಡುವನು. ನಂದಾ! ಅವನ ಹೆಸರು 'ಮೈತ್ರೇಯ' ಎಂದಾಗಿರುವುದು."

ವೇದ ಪ್ರಕಾಶರು ಸನ್ಮಾನ್ಯ ಮುಹಮ್ಮದ್‌ರ ವಿವಿಧ ಗುಣಗಳು ಮತ್ತು ವೈಶಿಷ್ಟ್ಯಗಳ ಕುರಿತು ಭವಿಷ್ಯವಾಣಿಗಳನ್ನು ಪ್ರಸ್ತುತ ಪಡಿಸಿದ್ದಾರೆ. ಅವೆಲ್ಲವೂ ಮುಹಮ್ಮದ್‌ರಿಗೆ ಅನ್ವಯಿಸುತ್ತದೆಂಬುದು ಬುದ್ಧನು ಮುಹಮ್ಮದ್‌ರನ್ನು ಕಣ್ಣಾರೆ ನೋಡಿರುವಂತೆ, ಮುಹಮ್ಮದ್‌ರಿಗೆ(ಸ) ಸರಿ ಹೊಂದುತ್ತದೆ. ವೇದ ಪ್ರಕಾಶರು ಓರ್ವ ಬೌದ್ಧ ವಿದ್ವಾಂಸರ ಲೇಖನದ ಆಧಾರದಲ್ಲಿಯೇ ಬೌದ್ಧ ಭಾಷೆಯಲ್ಲಿ 'ಮೈತ್ರೇಯ' ಎಂಬ ಪದಕ್ಕೆ 'ದಯೆ' ಎಂಬ ಅರ್ಥವಿದೆಯೆಂದು ಸಾಬೀತು ಪಡಿಸಿದ್ದಾರೆ. ಮುಹಮ್ಮದ್‌ರಿಗೆ 'ರಹ್ಮತ್' ಎಂಬ ಇನ್ನೊಂದು ಗುಣವಾಚಕ ಹೆಸರಿದೆ. ಅದರ ಅರ್ಥವೂ 'ದಯೆ' ಎಂದಾಗಿದೆ. ಕೊನೆಯ ದೇವಗ್ರಂಥವಾಗಿರುವ ಪವಿತ್ರ ಕುರ್‌ಆನಿನ ಒಂದು ವಚನದಲ್ಲಿ **"ವಮಾ ಅರ್ಸಲ್‌ನಾಕ ಇಲ್ಲಾ ರಹ್ಮತನ್ ಲಿಲ್ ಆಲಮೀನ್"** (21:107) ಎಂದು ಮುಹಮ್ಮದ್‌ರ(ಸ) ಕುರಿತು ಹೇಳಲಾಗಿದೆ. ಅರ್ಥಾತ್ ನಾವು ನಿಮ್ಮನ್ನು ಜಗತ್ತಿಗೆ ದಯೆಯಾಗಿ(ಕರುಣಾಳು) ಕಳುಹಿಸಿದೆವು. ವೇದ ಪ್ರಕಾಶರೂ ಅದೇ ವಚನವನ್ನು ಉದ್ಧರಿಸಿದ್ದಾರೆ.

ಮುಹಮ್ಮದ್‌ರಿಗೆ ನಮ್ಮ ಮನಮಸ್ತಿಷ್ಕಗಳಲ್ಲಿ ಸೂಕ್ತಸ್ಥಾನ ನೀಡದಿರುವುದು ಕೃತಘ್ನತೆಯಾಗಿದೆ. ಹಿಂದುಗಳ ಅನೇಕ ಧಾರ್ಮಿಕ ಗ್ರಂಥಗಳಲ್ಲಿ ದೇವತೆ ಮತ್ತು ಅವತಾರ ಪುರುಷರ ಮೂಲಕ ಪಾಪಿಗಳನ್ನು ನಾಶಪಡಿಸಿದ ಘಟನೆಗಳ ಕುರಿತು ಅಭಿಮಾನದಿಂದ ಉಲ್ಲೇಖಿಸಲಾಗಿದೆ. ಆದರೆ ಇತಿಹಾಸ ಪುರುಷರಾದ ಮುಹಮ್ಮದ್‌ರು ಪಾಪಿಗಳನ್ನು ನಾಶಮಾಡದೆ ಅವರ ಪಾಪಗಳನ್ನು ನಾಶಮಾಡಿದರು. ಈ ಪ್ರಕ್ರಿಯೆಯ ಮೂಲಕ ಸಾಮೂಹಿಕವಾಗಿ ಹೃದಯ ಪರಿವರ್ತನೆ ಮಾಡಿ ಅಲ್ಪಸಮಯದಲ್ಲಿ ಪಾಪಿಗಳನ್ನು ಪುಣ್ಯಾತ್ಮರಾಗಿ ಮಾಡಿದರು. ಸಾವಿರಾರು ವರ್ಷಗಳಿಂದ ಹಿಂದೂ ಮತ್ತು ಮುಸ್ಲಿಮರು ಪರಸ್ಪರ ಸಂಪರ್ಕದಲ್ಲಿದ್ದರೂ ಇಸ್ಲಾಮಿನ ಸಾಮಾಜಿಕ ಮತ್ತು ನೈತಿಕ ಮೌಲ್ಯಗಳಿಂದ ಸ್ವಧರ್ಮದ ಉನ್ನತಿ ಮತ್ತು ಶ್ರೇಯೋಭಿವೃದ್ಧಿ ಸಾಧಿಸಲಿಲ್ಲವೆಂಬುದು ಆಶ್ಚರ್ಯವಾಗಿದೆ. ಅದೇ ವೇಳೆ ಇಸ್ಲಾಮ್ ಭಾರತವನ್ನು ಪ್ರವೇಶಿಸುವುದಕ್ಕಿಂತ ಮುಂಚೆ ಅನ್ಯ ಧರ್ಮ ಮತ್ತು ಆಚಾರ ಸಂಸ್ಕೃತಿಗಳೊಂದಿಗೆ ಹಿಂದೂ ಧರ್ಮವು ಪರಿಪೂರ್ಣ ರೀತಿಯಲ್ಲಿ ಸಮನ್ವಯಗೊಂಡಿತ್ತು. ಆದರೆ ಇಸ್ಲಾಮಿನ ಬಗೆಗಿನ ಈ ಔದಾಸೀನ್ಯಕ್ಕೆ ಗೆದ್ದವರು ಮತ್ತು ಸೋತವರು ಎಂಬ ದ್ವೇಷ ಭಾವನೆಯೇ ಮೂಲ ಕಾರಣವಾಗಿದೆ. ಇದರಲ್ಲಿ ಮುಸ್ಲಿಮರ ಹೊಣೆಗಾರಿಕೆಯೂ ಕಡಿಮೆಯೇನಿಲ್ಲ. ಈ ಸುದೀರ್ಘ ಸಂಪರ್ಕದ ಅವಧಿಯಲ್ಲಿ ಮುಸ್ಲಿಮರು ಹೆಚ್ಚಾಗಿ ತಮ್ಮ ರಾಜಕೀಯದ ಪರಿಚಯ ಮಾತ್ರ ಮಾಡಿಸಿದರು. ಹಿಂದುಗಳಿಗೆ ನೈಜ ಇಸ್ಲಾಮಿನ ಪರಿಚಯ ಮಾಡಿಸಲಿಲ್ಲ.

ಭಾರತಕ್ಕೆ ಮುಸ್ಲಿಮರು ಆಗಮಿಸಿದರೇ ವಿನಾ ಇಸ್ಲಾಮ್ ಆಗಮಿಸಲಿಲ್ಲವೆಂಬುದು ಕಟುಸತ್ಯವಾಗಿದೆ.[3] ಮುಸ್ಲಿಮರು ರಾಜಕೀಯಕ್ಕೆ ಪ್ರಥಮ ಸ್ಥಾನವನ್ನೂ ಇಸ್ಲಾಮಿನ ನೈತಿಕತೆ, ಶಿಷ್ಟಾಚಾರ ಮತ್ತು ಸಂಸ್ಕೃತಿಗಳಿಗೆ ಗೌಣಸ್ಥಾನವನ್ನೂ ನೀಡಿದರು. ಏಕೆಂದರೆ ಮುಸ್ಲಿಮರಿಗೆ ಸ್ವಯಂ ತಮ್ಮನ್ನೇ ಇಸ್ಲಾಮೀ ಆದರ್ಶಗಳಿಗೆ ಬದ್ಧವಾಗಿ ರೂಪಿಸಲು ಸಾಧ್ಯವಾಗಿರಲಿಲ್ಲ. ಆದ್ದರಿಂದ ಭಾರತದಲ್ಲಿ ಇಸ್ಲಾಮ್ ಪರಿಪೂರ್ಣ ರೂಪದಲ್ಲಿ ಪ್ರಕಟಗೊಳ್ಳಲಿಲ್ಲ. ಭ್ರಷ್ಟಾಚಾರಗಳು ವ್ಯಾಪಕವಾಗಿರುವ ಪ್ರಸಕ್ತ ಕಾಲವು ಮುಸ್ಲಿಮರು ಇಸ್ಲಾಮಿನ ನೈತಿಕ ಮೌಲ್ಯಗಳನ್ನು ಮೈಗೂಡಿಸಿ ಮುಸ್ಲಿಮೇತರರಿಗೆ ತಮ್ಮ ಉತ್ತಮ ಜೀವನಾದರ್ಶಗಳಿಂದ ಇಸ್ಲಾಮಿನ ಆಕರ್ಷಕ ಮೂಲ ಸ್ವರೂಪವನ್ನು ಪ್ರದರ್ಶಿಸಲು ಸೂಕ್ತವಾಗಿದೆ. ಮಾನವ ಕಲ್ಯಾಣಕ್ಕೂ ಅದು ಅತ್ಯವಶ್ಯಕವಾಗಿದೆ. ಭಾರತವು ಇಂದು ಎಲ್ಲ ರೀತಿಯ ಭ್ರಷ್ಟಾಚಾರಗಳಿಂದ ತುಂಬಿದೆ. ರಾಜಕಾರಣಿಗಳಿಂದ ನೈತಿಕ ಮೌಲ್ಯಗಳ ಪುನರ್ನಿರ್ಮಾಣ ಸರ್ವಥಾ ಅಸಾಧ್ಯ.

[3]ಇಸ್ಲಾಮ್ ಭಾರತದಲ್ಲಿ ಮುಸ್ಲಿಮ್ ಅರಸರ ಬದಲಾಗಿ ಮುಸ್ಲಿಮ್ ಸಾಧುಸಂತರ ಮೂಲಕ ಆಗಮಿಸಿತೆಂಬುದೇ ಸತ್ಯ. ಆ ಮಹಾಪುರುಷರು ಇಸ್ಲಾಮಿನ ಆದರ್ಶವನ್ನೂ ಪ್ರಸ್ತುತ ಪಡಿಸಿದ್ದರು. ಉಚ್ಚ-ನೀಚ ಮತ್ತು ಸ್ಪೃಶ್ಯ-ಅಸ್ಪೃಶ್ಯತೆಗಳನ್ನು ಅವರು ನಂಬುತ್ತಿರಲಿಲ್ಲ. ಅವರು ಕೆಳವರ್ಗದವರನ್ನು ಮೇಲೆತ್ತಿ ಆಲಿಂಗಿಸಿಕೊಂಡರು. ಅವರು ಮಾನವೀಯತೆಯನ್ನು ಗೌರವಿಸಿದರು. ಅವರು ಬಂದಿಳಿದಾಗ ಊರಿನ ಕಳ್ಳರು, ದರೋಡೆಕೋರರು, ವ್ಯಭಿಚಾರಿಗಳು, ಅತ್ಯಾಚಾರಿಗಳೂ ಸನ್ನಡತೆಯವರಾಗಿ ಪರಿವರ್ತನೆಗೊಳ್ಳುತ್ತಿದ್ದರು. ಭಾರತದ ಕೆಲವರನ್ನು ಹೊರತು ಪಡಿಸಿ ಹೆಚ್ಚಿನೆಲ್ಲ ಮುಸ್ಲಿಮರು ಅದೇ ಸಂತರ ಕಾಲದ ಮುಸ್ಲಿಮರ ಪೀಳಿಗೆಯವರಾಗಿದ್ದಾರೆ.

ಆದ್ದರಿಂದ ವಿಚಾರಶೀಲ ಹಿಂದೂಗಳು ಮತ್ತು ಕರ್ಮಶೀಲ ಮುಸ್ಲಿಮರು ಒಗ್ಗಟ್ಟಾಗಿ, ವ್ಯಾಪಕವಾಗಿರುವ ಅನೈತಿಕತೆಯ ವಿರುದ್ಧ ಹೋರಾಟ ನಡೆಸಬೇಕಾಗಿದೆ.

ಈ ಪುಸ್ತಕದ ಬಗ್ಗೆಯೂ ಸ್ವಲ್ಪ ಸ್ಪಷ್ಟೀಕರಣದ ಅಗತ್ಯವಿದೆ. ಇಸ್ಲಾಮ್ ಧರ್ಮವನ್ನು ಹೊಗಳಿ ಅನೇಕ ಮುಸ್ಲಿಮ್ ಮತ್ತು ಮುಸ್ಲಿಮೇತರ ವಿದ್ವಾಂಸರು ಬಹಳಷ್ಟು ಬರೆದಿದ್ದಾರೆ. ದ್ವೇಷ ಮನೋಭಾವದ ಕೆಲವು ತಥಾಕಥಿತ ವಿದ್ವಾಂಸರು ಇಸ್ಲಾಮ್ ಮತ್ತು ಇಸ್ಲಾಮಿನ ಪ್ರವಾದಿಯವರನ್ನು ಟೀಕಿಸಿಯೂ ಬರೆದಿದ್ದಾರೆ.

ಈ ಪುಸ್ತಕದ ಬಗ್ಗೆ ವಾಚಕರು ಮೊದಲ ನೋಟದಲ್ಲಿಯೇ ನನ್ನಂತಹ ತೀರಾ ಸಾಮಾನ್ಯ ವ್ಯಕ್ತಿ, ಇಸ್ಲಾಮಿನ ಮೇಲೆ ಯಾವ ಹೊಸ ಬೆಳಕನ್ನು ಚೆಲ್ಲಬಹುದೆಂದು ಆಲೋಚಿಸಬಹುದು. ಆ ಕುರಿತು ನನ್ನ ವಿನಮ್ರ ವಿನಂತಿಯೇನೆಂದರೆ, ನಾನು ಇಸ್ಲಾಮನ್ನು ಕೇವಲ ಓರ್ವ ಸಾಮಾನ್ಯ ಮನುಷ್ಯನಾಗಿ ಸಂಪರ್ಕಿಸಿದ್ದೇನೆ. ಏಕೆಂದರೆ ಇಸ್ಲಾಮ್ ಜಗತ್ತಿನಲ್ಲಿರುವ ಜನಸಾಮಾನ್ಯರ ಅತಿಪ್ರಿಯ ಧರ್ಮವಾಗಿದೆ. ಅದರ ಪ್ರವಾದಿತ್ವಕ್ಕಾಗಿ ದೇವನು ಜನಸಾಮಾನ್ಯರಿಂದಲೇ ಹಝ್ರತ್ ಮುಹಮ್ಮದ್‌ರನ್ನು ಆರಿಸಿದನು ಹಾಗೂ ಅವನ ಇಚ್ಛೆಯಂತೆ ಆ ಸರ್ವಶ್ರೇಷ್ಠ ಪ್ರವಾದಿಯವರು ಜೀವನ ಪರ್ಯಂತ ಜನಸಾಮಾನ್ಯರಂತೆ ಜಗತ್ತಿನಲ್ಲಿ ಬಾಳಿದರು. ಜನಸಾಮಾನ್ಯರಿಗೂ ಅವರನ್ನು ತಲಪಲು ಕಷ್ಟವಾಗಬಾರದೆಂಬುದೇ ಅದರ ಉದ್ದೇಶವಾಗಿತ್ತು.[4]

ನನ್ನಂತಹ ಸಾಮಾನ್ಯ ವ್ಯಕ್ತಿಯ ಈ ಪುಸ್ತಕವು ಜಗತ್ತಿನಲ್ಲಿ ಬಹುಸಂಖ್ಯಾತ ಜನಸಾಮಾನ್ಯರ ಮಟ್ಟಿಗೆ ಪ್ರಸ್ತುತವಾಗಿದೆ. ಅಂತೆಯೇ ಇಸ್ಲಾಮಿನ ಪೂರ್ವಗ್ರಹ ಪೀಡಿತ ವಿಮರ್ಶಕರು ಈ ಪುಸ್ತಕದ ಮೂಲಕ ಇಸ್ಲಾಮ್ ಮತ್ತು ಇಸ್ಲಾಮಿನ ಪ್ರವಾದಿಯ ಬಗೆಗಿನ ತಪ್ಪು ತಿಳುವಳಿಕೆಯಿಂದ ಮುಕ್ತರಾಗಬಹುದೆಂದೂ ಆಶಿಸುತ್ತೇನೆ.

ಜುಲೈ 1978

ರಾಜೇಂದ್ರ ನಾರಾಯಣ್ ಲಾಲ್, ಎಂ.ಎ.

ವಾರಣಾಸಿ.

---

[4]ಪ್ರವಾದಿ ಮುಹಮ್ಮದ್‌ರ(ಸ) ಆಡಳಿತವು ಅರೇಬಿಯಾದಲ್ಲಿ ಸ್ಥಾಪನೆಯಾಗಿತ್ತು. ಅವರು ಬಯಸಿದ್ದರೆ ತಮಗಾಗಿ ಅರಮನೆಯನ್ನು ಕಟ್ಟಿಸಬಹುದಾಗಿತ್ತು. ರಾಜವೈಭವದ ಜೀವನವನ್ನು ನಡೆಸ ಬಹುದಾಗಿತ್ತು. ಹಾಗಿದ್ದರೂ ಅಂತಹ ಅಪೂರ್ವ ಯಶಸ್ಸಿನ ಬಳಿಕವೂ ಅವರ ಸಾಮಾನ್ಯ ಜೀವನದಲ್ಲಿ ಕಿಂಚಿತ್ತೂ ಬದಲಾವಣೆಯಾಗಲಿಲ್ಲ. ಖರ್ಜೂರದ ಸೋಗೆಗಳನ್ನು ಹೊದಿಸಿದ ಮಣ್ಣಿನ ಗೋಡೆಯ ಚಿಕ್ಕ ಕೋಣೆಗಳು, ಬಾಗಿಲಿನ ಬದಲಿಗೆ ಗೋಣಿಯ ಪರದೆ, ಒಣ ಆಹಾರ, ಹೆಚ್ಚಾಗಿ ಉಪವಾಸ, ತೇಪೆ ಹಚ್ಚಿದ ಬಟ್ಟೆ, ಖರ್ಜೂರದ ಸೋಗೆ ತುಂಬಿಸಿದ ಗೋಣಿ ಮತ್ತು ಕಂಬಳಿಯ ಹಾಸು, ಮಸೀದಿಯ ಚಾಪೆಯಲ್ಲಿ ಕುಳಿತು ಅವರು ಅರಬಸ್ತಾನದ ಆಡಳಿತ ನಡೆಸಿದರು. ಅವರು ದೇವನಲ್ಲಿ ತಾನು ಬಡವನಾಗಿ ಬದುಕಿ, ಬಡವನಾಗಿ ನಿಧನನಾಗಬೇಕೆಂದು ಪ್ರಾರ್ಥಿಸುತ್ತಿದ್ದರು. ಇದು ದೇವನ ಮಹಾನ್ ಪ್ರವಾದಿಯ(ಸ) ಜೀವನವಾಗಿತ್ತು. ಇಂತಹ ಆಡಳಿತಗಾರ-ಸಂತವ್ಯಕ್ತಿಗೆ ಇತಿಹಾಸದಲ್ಲಿ ಬೇರೆ ಉದಾಹರಣೆಯಿಲ್ಲ.

ಧರ್ಮದ ಮಹತ್ವ

ಪ್ರಶ್ನೆ: ಈ ವೈಜ್ಞಾನಿಕ ಯುಗದಲ್ಲಿಯೂ ಧರ್ಮದ ಮಹತ್ವ ಉಳಿದಿದೆಯೇ?

ಉತ್ತರ: ಖಂಡಿತವಾಗಿಯೂ! ವಿಜ್ಞಾನ ಮತ್ತು ಧರ್ಮವು ಪರಸ್ಪರ ವಿರೋಧಿಯಲ್ಲ. ವಿಜ್ಞಾನವು ಒಂದು ಪ್ರಗತಿಶೀಲ ರಂಗವಾಗಿದೆ. ಶಿಲಾಯುಗದಿಂದ ಪರಮಾಣುಯುಗದ ತನಕ ವಿಜ್ಞಾನವು ಅಭಿವೃದ್ಧಿ ಹೊಂದುತ್ತಾ ಸಾಗಿದೆ. ಅದು ಭವಿಷ್ಯದಲ್ಲಿಯೂ ಮುಂದುವರಿಯುವುದು. ಶಿಲಾಯುಗದಲ್ಲಿದ್ದ ಕಲ್ಲಿನ ಆಯುಧಗಳ ಮಹತ್ವವನ್ನು ಆಧುನಿಕ ಯುಗದಲ್ಲಿ ನ್ಯೂಟ್ರಾನ್ ಬಾಂಬುಗಳು ಪಡೆದಿವೆ. ಹಿಂದಿನ ಕಾಲದಲ್ಲಿ ಎತ್ತಿನ ಗಾಡಿಗಳಿಗೆ ಮಹತ್ವವಿತ್ತು. ಇಂದು ಅದೇ ಮಹತ್ವವನ್ನು ವಿಮಾನಯಾನ ಪಡೆದಿದೆ. ಒಂದು ವೈಜ್ಞಾನಿಕ ಸಂಶೋಧನೆಯ ಹಿರಿಮೆಯು ಕಾಲಕ್ರಮೇಣ ಬದಲಾಗುತ್ತದೆ. ಆದರೆ, ತದ್ವಿರುದ್ಧವಾಗಿ ಸತ್ಯಧರ್ಮದ ಸಿದ್ಧಾಂತವು ಶಾಶ್ವತ ಮತ್ತು ಸಾರ್ವಕಾಲಿಕವಾಗಿದೆ. ವಿಜ್ಞಾನವು ಮಾನವನ ಜೀವನಾನುಕೂಲತೆಗಳನ್ನು ಅಭಿವೃದ್ಧಿ ಪಡಿಸಬಹುದು. ಅದೇ ವೇಳೆ ಅದನ್ನು ನಿಯಂತ್ರಿಸದಿದ್ದರೆ ಮಾನವನು ದಾನವನಾಗಿ ಮಾರ್ಪಡಬಹುದು. ಇನ್ನೊಂದೆಡೆಯಲ್ಲಿ ಒಂದು ಸಮಗ್ರ ಧರ್ಮವು ಮಾನವನ ಜೀವಿಸುವ ಮಟ್ಟದ (Standard of Living) ಜತೆಗೆ ಅವನ ಜೀವನದ ಮಟ್ಟ(Standard of Life)ವನ್ನೂ ಸುಧಾರಿಸುತ್ತದೆ.

ಮನೋರಂಜನೆಯ ರಂಗದಲ್ಲಿ ಸಿನೆಮಾದ ಉಪಯೋಗ ಬಹಳಷ್ಟಿದೆ. ಆದರೆ ಮಕ್ಕಳ ಹಿತದೃಷ್ಟಿಯಿಂದ ಅದು ಉಪಯುಕ್ತವಲ್ಲ. ಒಂದು ಮೋಟಾರು ಕಾರು ಅತ್ಯವಶ್ಯಕವೇ ಆಗಿದೆ. ಆದರೆ ಅದನ್ನು ಮೋಸದಿಂದ ಸಂಪಾದಿಸುವುದು ಅಪರಾಧ. ಕಾಳಸಂತೆಯ ಸಂಪಾದನೆಯಿಂದ ಸಾಧಿಸಿದ ಜೀವನ ಮಟ್ಟವು ಸರ್ವಥಾ ಯೋಗ್ಯವಲ್ಲ. ಮಹಾ ಅದ್ಭುತ ಸಂಶೋಧನೆಗಳ ಹೊರತಾಗಿಯೂ ಈ ಕಾಲದಲ್ಲಿ ಮಾನವೀಯ ಮೌಲ್ಯವು ಬಹುದೂರ ಸರಿದಿದೆಯೆಂಬುದನ್ನು ಯಾರೂ ನಿರಾಕರಿಸಲಾರರು. ಮಾನವನು ಭೌತಿಕ ಸುಖದ ಹಿಂದೆ ಎಷ್ಟೇ ಧಾವಿಸುತ್ತಿದ್ದರೂ ನೈಜ ಸುಖದಿಂದ ವಂಚಿತನಾಗುತ್ತಾ ಸಾಗುತ್ತಿದ್ದಾನೆ. "ನಾವು ಭೌತಿಕ ಸುಖದಲ್ಲಿ ಮುಳುಗಿದ್ದೇವೆ" ಎಂಬ ವರ್ಡ್ಸ್‌ವರ್ತ್‌ನ ಮಾತು ವಾಸ್ತವಿಕವಾಗಿದೆ. ವಿಜ್ಞಾನವು ಎರಡಲಗಿನ ಖಡ್ಗ. ವಿದ್ಯುಚ್ಛಕ್ತಿಯು ಮನೆಯನ್ನು ಬೆಳಗಿಸುತ್ತದೆ ನಿಜ. ಆದರೆ ಒಂದು ವೇಳೆ ಮಾನವನು ಅದನ್ನು ಅಜಾಗ್ರತೆಯಿಂದ ಸ್ಪರ್ಶಿಸಿದರೆ ಅದು ತಕ್ಷಣ ಪ್ರಾಣಾಂತಿಕವಾಗುತ್ತದೆ. ಹಾಗೆಯೇ ಆತನ ರಕ್ಷಣೆಗೆ ಪ್ರಯತ್ನಿಸುವವರು ಎಚ್ಚರ ವಹಿಸದಿದ್ದರೆ ಅವರೂ ಅದಕ್ಕೆ ಬಲಿಯಾಗಬೇಕಾಗುತ್ತದೆ. ವಿಜ್ಞಾನದಲ್ಲಿ ಪ್ರಯೋಜನ ಮತ್ತು ಹಾನಿಗಳೆರಡೂ ಇವೆ. ಆದರೆ ವಿಜ್ಞಾನದ ಕೆಡುಕುಗಳನ್ನು ಸಮಗ್ರ ಧರ್ಮದ ಸಾರ್ವಭೌಮ ಸಿದ್ಧಾಂತದ ಮೂಲಕ ನಿಯಂತ್ರಿಸಲು ಸಾಧ್ಯವಿದೆ. ಆಟಮ್

ಬಾಂಬ್, ಹೈಡ್ರೋಜನ್ ಬಾಂಬ್ ಮತ್ತು ನ್ಯೂಟ್ರಾನ್ ಬಾಂಬ್‌ಗಳು ವಿಜ್ಞಾನದ ಕೊಡುಗೆಯಾಗಿವೆ. ಅದೇ ವೇಳೆ ರೆಡ್‌ಕ್ರಾಸ್ ಮತ್ತು ವಿಶ್ವಸಂಸ್ಥೆ ಧರ್ಮದ ಕೊಡುಗೆಯಾಗಿದೆ. ಅದೇನಿದ್ದರೂ ನಾವು ಬದುಕಬೇಕು ಮತ್ತು ಇತರರಿಗೂ ಬದುಕುವ ಅವಕಾಶವಿರಬೇಕು. ಅದಕ್ಕಾಗಿ ಪ್ರೀತಿ ಮತ್ತು ಕೊಡು-ಕೊಳ್ಳುವ ನೀತಿಯಿಂದ ಮಾತ್ರ ವೈಯಕ್ತಿಕ, ಸಾಮಾಜಿಕ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸುಖಶಾಂತಿ ನಿಶ್ಚಿತವಾಗಿ ದೊರೆಯ ಬಹುದು. ಪರಲೋಕದ ಬಗ್ಗೆಯೂ ಚಿಂತಿಸಬೇಕು. ಏಕೆಂದರೆ ಸತ್ಯಧರ್ಮವು ದೇವ ಮಾಧ್ಯಮದ ಮೂಲಕ ಮಾನವನ ಪರಸ್ಪರ ಸಂಬಂಧವನ್ನು ಬೆಸೆಯುತ್ತದೆ. ಆದ್ದರಿಂದ ಸರ್ವಶಕ್ತ, ಸರ್ವಜ್ಞ ಮತ್ತು ಸರ್ವವ್ಯಾಪಿಯಾದ ದೇವನ ಆದೇಶಗಳ ನೆರಳಲ್ಲಿ ನಮ್ಮ ಜೀವನವೆಂಬ ಸೌಧವನ್ನು ಕಟ್ಟಬೇಕು. ಆ ಸೌಧದಲ್ಲಿ ನಮಗೂ ನಮ್ಮ ಕುಟುಂಬ, ಸಮಾಜ, ರಾಷ್ಟ್ರ ಹಾಗೂ ಎಲ್ಲ ಮಾನವರಿಗೂ ಸ್ಥಳಾವಕಾಶವಿರಬೇಕು. ಸತ್ಯಧರ್ಮವೇ ಅದರ ತಳಪಾಯವಾಗಿರುವುದು. ಏಕದೇವವಾದ ಮತ್ತು ವಿಶ್ವಬಾಂಧವ್ಯವು ಅದರ ಗಾರೆಯ ಮಿಶ್ರಣವಾಗಿರುವುದು.

ಪ್ರಶ್ನೆ: ಜಗತ್ತಿನಲ್ಲಿ ಇಂದು ಅನೇಕ ಧರ್ಮಗಳಿವೆ. ಅವು ಪರಸ್ಪರ ವಿರೋಧಿಯಾಗಿವೆ. ಪ್ರತಿಯೊಂದು ಧರ್ಮವು ತಾನೇ ಶ್ರೇಷ್ಠವೆಂದು ಹೇಳುತ್ತದೆ. ಹೀಗಿರುತ್ತಾ ಈ ಸಮಸ್ಯೆಯನ್ನು ಬಗೆಹರಿಸುವುದು ಹೇಗೆ?

ಉತ್ತರ: ಅದಕ್ಕಾಗಿ ಜೀವಂತ ಹಾಗೂ ಮಹತ್ವಪೂರ್ಣವಾದ ಧರ್ಮಗಳ ವಿಶ್ಲೇಷಣಾತ್ಮಕ, ತುಲನಾತ್ಮಕ ಮತ್ತು ಸಮನ್ವಯಾತ್ಮಕ ಅಧ್ಯಯನದ ಅಗತ್ಯವಿದೆ. ಜಗತ್ತಿನಲ್ಲಿ ಒಂದೇ ಧರ್ಮವಿರಲು ಸಾಧ್ಯವಿಲ್ಲ. ಆದ್ದರಿಂದ ನಾವು ಕನಿಷ್ಠಪಕ್ಷ ಅವುಗಳ ಉತ್ತಮ ಅಂಶಗಳನ್ನು ತಿಳಿಯಬಹುದು. ಚೀನಾದ ಪ್ರಾಚೀನ ಧರ್ಮವಾಗಿದ್ದ ಕನ್‌ಫ್ಯೂಶಸ್ ಪ್ರಾಯಶಃ ಈಗ ಅಸ್ತಿತ್ವದಲ್ಲಿಲ್ಲ. ಜೈನ ಧರ್ಮವೂ ಹಿಂದೂ ಧರ್ಮದೊಂದಿಗೆ ವಿಲೀನಗೊಂಡಿದೆ. ಫಾರ್ಸಿ, ಸಿಕ್ಖ್, ಯಹೂದಿ ಮತ್ತು ಶಿಂಥೋ ಧರ್ಮಗಳು ಈಗ ಒಂದೋ ಕೇವಲ ಕೆಲವು ವಲಯ ಗಳಿಗೆ ಸೀಮಿತವಾಗಿದೆ ಅಥವಾ ಜನಸಂಖ್ಯಾ ದೃಷ್ಟಿಯಿಂದ ನಗಣ್ಯವಾಗಿದೆ. ಆದ್ದರಿಂದ ಪ್ರಯೋಗಾರ್ಥವಾಗಿ ಹಿಂದೂ, ಬೌದ್ಧ, ಕ್ರೈಸ್ತ ಮತ್ತು ಇಸ್ಲಾಮ್ ಧರ್ಮಗಳ ತುಲನಾತ್ಮಕ ಸಮೀಕ್ಷೆ ಇಲ್ಲಿ ಪ್ರಸ್ತುತವಾಗಿದೆ. ಈ ಎಲ್ಲ ಧರ್ಮಗಳ ಸಮೀಕ್ಷೆಯನ್ನು ಸ್ವಾಮಿ ದಯಾನಂದ ಸರಸ್ವತಿಯವರೂ ತಮ್ಮ 'ಸತ್ಯಾರ್ಥ ಪ್ರಕಾಶ'ವೆಂಬ ಗ್ರಂಥದಲ್ಲಿ ನಡೆಸಿದ್ದಾರೆಂಬುದನ್ನು ಇಲ್ಲಿ ಜ್ಞಾಪಿಸಬಹುದು. ಆದರೆ ಸ್ವಾಮೀಜಿಯವರು ಪೂರ್ವಗ್ರಹ ಮತ್ತು ಸಂಕುಚಿತ ದೃಷ್ಟಿಕೋನ ವಿರಿಸಿದ್ದರೆಂಬುದು ವಿಷಾದನೀಯ. ಅವರು ಕೇವಲ ಕೂದಲಿನ ಎಳೆಯನ್ನಷ್ಟೇ ತಮ್ಮ ಸಮೀಕ್ಷೆಗೆ ಆಧಾರವಾಗಿ ಬಳಸಿದ್ದಾರೆ. ಇದರಿಂದ ಸ್ವಾಮೀಜಿಯವರು ತಾನೋರ್ವ ಉತ್ತಮ ಸಮಾಜ ಸುಧಾರಕನೆಂಬ ಭಾವನೆಯಿಂದ ಪ್ರೇರಿತರಾಗಿದ್ದರೂ ಅವರಿಗೆ ತಮ್ಮ ಆಂದೋಲನವನ್ನೇ ವ್ಯಾಪಕಗೊಳಿಸಲಾಗಲಿಲ್ಲ. ಅವರ ಆರ್ಯ ಸಮಾಜವು ಕೃತಿಯಲ್ಲಲ್ಲದಿದ್ದರೂ ವಿಚಾರದಲ್ಲಿ ಧರ್ಮಾಂಧವಾಗಿತ್ತು. ಅದು ಅಲ್ಪಕಾಲದಲ್ಲಿಯೇ ಮಹತ್ವವನ್ನು ಕಳೆದುಕೊಂಡು ದುರ್ಬಲವಾಯಿತು.

ಹಿಂದೂ ಧರ್ಮ

ಹಿಂದೂ ಧರ್ಮಕ್ಕೆ ಯಾರೂ ಸಂಸ್ಥಾಪಕರಿಲ್ಲ.[1] ಆದರೆ ಅದರ ಪ್ರಕಾರ ವೇದವು ಶ್ರುತಿ ಅರ್ಥಾತ್ ದೇವಕೃತ ಗ್ರಂಥವಾಗಿದೆ. ಸಾಮಾನ್ಯ ಹಿಂದೂ ಪ್ರಾಯಶಃ ವೇದವನ್ನು ಎಂದೂ ನೋಡಿಲ್ಲ. ಆದ್ದರಿಂದ ಅದು ಆತನ ಮನೆಯಲ್ಲಿರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ಸಾಮಾನ್ಯ ಹಿಂದೂವಿಗೆ ಅದರ ಜ್ಞಾನವು ಅಜ್ಞಾತವಾಗಿ ಉಳಿಯಿತು. ಅದಲ್ಲದೇ ಸನಾತನ ಧರ್ಮವು ಹಿಂದೂ ಬಹುಸಂಖ್ಯಾತರ ಧರ್ಮವಾಗಿದೆ. ಅದು ಬ್ರಾಹ್ಮಣರ ಹೊರತು ಇತರ ವರ್ಣೀಯರನ್ನು ವೇದ ಕಲಿಯುವುದರಿಂದ ತಡೆಯುತ್ತದೆ. ಕ್ಷತ್ರಿಯ, ವೈಶ್ಯ, ಶೂದ್ರ ಮುಂತಾದವರು ಸೇರಿರುವ ಹಿಂದೂ ಧರ್ಮದಲ್ಲಿ, ದೇವಕೃತ ಗ್ರಂಥ ಓದುವುದರಿಂದ ಅವರನ್ನು ತಡೆದಿರುವುದು ಅಚ್ಚರಿದಾಯಕವಾಗಿದೆ.

---

[1]ಈ ಸಂದರ್ಭದಲ್ಲಿ ಖ್ಯಾತ ವಿದ್ವಾಂಸರಾದ ರಾಮಧಾರಿ ಸಿಂಹ ದಿನಕರರ ಸಂಶೋಧನೆಯ ಪರಿಶೀಲನೆಯು ಸೂಕ್ತವಾಗಿದೆ. ಅವರು ತಮ್ಮ "ಸಂಸ್ಕೃತಿ ಕೆ ಚಾರ್ ಅಧ್ಯಾಯ್" ಎಂಬ ಪುಸ್ತಕದ "ಹಿಂದೂ ಸಂಸ್ಕೃತಿ ಕೆ ರಚಯಿತಾ" ಎಂಬ ಶೀರ್ಷಿಕೆಯಡಿಯಲ್ಲಿ ಹೀಗೆ ಬರೆದಿದ್ದಾರೆ:

"ವಾಸ್ತವದಲ್ಲಿ ಹಝ್ರತ್ ಈಸಾರು ಕ್ರೈಸ್ತ ಧರ್ಮವನ್ನೂ, ಹಝ್ರತ್ ಮುಹಮ್ಮದ್‌ರು ಇಸ್ಲಾಮ್ ಧರ್ಮವನ್ನೂ ಸ್ಥಾಪಿಸಿರುವಂತೆ ಹಿಂದೂ ಧರ್ಮವು ಯಾವನೇ ನಿರ್ದಿಷ್ಟ ಮಹಾಪುರುಷನಿಂದ ಸ್ಥಾಪನೆಯಾಗಿಲ್ಲ. ನೀವು ಯಾವನೇ ಹಿಂದೂವಿನೊಂದಿಗೆ ನಿಮ್ಮ ಧರ್ಮಗ್ರಂಥ ಯಾವುದೆಂದು ಕೇಳಿದರೆ ಆತನಿಗೆ ನಿರ್ದಿಷ್ಟ ಹೆಸರು ಹೇಳಲು ಸಾಧ್ಯವಾಗಲಾರದು. ಹಾಗೆಯೇ ಒಂದು ವೇಳೆ ಆತನೊಡನೆ ನಿಮ್ಮ ಧರ್ಮದ ಪ್ರಧಾನ ನಾಯಕ, ಅವತಾರ ಪುರುಷ, ನಬಿ ಅಥವಾ ಪೈಗಂಬರ್ ಯಾರೆಂದು ಕೇಳಿದರೂ ಆತನಿಗೆ ಖಚಿತವಾಗಿ ಯಾವುದೇ ಅವತಾರ ಅಥವಾ ಮಹಾತ್ಮನ ಹೆಸರು ಸೂಚಿಸಲು ಸಾಧ್ಯವಾಗಲಾರದು. ಅದು ಸಹಜವಾಗಿದೆ. ಏಕೆಂದರೆ ನಮ್ಮ ಧರ್ಮವು ಯಾವನೇ ಮಹಾಪುರುಷನಿಂದ ಅಥವಾ ಯಾವುದೇ ಸಂಪ್ರದಾಯದಿಂದ ಬಂದಿಲ್ಲ. ಹಿಂದುತ್ವವು ಯಾವುದೇ ವಿಶ್ವಾಸದಲ್ಲಿ ಅವಲಂಬಿತವಾಗಿಲ್ಲವೆಂಬುದೇ ನಿಜ. ಬದಲಾಗಿ ಅದು ಅನೇಕ ನಂಬಿಕೆಗಳನ್ನು ಹೊಂದಿರುವ ಸಮುದಾಯವಾಗಿದೆ. ಹಾಗೆಯೇ ಭಾರತೀಯ ಜನತೆಯ ರಚನೆಯೂ ಆಯಾ ಕಾಲಗಳಲ್ಲಿ ಈ ದೇಶಕ್ಕೆ ಆಗಮಿಸುತ್ತಿದ್ದ ವಿವಿಧ ಜನಾಂಗಗಳಿಂದ ನಿರ್ಮಾಣಗೊಂಡಿದೆ. ಹೀಗೆ ಹಿಂದುತ್ವವು ಆ ವಿಭಿನ್ನ ಜನಾಂಗಗಳ ಧಾರ್ಮಿಕ ನಂಬಿಕೆಗಳ ಸಮ್ಮಿಲನದಿಂದ ಬೆಳೆದು ಬಂದಿದೆ. **(ಪುಟ:45)**

ಮುಂದೆಯೂ "ಸಂಸ್ಕೃತಿ ಕೆ ಚಾರ್ ಅಧ್ಯಾಯ್" ಕೃತಿಯಿಂದ ಸಾಂದರ್ಭಿಕವಾಗಿ ಉದ್ಧರಣೆಗಳನ್ನು ಕೊಡಲಾಗಿದೆ.

ಬ್ರಾಹ್ಮಣರ ಹೊರತು ಇತರ ಹಿಂದೂಗಳನ್ನು ವೇದ ಕಲಿಯುವುದರಿಂದ ಏಕೆ ತಡೆಯಲಾಯಿತೆಂಬುದು ಸಾಮಾನ್ಯ ಬುದ್ಧಿಗೆ ನಿಲುಕದ ವಿಚಾರವಾಗಿದೆ. ಒಟ್ಟಿನಲ್ಲಿ, ಈ ದೇವಕೃತ ಗ್ರಂಥವು ಒಂದೋ ಯಾವುದಾದರೂ ಸಂಸ್ಕೃತ ಗ್ರಂಥಾಲಯದ ಶೋಭೆಯನ್ನು ಹೆಚ್ಚಿಸುತ್ತಿದೆ ಅಥವಾ ಯಾವುದಾದರೂ ನಗರದ ಬೆರಳೆಣಿಕೆಯಲ್ಲಿರುವ ಬ್ರಾಹ್ಮಣರ ಮನೆಯ ಮೂಲೆಯಲ್ಲಿ ವಿರಾಜಮಾನವಾಗಿದೆ. ಒಂದು ಶತಮಾನದ ಹಿಂದೆ ಆರ್ಯ ಸಮಾಜವು ಈ ಧೋರಣೆಯ ವಿರುದ್ಧ ಸ್ವರವೆತ್ತಿತ್ತು. ಆದರೆ ಸಮಕಾಲೀನ ಹಿಂದೂ ಧರ್ಮದಲ್ಲಿ ಅದು ಯಾವ ಪ್ರಭಾವವನ್ನೂ ಬೀರಲಿಲ್ಲ. ಅನ್ಯ ವರ್ಣೀಯರು ಮತ್ತು ಸ್ತ್ರೀ ಸಮುದಾಯವು ತಮ್ಮ ದೇವಕೃತ ಧರ್ಮಗ್ರಂಥವಾದ ವೇದದ ಅಧ್ಯಯನದಿಂದ ಮನುಸ್ಮೃತಿಯ ಆದೇಶ ಪ್ರಕಾರ ವಂಚಿತವಾಗಿದ್ದಾರೆ. ಇದು ಹಿಂದೂಗಳ ದೇವಕೃತ ಧರ್ಮಗ್ರಂಥದ ಸ್ಥಿತಿ. ಐತಿಹಾಸಿಕವಾಗಿಯೂ ವೇದವು ಅತಿ ಪ್ರಾಚೀನವಾಗಿದೆ.

ಏಕದೇವ ವಾದವು ವೈದಿಕ ಧರ್ಮದ ಆಧಾರವಾಗಿತ್ತು. ಅದರಲ್ಲಿ ಮೂಲತಃ ಮೂರ್ತಿ ಪೂಜೆಯೂ ಇರಲಿಲ್ಲ. ಪುನರ್ಜನ್ಮ ಸಿದ್ಧಾಂತವೂ ಇರಲಿಲ್ಲ.[2] ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ಚಾತುರ್ವರ್ಣ ವಿಂಗಡನೆಯೂ ಒಂದು ರೀತಿಯಲ್ಲಿ ಆರ್ಥಿಕ ಸ್ಥಿತಿಯನ್ನು ಅವಲಂಬಿಸಿತ್ತು. ಹಾಗಿದ್ದರೂ ಆ ವಿವಿಧ ವರ್ಣೀಯರಲ್ಲಿ ಪರಸ್ಪರ ವಿವಾಹವೂ ನಡೆಯುತ್ತಿತ್ತು. ವಿಶ್ವಾಮಿತ್ರನು ಕ್ಷತ್ರಿಯನಾಗಿದ್ದರೂ ಗುಣಕರ್ಮಗಳಿಂದ ಆತನಿಗೆ ಬ್ರಾಹ್ಮಣ ಋಷಿಯ ಸ್ಥಾನವು ಪ್ರಾಪ್ತವಾಗಿತ್ತು. ಹಾಗೆಯೇ ಬ್ರಾಹ್ಮಣನಾಗಿದ್ದ ಪರಶುರಾಮನು ಗುಣಕರ್ಮಗಳಿಂದ ಕ್ಷತ್ರಿಯನಾಗಿದ್ದ. ವಶಿಷ್ಠಮುನಿಯನ್ನು ದಾಸಿಯ ಪುತ್ರನೆಂದು ಹೇಳಲಾಗಿದೆ. ವಾಲ್ಮೀಕಿ ಋಷಿಯು ಬೇಡನಾಗಿದ್ದನೆಂದು ಹೇಳಲಾಗುತ್ತಿದೆ. ಶೂದ್ರ ಮಹಿಳೆಯಾಗಿದ್ದ

[2]ವೈದಿಕ ಕಾಲದಲ್ಲಿ ಪುನರ್ಜನ್ಮವಾದವಿರಲಿಲ್ಲವೆಂದು ಶ್ರೀ ರಾಜೇಂದ್ರಜೀಯವರ ಮಾತು ಓದುಗರನ್ನು ಆಶ್ಚರ್ಯಚಕಿತಗೊಳಿಸಬಹುದು. ಆದರೆ ಇದೇ ಮಾತನ್ನು ರಾಜೇಂದ್ರಜೀಯವರಂತೆಯೇ ಇತರ ವಿಚಾರಶೀಲ ವಿದ್ವಾಂಸರೂ ಹೇಳಿದ್ದಾರೆ. ರಾಮಧಾರಿ ಸಿಂಹ ದಿನಕರರು ತಮ್ಮ "ಸಂಸ್ಕೃತಿ ಕೆ ಚಾರ್ ಅಧ್ಯಾಯ್"ನಲ್ಲಿ ಹೀಗೆ ಬರೆದಿದ್ದಾರೆ:

"ನಾಸ್ತಿಕರು ಮತ್ತು ಭೌತಿಕವಾದಿಗಳನ್ನು ಹೊರತುಪಡಿಸಿದರೆ ಪರಲೋಕ ಭಯವನ್ನು ನಂಬದಿರುವ ಹಿಂದೂಗಳು ವಿರಳ. ಇದು ವೈದಿಕ ಕಾಲದ ಭಾವನೆಗಿಂತ ಭಿನ್ನವಾದ ಭಾವನೆಯಾಗಿದೆ. ವೈದಿಕ ಋಷಿಗಳು ನಾಸ್ತಿಕರೋ ಭೌತಿಕವಾದಿಗಳೋ ಆಗಿರಲಿಲ್ಲ. ಅವರಿಗೆ ಸಾವಿಗೆ ಹೆದರುವ ಆಲೋಚನೆ ಮೂಡಿರಲಿಲ್ಲ. ಅಂತೆಯೇ ಅವರಲ್ಲಿ ಸ್ವರ್ಗದ ಜತೆ ನರಕವೂ ಇದೆ. ಅದರಲ್ಲಿ ಆತ್ಮಗಳು ಯಾತನೆ ಅನುಭವಿಸಲಿವೆ ಎಂಬ ಭಾವನೆಯೂ ಇರಲಿಲ್ಲ. ಒಟ್ಟಿನಲ್ಲಿ 'ಆತ್ಮ ಪುನರ್ಜನ್ಮ ಮತ್ತು ಕರ್ಮಫಲವಾದದ ಕುರಿತು ವೈದಿಕ ಋಷಿಗಳು ಹೆಚ್ಚು ಯೋಚಿಸಿರಲಿಲ್ಲ." (ಪುಟ:81)

ಪ್ರಚಲಿತ ಪುನರ್ಜನ್ಮ ಸಿದ್ಧಾಂತಕ್ಕೆ ಮಾನವ, ಪಶು, ಪಕ್ಷಿ, ಕ್ರಿಮಿಕೀಟಗಳು, ವೃಕ್ಷ ಮುಂತಾದ ಜೀವಿಗಳೆಲ್ಲವೂ ತಂತಮ್ಮ ಪೂರ್ವ ಜನ್ಮದ ಕರ್ಮಫಲಗಳ ಪರಿಣಾಮಗಳಾಗಿವೆಯೆಂಬ ಭಾವನೆಯೇ ಆಧಾರವಾಗಿದೆ. ಒಂದು ವೇಳೆ ಇದನ್ನು ಒಪ್ಪಿಕೊಳ್ಳದಿದ್ದರೆ ದೇವನ ಮೇಲೆ ಅನ್ಯಾಯದ ಕಳಂಕ ಬಂದೀತು. ಅವನು ಕೆಲವು ಪ್ರಾಣಿಗಳಿಗೆ ಉನ್ನತ ದರ್ಜೆಯ ಮತ್ತು ಇನ್ನು ಕೆಲವು ಪ್ರಾಣಿಗಳಿಗೆ ಕೆಳದರ್ಜೆಯ ಶರೀರವಿತ್ತನು. ಮನುಷ್ಯರಲ್ಲಿ ಕೂಡ ಕೆಲವರನ್ನು ಬಲಶಾಲಿಗಳನ್ನಾಗಿ,

ಶಬರಿಯು ಎಂಜಲು ಮಾಡಿದ್ದ ಬುಗರಿಯನ್ನು ರಾಮನು ಪ್ರೀತಿಯಿಂದ ತಿಂದನೆಂದು ಹೇಳಲಾಗಿದೆ. ರಾಮನ ಒಪ್ಪಿಗೆಯಂತೆ ರಾವಣ ಮತ್ತು ಬಾಲಿಯರ ವಿಧವೆಯರ ಪುನರ್ವಿವಾಹವು ಅವರದ್ದೇ ಮೈದುನರೊಂದಿಗೆ ನಡೆದಿತ್ತು. ಹೀಗೆ ವೇದಗಳಲ್ಲಿ ಇಂತಹ ಮಿಲನಗಳ ಉಲ್ಲೇಖಗಳೂ ಇವೆ. ಕೃಷ್ಣನ ಒಪ್ಪಿಗೆಯಂತೆ ಗೋತ್ರಗಳೊಳಗೂ ವಿವಾಹಗಳು ನಡೆಯುತ್ತಿದ್ದವು. ರಾಮನು ತನ್ನ ಪತ್ನಿಯ ಪರಿತ್ಯಾಗ ಮಾಡಿದ್ದನು. ಅದು ಸರಿಯೋ ತಪ್ಪೋ ಎಂಬುದು ಬೇರೆ ಮಾತು. ದಶರಥನ ಮೂವರು ರಾಣಿಯರಾದ ಕೌಶಲ್ಯ, ಕೈಕೇಯಿ ಮತ್ತು ಸುಮಿತ್ರರು ಪತಿಯು ಮೃತನಾದ ಬಳಿಕ ಸತಿ ಸಹಗಮನ ಮಾಡಲಿಲ್ಲ. ಕೃಷ್ಣನ ಕಾಲದಲ್ಲಿ ಅವನ ಸಂಬಂಧಿಕಳಾದ ಕುಂತಿಯೂ ಪತಿಯ ಚಿತೆಗೆ ಹಾರಲಿಲ್ಲ.

ವೈದಿಕ ಕಾಲ, ರಾಮಾಯಣ ಮತ್ತು ಮಹಾಭಾರತ ಕಾವ್ಯಗಳ ಕಾಲದಲ್ಲಿದ್ದ ಧರ್ಮ ಮತ್ತು ಸಂಸ್ಕೃತಿಯು ಮಧ್ಯಕಾಲದಲ್ಲಿ ಬದಲಾವಣೆಗೊಂಡಿದೆಯೆಂಬುದು ವ್ಯಕ್ತ. ವರ್ತಮಾನದ ಹಿಂದೂ ಧರ್ಮ ಮತ್ತು ಸಂಸ್ಕೃತಿಯು ತನ್ನ ಆದರ್ಶ ರಾಮ ಮತ್ತು ಕೃಷ್ಣರ ಕಾಲದ ಧರ್ಮ ಮತ್ತು ಸಂಸ್ಕೃತಿಯಿಂದ ಸಂಪೂರ್ಣ ಭಿನ್ನವಾಗಿದೆ. ಹಿಂದೂ ಧರ್ಮದಲ್ಲುಂಟಾದ ಈ ಪರಿವರ್ತನೆ ಮತ್ತು ವಿರೋಧಾಭಾಸಗಳಿಗೆ; ಕಾಲ ಕ್ರಮೇಣ ಆರ್ಯರು, ದ್ರಾವಿಡರು, ಸಿಂಧೂ ಕಣಿವೆಯ ನಿವಾಸಿಗಳು, ಹೂಣರು, ಕುಶಾನರು ಮುಂತಾದ ಜನಾಂಗಗಳು ಸೇರಿ ಅವರ ಧಾರ್ಮಿಕ ನಂಬಿಕೆಗಳು ಮಿಶ್ರಣವಾಗಿರುವುದೇ ಕಾರಣವಾಗಿದೆ. ವೇದಗಳು, ಉಪನಿಷತ್ ಮತ್ತು ಅರಣ್ಯಕಗಳ ಏಕದೇವ ಸಿದ್ಧಾಂತವು ಕ್ರಮೇಣ ಬಹುದೇವ ವಾದದಲ್ಲಿ ಸೇರಿಕೊಂಡಿತು. ಋಷಿಗಳ ಮೂಲಕ ಪ್ರತಿಪಾದಿಸಲಾದ ಸ್ಮೃತಿಗಳು ಮತ್ತು ದರ್ಶನ ಶಾಸ್ತ್ರಗಳಿಗೂ ಮನ್ನಣೆ ದೊರೆಯಿತು.

ಕೆಲವರನ್ನು ಬಲಹೀನರನ್ನಾಗಿ, ಕೆಲವರನ್ನು ಶ್ರೀಮಂತರನ್ನಾಗಿ, ಕೆಲವರನ್ನು ಬಡವರನ್ನಾಗಿ, ಕೆಲವರನ್ನು ಬುದ್ಧಿವಂತರನ್ನಾಗಿ, ಕೆಲವರನ್ನು ತಿಳಿಗೇಡಿಗಳನ್ನಾಗಿ ಮಾಡಿದನು. ಇದರಿಂದ ಜೀವಿಗಳಲ್ಲಿ ಮಾನವನು ಪ್ರಧಾನವೆಂದು ವ್ಯಕ್ತವಾಗುತ್ತದೆ.

ಈ ಸಿದ್ಧಾಂತದ ಪ್ರಕಾರ, ಮಾನವನಿಗಿಂತ ಮುಂಚೆ ಮರ-ಗಿಡ ಇತ್ಯಾದಿಗಳು ಇಲ್ಲವೆಂದಾದರೆ ಮಾನವನು ಏನನ್ನು ತಿನ್ನುತ್ತಿದ್ದ? ಹೇಗೆ ಬದುಕುತ್ತಿದ್ದ? ಎಂಬ ಪ್ರಶ್ನೆಗಳೂ ಉದ್ಭವಿಸುತ್ತವೆ. ಅದರೊಂದಿಗೆ ಆದಿಸೃಷ್ಟಿಯಲ್ಲಿ ಮಾನವನ ಪೂರ್ವಜನ್ಮದ ಕರ್ಮಫಲಕ್ಕೆ ಯಾವ ಅರ್ಥವಿದೆ ಯೆಂಬ ಪ್ರಶ್ನೆಯೂ ಮೂಡುತ್ತದೆ. ಇದಕ್ಕೆ ಸೃಷ್ಟಿಯು ಅನಾದಿ ಮತ್ತು ಅನಂತವೆಂದು ಉತ್ತರಿಸ ಲಾಗಿದೆ. ಗ್ರಂಥಗಳಲ್ಲಿ ಸೃಷ್ಟಿಯ ಉತ್ಪತ್ತಿಯ ವಿವರವಾದ ವರ್ಣನೆಯು ದೊರೆಯುವುದೆಂದು ಹೇಳಲಾಗಿದೆ. ಅದರಲ್ಲಿ ಸೃಷ್ಟಿಯ ಉತ್ಪತ್ತಿ ಮತ್ತು ವಿಕಾಸದ ಮಹಾ ಚಕ್ರವಿದೆ. ಅದು ಅನಾದಿ ಮತ್ತು ಅನಂತವಾಗಿದೆ ಎಂದೂ ಉತ್ತರಿಸಲಾಗಿದೆ. ಈ ಸೃಷ್ಟಿಯು ಅನಾದಿ ಕಾಲದಿಂದ ಉಂಟಾಗುತ್ತಾ ಬಂದಿದೆ. ಹಾಗೆಯೇ ಅನಂತ ಕಾಲದ ವರೆಗೆ ನಾಶವಾಗುತ್ತಲಿರುತ್ತದೆ. ಇದರಲ್ಲಿಯೂ ಪ್ರಶ್ನೆ ಉದ್ಭವಿಸುತ್ತದೆ. ಗ್ರಂಥದ ಪ್ರಕಾರ ಈ ಸೃಷ್ಟಿಯು ಸ್ವಯಂ ಉತ್ಪನ್ನವಾಗಿಲ್ಲ, ಇದನ್ನು ದೇವನೇ ಸೃಷ್ಟಿಸಿದ್ದಾನೆ, ಹಾಗೆಯೇ ಆತನ ಮೂಲಕವೇ ಅದರ ಅಂತ್ಯವೂ ಸಂಭವಿಸುತ್ತದೆ. ಹಾಗಾದರೆ ಅನಾದಿ ಮತ್ತು ಅನಂತ ಚಕ್ರವೆಂಬ ಸಿದ್ಧಾಂತವು ಹೇಗೆ ಸಾಬೀತಾಗುತ್ತದೆ? ಇದಕ್ಕೆ ದೇವನು ಅನಾದಿ ಮತ್ತು ಅನಂತನಾಗಿರುವುದರಿಂದ ಆತನ ಕ್ರಿಯೆಯೂ ಅನಾದಿ ಮತ್ತು ಅನಂತವಾಗಿದೆಯೆಂದು ಉತ್ತರಿಸಲಾಗಿದೆ.

ರಾಮಾಯಣ ಮತ್ತು ಮಹಾಭಾರತ ಕಾವ್ಯಗಳಿಗೂ ಧಾರ್ಮಿಕ ಮಾನ್ಯತೆ ಲಭಿಸಿತು. ಇದರಿಂದಾಗಿ 18 ಕಪೋಲಕಲ್ಪಿತ ಪೌರಾಣಿಕ ಕಥೆಗಳಿಗೂ ಅತ್ಯಧಿಕ ಧಾರ್ಮಿಕ ಮನ್ನಣೆ ದೊರೆಯಿತು. ನಾಸ್ತಿಕವಾದದ ಜೈನ ಮತ್ತು ಬೌದ್ಧ ಧರ್ಮಗಳೂ ಹಿಂದೂ ಧರ್ಮದಲ್ಲಿ ವಿಲೀನಗೊಂಡುವು. ಅದಲ್ಲದೇ ವೈಷ್ಣವ, ಶೈವ ಮತ್ತು ಶಾಕ್ತ ಹಾಗೂ ವಾಮಮಾರ್ಗಿಗಳಿಗೂ ವಿಚಾರ ಸ್ವಾತಂತ್ರ್ಯದ ಹೆಸರಲ್ಲಿ ಧಾರ್ಮಿಕ ಮಾನ್ಯತೆ ದೊರೆಯಿತು. ಅದರೊಂದಿಗೆ ಅಸಂಖ್ಯಾತ ಸಾಧು ಸಂತರ ವಾಣಿಗಳಿಗೂ ಧಾರ್ಮಿಕ ಮನ್ನಣೆ ಲಭಿಸಿತು. ನಾಲ್ನೂರು ವರ್ಷಗಳ ಹಿಂದೆ ಅಂದಿನ ಆಡು ಭಾಷೆಯಲ್ಲಿ ತನ್ನ ಆತ್ಮ ಸಂತೋಷಕ್ಕಾಗಿ ಪತ್ನಿಯಿಂದ ಪೀಡಿತರಾದ ತುಳಸಿದಾಸರು ಬರೆದ 'ರಾಮಚರಿತ ಮಾನಸ'ವು ಎಲ್ಲ ರೀತಿಯಲ್ಲಿಯೂ ವ್ಯಾಪಕ ಮನ್ನಣೆ ಪಡೆಯಿತು. ಉತ್ತರ ಭಾರತದಲ್ಲಿ ಅದು ಧರ್ಮದ ಆಧಾರಸ್ತಂಭವೆನಿಸಿದೆ. ಆದರೆ ದಕ್ಷಿಣ ಭಾರತೀಯರಲ್ಲಿ ಅಷ್ಟೊಂದು ಜನಪ್ರಿಯವಾಗದಿರುವುದಕ್ಕೆ ಅದು ಹಿಂದೀ ಭಾಷೆಯಲ್ಲಿರುವುದೇ ಕಾರಣವಾಗಿದೆ. ಅದಲ್ಲದೇ ತುಳಸಿದಾಸರು ಬರೆದ ಇತರ ಗ್ರಂಥಗಳಿಗೂ ವಿಶೇಷತಃ 'ಹನುಮಾನ್ ಚಾಲೀಸ್'ಗೆ ಧಾರ್ಮಿಕ ಮನ್ನಣೆ ದೊರಕಿದೆ. ಕೇವಲ ನಾಲ್ನೂರು ವರ್ಷಗಳ ಹಿಂದೆ ರೂಢಿಯಲ್ಲಿದ್ದ ಬೃಜು ಭಾಷೆಯಲ್ಲಿ ಸೂರದಾಸರು ರಚಿಸಿದ ಸೂರಸಾಗರ ಗ್ರಂಥದ ಧಾರ್ಮಿಕ ಅಧ್ಯಯನವೂ ನಡೆಯುತ್ತಿದೆ. ಈಗಲೂ ಹೊಸ ದೇವಿದೇವತೆಯರ ಆವಿಷ್ಕಾರವಾಗುತ್ತಿದೆ. ಅಂತಹ ಆಧುನಿಕ ದೇವತೆಗಳಲ್ಲಿ 'ಸಂತೋಷಿಮಾ' ಕೂಡ ಸೇರಿದ್ದಾರೆ.

ಹಿಂದೂ ಧರ್ಮವು ವಿಶಾಲ ಧಾರ್ಮಿಕ ಸಾಹಿತ್ಯವನ್ನು ಹೊಂದಿದೆಯೆಂದು ಹೇಳಲಾಗುತ್ತಿದೆ. ದೇವಕೃತವಾಗಿರುವ ನಾಲ್ಕು ವೇದಗಳಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು

ಆ ಬಗ್ಗೆಯೂ ಪ್ರಶ್ನೆ ಉದ್ಭವಿಸುತ್ತದೆ. ಸೃಷ್ಟಿಯು ದೇವನ ಒಂದು ಕ್ರಿಯೆಯೇ ಆಗಿದೆ. ಹಾಗಾದರೆ ಅದರ ವಿನಾಶವಾಗುವುದೇಕೆ? ನೀವು ಯುಕ್ತಿ ರಹಿತವಾಗಿ ಸೃಷ್ಟಿಯನ್ನು ಅನಾದಿ ಮತ್ತು ಅನಂತವೆಂದು ನಂಬಿದರೂ ಪುನರ್ಜನ್ಮವು ಸಾಧಿಸಲ್ಪಡುವುದಿಲ್ಲ. ಏಕೆಂದರೆ ಎಲ್ಲ ಪ್ರಾಣಿಗಳೂ ಹುಟ್ಟುತ್ತಲಿರುತ್ತವೆ ಮತ್ತು ಅದರ ಪುನರ್ಜನ್ಮವು ಪ್ರಳಯ ಕಾಲದ ತನಕ ಸಾಬೀತಾಗುವುದಿಲ್ಲ.

ಶ್ರೀ ದುರ್ಗಾಶಂಕರ್ ಸತ್ಯಾರ್ಥಿಯವರು ಋಗ್ವೇದದ ಏಳು ಮಂತ್ರಗಳಿಂದ ವೇದವು ಕುರ್‌ಆನಿನಂತೆಯೇ ಕೇವಲ ಎರಡು ಜನ್ಮವನ್ನು ತಿಳಿಸುತ್ತದೆಯೆಂದು ಸಮರ್ಥಿಸಿದ್ದಾರೆ. ಒಂದು ಜನ್ಮವು ಈ ಲೋಕದಲ್ಲಿ; ಇನ್ನೊಂದು ಜನ್ಮವು ಕರ್ಮಫಲಗಳನ್ನು ಅನುಭೋಗಿಸಲಿಕ್ಕಾಗಿ ಪ್ರಳಯ ಕಾಲದ ಬಳಿಕ. ಸ್ವಾಮಿ ದಯಾನಂದರು ಪುನರ್ಜನ್ಮವಾದವನ್ನು ಹೇಗೆ ನಂಬಿದರೆಂದು ಅವರು ಆಶ್ಚರ್ಯ ಪ್ರಕಟಿಸಿದ್ದಾರೆ. ಸತ್ಯಾರ್ಥಿಯವರ ಉಲ್ಲೇಖವನ್ನು, ದೆಹಲಿಯ 'ಮರ್ಕಝಿ ಮಕ್ತಬಾ ಇಸ್ಲಾಮಿ'ಯು ಪ್ರಕಟಿಸಿದ 'ವೇದ್ ಓರ್ ಕುರ್‌ಆನ್' ಎಂಬ ಪುಸ್ತಕದಲ್ಲಿ ನೋಡಬಹುದು.

ವಸ್ತುತಃ ವೇದದಲ್ಲಿ ಬುದ್ಧಿಗೆ ನಿಲುಕದ ಇಂತಹ ವಿಚಾರಗಳಿಗೆ ಮಾನ್ಯತೆಯಿರಲು ಸಾಧ್ಯವಿಲ್ಲ. ಇದು ಅನಂತರ ಸೃಷ್ಟಿಯ ಬಗ್ಗೆ ಕಿಂಚಿತ್ತೂ ಚಿಂತಿಸದ ಯಾವನೋ ವ್ಯಕ್ತಿಯ ಭಾವನೆಯಾಗಿರಬಹುದು. ದೇವನು ಅದರ ನಿರ್ಮಾಣವನ್ನು ವಿಭಿನ್ನವಾಗಿ ಮಾಡಿರುವನು. ಹಾಗೆಯೇ ಅದು ವಿಭಿನ್ನವಾಗಿಯೇ ನಡೆಯುತ್ತಿದೆ. ಭೂಮಿ ಮತ್ತು ಆಕಾಶ, ಸೂರ್ಯ ಮತ್ತು ಚಂದ್ರಗಳನ್ನು ನೋಡಿರಿ. ಮಾನವರೆಲ್ಲರೂ ಒಂದೇ ರೀತಿಯಲ್ಲಿರುತ್ತಿದ್ದರೆ ಯಾರು ಯಾರನ್ನು ನಂಬುತ್ತಿದ್ದರು? ವ್ಯವಸ್ಥೆ ಹೇಗೆ ಸ್ಥಾಪನೆಯಾಗುತ್ತಿತ್ತು?

ಅಥರ್ವವೇದಗಳು ಸೇರಿವೆ. ಅದರಲ್ಲಿರುವ ವಿಷಯಗಳ ಬಗ್ಗೆ 99% ಹಿಂದೂಗಳು ಅಜ್ಞರಾಗಿದ್ದಾರೆ. ಅನೇಕ ಸ್ಮೃತಿಗಳಿವೆ. ಅವುಗಳ ವಿಚಾರಧಾರೆಗಳೂ ವಿಭಿನ್ನವಾಗಿವೆ. ಹದಿನೆಂಟು ಪುರಾಣಗಳಿವೆ. ಅವುಗಳ ಪ್ರಕಾರ ಶಂಕರನು ಭಂಗಿ ಸೇವಿಸುತ್ತಿದ್ದನು. ದೇವತೆಗಳ ರಾಜನಾದ ಇಂದ್ರನು ಮಹಾಕಾಮುಕನಾಗಿದ್ದ. ಸ್ವರ್ಗದ ಸ್ತ್ರೀಯರಿಂದ ತೃಪ್ತನಾಗದೆ ಭೂಮಿಗಿಳಿದು ಬರುತ್ತಿದ್ದ. ಆತನು ಅಹಲ್ಯೆ ಎಂಬ ಋಷಿ ಪತ್ನಿಯನ್ನು ಬಲಾತ್ಕರಿಸಿದ್ದ. ಆರು ಶಾಸ್ತ್ರಗಳಿವೆ. ಅವು ಹಿಂದೂ ಜನಸಾಮಾನ್ಯರಿಗೆ ಸಂಪೂರ್ಣ ಅಪರಿಚಿತವಾಗಿದೆ. ಹಿಂದೂ ಧರ್ಮಕ್ಕೆ ಶಂಕರ, ರಾಮಾನುಜ, ವಲ್ಲಭ, ಮಾಧ್ವ ಮತ್ತು ನಿಂಬಾರ್ಕರೆಂಬ ಐವರು ಆಚಾರ್ಯರಿದ್ದಾರೆ. ಇವರೆಲ್ಲರ ಪರಂಪರೆ, ಆದರ್ಶ ಮತ್ತು ಮಾನ್ಯತೆ ವಿಭಿನ್ನವಾಗಿವೆ. ಇವರ ಹೊರತಾಗಿ ಇತರ ಅಸಂಖ್ಯಾತ ಆಚಾರ್ಯರಿದ್ದಾರೆ. ವೈಷ್ಣವ, ಶೈವ, ಶಾಕ್ತ ಎಂಬ ಮೂರು ಮುಖ್ಯ ಸಂಪ್ರದಾಯಗಳಿವೆ. ಅವೆಲ್ಲವೂ ಪರಸ್ಪರ ವಿರುದ್ಧವಾಗಿವೆ. ತೀವ್ರ ಆಸ್ತಿಕರೆನಿಸಿದ ಶಂಕರಾಚಾರ್ಯರ ಅನುಯಾಯಿಗಳಂತೆಯೇ ಅಪ್ಪಟ ನಾಸ್ತಿಕ ಜೈನ ಮತ್ತು ವಾಮಮಾರ್ಗಿಯೂ ಹಿಂದೂವೇ ಆಗಿದ್ದಾರೆ. ಈರುಳ್ಳಿ, ಬೆಳ್ಳುಳ್ಳಿಗಳನ್ನು ತಿನ್ನದವರೂ ಹಿಂದೂವೇ ಆಗಿದ್ದಾರೆ. ಹಾಗೆಯೇ ಹೇಯ ಅಖಾದ್ಯ ವಸ್ತುಗಳನ್ನು ತಿನ್ನುವ ಔಘಟರೂ ಹಿಂದೂಗಳೇ. ಪೀತಾಂಬರ ಧರಿಸುವ ಸಾಧುವೂ ಹಿಂದೂ. ಎಲ್ಲ ರೀತಿಯಲ್ಲಿ ನಗ್ನವಾಗಿರುವ ಸಾಧುವೂ ಹಿಂದೂವೇ ಆಗಿರುತ್ತಾನೆ. ವೈಷ್ಣವರಿಗೆ ಮಾಂಸಾಹಾರ ನಿಷಿದ್ಧವಾಗಿದ್ದರೆ, ಶಾಕ್ತರಿಗೆ ಮಾಂಸಾಹಾರ ಸಮ್ಮತಾರ್ಹವಾಗಿದೆ. ಸೈದ್ಧಾಂತಿಕವಾಗಿ ಏಕದೇವನನ್ನು ನಂಬುವ ಹಿಂದೂ, ಕರ್ಮದಿಂದ ಬಹುದೇವವಾದಿಯಾಗಿರುತ್ತಾನೆ. ವೇದವು ಸೈದ್ಧಾಂತಿಕವಾಗಿ ಹಿಂದೂಗಳ ದೇವಕೃತ ಧರ್ಮ ಗ್ರಂಥವಾಗಿದೆ. ಆದರೆ ವಾಸ್ತವಿಕವಾಗಿ ಉತ್ತರ ಭಾರತದಲ್ಲಿ ರಾಮಚರಿತ ಮಾನಸವು ಆ ಸ್ಥಾನವನ್ನು ಪಡೆದಿದೆ. ದಕ್ಷಿಣ ಭಾರತದ ಹಿಂದೂಗಳಲ್ಲಿರುವ ಮಾನ್ಯತೆಯು ತೀರಾ ಭಿನ್ನವಾಗಿದೆ.

ಸಂಸ್ಕೃತಿಯ ಹೆಸರಲ್ಲಿ ಹೋಳಿ ಹಬ್ಬದ ವೇಳೆ ಬಯ್ಯುವುದು, ದೀಪಾವಳಿಯಲ್ಲಿ ಜೂಜಾಡುವುದು ಮತ್ತು ಶಿವರಾತ್ರಿಯಲ್ಲಿ ಭಂಗಿ ಸೇದುವುದು ಧಾರ್ಮಿಕ ಕಾರ್ಯಗಳೆನಿಸಿವೆ. ರಾಮಚರಿತ ಮಾನಸದಲ್ಲಿ ಬ್ರಾಹ್ಮಣವಾದವನ್ನು ಬಹಳಷ್ಟು ವೈಭವೀಕರಿಸಲಾಗಿದೆ. ಸರ್ವಗುಣಗಳನ್ನು ಕಳೆದುಕೊಂಡ ಬ್ರಾಹ್ಮಣನು ಸರ್ವಗುಣ ಸಂಪನ್ನ ಶೂದ್ರನಿಗಿಂತ ಪೂಜ್ಯನೆಂದು ಅದರಲ್ಲಿ ಹೇಳಲಾಗಿದೆ. ಎಲ್ಲ ಸ್ಮೃತಿಗಳ ಪೈಕಿ ಮನುಸ್ಮೃತಿಯು ಅತ್ಯಂತ ಶೂದ್ರ ವಿರೋಧಿಯಾಗಿದೆ. ವಸ್ತುತಃ ತುಳಸಿದಾಸರು ಮತ್ತು ಮನು, ಶೂದ್ರರ ಕುರಿತು ಅವರ ಆಶಯಗಳನ್ನೇ ಬರೆದಿದ್ದಾರೆ. ಆದರೆ ಆ ಗ್ರಂಥವು ಇಲ್ಲದಿರುತ್ತಿದ್ದರೂ ಹಿಂದೂ ಧರ್ಮದ ವಿಶಾಲ ಸಾಹಿತ್ಯಗಳ ಮೇಲೆ ಯಾವುದೇ ಪ್ರಭಾವ ಉಂಟಾಗುತ್ತಿರಲಿಲ್ಲ. ಪುರಾಣಗಳ ಸ್ಥಿತಿಯೂ ಇದೇ ಆಗಿದೆ. ಪರಲೋಕದ ಬಗ್ಗೆಯೂ ಹಿಂದೂ ಧರ್ಮದಲ್ಲಿ ವಿರೋಧಾಭಾಸಗಳಿವೆ. ಅದು ಸ್ವರ್ಗ ನರಕವನ್ನು ನಂಬುತ್ತದೆ.

'ಶಿಖಾ ಸೂತ್ರ' ಕೂಡ ವಿಕೃತವಾಗಿದೆ. ಹಿಂದೂ ಧರ್ಮದ ಪರಿಕಲ್ಪನೆಯು ಸಂಪೂರ್ಣ ಅಸ್ಪಷ್ಟವಾಗಿದೆ. ಒಟ್ಟಿನಲ್ಲಿ ಹಿಂದೂ ಧರ್ಮವು ಒಂದು ಅದ್ಭುತ ವಿರೋಧಾಭಾಸವಾಗಿದೆ. ಏಕೆಂದರೆ ಅದೊಂದು ಮಿಶ್ರಣವಾಗಿದೆ. ಅದರಲ್ಲಿ ಏಕದೇವತ್ವ-ಬಹುದೇವವಾದ, ಆಸ್ತಿಕತೆ-

ನಾಸ್ತಿಕತೆ, ಅದ್ವೈತವಾದ-ದ್ವೈತವಾದ, ವಿಶಿಷ್ಟಾದ್ವೈತವಾದ-ದ್ವೈತಾದ್ವೈತವಾದ, ಅಹಿಂಸೆ-ಹಿಂಸೆ, ಪುನರ್ಜನ್ಮವಾದ, ಸ್ವರ್ಗನರಕವಾದ, ನಿರಾಕಾರವಾದ-ಸಾಕಾರವಾದ, ಪುರಾಣವಾದ-ದರ್ಶನಶಾಸ್ತ್ರ, ಪ್ರವೃತಿವಾದ-ನಿವೃತ್ತಿವಾದ, ಆಶಾವಾದ-ನಿರಾಶಾವಾದ, ತೀವ್ರವಾದ-ಉದಾರವಾದ, ಶಾಕಾಹಾರವಾದ-ಮಾಂಸಾಹಾರವಾದ ಇತ್ಯಾದಿಗಳ ಮಿಶ್ರಣಗಳೇ ತುಂಬಿವೆ. ಹಿಂದೂಗಳ ಈ ವಿಶಾಲ ಧರ್ಮ ಸಾಹಿತ್ಯ ಮತ್ತು ವಿರೋಧಾಭಾಸಗಳು ಹಿಂದೂ ವಿದ್ವಾಂಸರ ಸಂಶೋಧನೆಗೆ(Research) ಆಹಾರ ಒದಗಿಸಬಹುದು. ಡಾ| ರಾಧಾಕೃಷ್ಣರಂತಹ ಉನ್ನತ ಮಟ್ಟದ ದಾರ್ಶನಿಕರು ಇದರಿಂದ ಆಧ್ಯಾತ್ಮವಾದವನ್ನು ಹುಡುಕಿ ತೆಗೆದಿದ್ದಾರೆ. ಸ್ವಾಮಿ ವಿವೇಕಾನಂದರು ಹಾಗೂ ಇತರ ಮಹಾನ್ ಸುಧಾರಕರು ಇದರಲ್ಲಿ ಸುಧಾರಣೆ ತಂದ ಕೀರ್ತಿಗೆ ಪಾತ್ರರಾಗುವ ಅವಕಾಶವಿದೆ. ಆದರೆ ಓರ್ವ ವಿಚಾರಶೀಲ ಹಿಂದೂ ಜನಸಾಮಾನ್ಯನಿಗೆ ಪ್ರಚಲಿತ ಹಿಂದೂ ಧರ್ಮವನ್ನು ಅರಗಿಸಿಕೊಳ್ಳಲು ಸಾಧ್ಯವಿಲ್ಲ. ಅವನು ಅದರ ಕೆಲವು ಸಾಲುಗಳನ್ನು ಓದಿ ಇದು ಕೇವಲ ಗೊಂದಲದ ಗೂಡು(Hotch Potch) ಮತ್ತು ಇಂದ್ರಜಾಲ ಅಥವಾ ತಂತ್ರ-ಮಂತ್ರ(Hocus-Pocus)ವೆಂದು ಭಾವಿಸಲು ನಿರ್ಬಂಧಿತನಾಗುತ್ತಾನೆ. ಬ್ರಾಹ್ಮಣವಾದವು ಅದರ ಪರ್ಯಾಯವಾಗಿದೆ. ಸಾಮಾನ್ಯ ಹಿಂದೂಗಳಿಗೆ ವೆಚ್ಚದಾಯಕ ಕರ್ಮಗಳು ಮತ್ತು ಶೂದ್ರರಿಗೆ ರೂಢಿಯಲ್ಲಿರುವ ಘೋರ ಅಪಮಾನಗಳೇ ಅದರ ಬುನಾದಿಯಾಗಿದೆ. ಅದನ್ನು 2500 ವರ್ಷಗಳ ಹಿಂದಿನ ಬುದ್ಧನಿಂದ ಆಧುನಿಕ ಕಾಲದ ಗಾಂಧೀಜಿಯ ವರೆಗೂ ನಿವಾರಿಸಲು ಸಾಧ್ಯವಾಗಿಲ್ಲ. ಅಂತಿಮವಾಗಿ ಡಾ| ಅಂಬೇಡ್ಕರ್‌ರಂತಹ ಆಧುನಿಕ ಮಾನವನಿಗೆ ಹಿಂದೂ ಧರ್ಮವನ್ನೇ ತೊರೆಯ ಬೇಕಾಗಿ ಬಂತು. ಅದೇ ಶೂದ್ರ ನಾಯಕ ಡಾ| ಅಂಬೇಡ್ಕರ್‌ರು ಪೂನಾ ಒಪ್ಪಂದದಲ್ಲಿ, ಗಾಂಧೀಜಿಯ ಉಪವಾಸ ಸತ್ಯಾಗ್ರಹದ ಫಲಶ್ರುತಿಯಾಗಿ ಹರಿಜನರಿಗೆ ನೀಡಲಾದ ವಿಶೇಷ ಆಯ್ಕೆಯ ಹಕ್ಕನ್ನು ತಿರಸ್ಕರಿಸಿ ಹಿಂದೂ ಜನಾಂಗಕ್ಕೆ ದೊಡ್ಡ ಉಪಕಾರ ಮಾಡಿದರು. ದುರದೃಷ್ಟವಶಾತ್, ಅಂಬೇಡ್ಕರ್‌ರು ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧ ಧರ್ಮಕ್ಕೆ ಸೇರುವಾಗ, ಭಾರತದಲ್ಲಿ ಬೌದ್ಧಧರ್ಮವು ಎಷ್ಟೊಂದು ದುರ್ಬಲವಾಗಿದೆಯೆಂಬ ಐತಿಹಾಸಿಕ ಸತ್ಯವನ್ನು ಜ್ಞಾಪಿಸಲಿಲ್ಲ. ಬ್ರಾಹ್ಮಣರು ಬುದ್ಧನನ್ನು ಹಿಂದೂ ಧರ್ಮದ ಅವತಾರ ಪುರುಷನೆಂದು ಅಂಗೀಕರಿಸಿ ಬಹಳ ಉಪಾಯದಿಂದ ಬೌದ್ಧ ಧರ್ಮವನ್ನು ಅದರ ಜನ್ಮಭೂಮಿಯಾದ ಭಾರತದಿಂದಲೇ ಗಡಿಪಾರುಗೊಳಿಸಿದ್ದರು. ಒಂದು ವೇಳೆ ಅಂಬೇಡ್ಕರ್‌ರು ಸಮಾನತೆಯನ್ನು ಬಯಸಿದ್ದರೆ ಅವರು ಗಾಂಧೀಜಿಯವರ ಮಾತನ್ನೇ ಸ್ಮರಿಸಬೇಕಾಗಿತ್ತು. ಗಾಂಧೀಜಿಯವರು ಆಫ್ರಿಕಾದ ನೀಗ್ರೋಗಳ ಮೇಲೆ ದೌರ್ಜನ್ಯ ನಡೆಯುತ್ತಿದ್ದ ಸಂದರ್ಭದಲ್ಲಿ ಹೀಗೆ ಹೇಳಿದ್ದರು:

"ಓರ್ವ ಝುಲು ವ್ಯಕ್ತಿಯು ಕ್ರೈಸ್ತನಾದರೆ, ಬಿಳಿಯ ಕ್ರೈಸ್ತನು ಆತನನ್ನು ಸಮಾನನೆಂದು ಪರಿಗಣಿಸುವುದಿಲ್ಲ. ಅದೇ ವೇಳೆ ಆ ಝುಲು ವ್ಯಕ್ತಿಯು ಇಸ್ಲಾಮ್ ಸ್ವೀಕರಿಸಿದರೆ ತಕ್ಷಣ ಆತನಿಗೆ ಉನ್ನತ ಮಟ್ಟದ ಮುಸ್ಲಿಮನಿಗೆ ಸಮಾನವಾದ ಸ್ಥಾನಮಾನ ದೊರೆಯುತ್ತದೆ."

ಬೌದ್ಧ ಧರ್ಮ

ಹಿಂದೂ ಧರ್ಮದಿಂದ ಭಿನ್ನರೂಪ ತಾಳುವುದಕ್ಕಿಂತ ಮುಂಚೆ ಬೌದ್ಧ ಧರ್ಮವು ಮೂಲತಃ ಧರ್ಮಶಾಸ್ತ್ರ(Theology)ವಾಗಿರದೆ ನೀತಿಶಾಸ್ತ್ರ(Ethics)ವಾಗಿತ್ತೆಂಬುದು ತರ್ಕಬದ್ಧವಾಗಿದೆ. ಅದು ಬುದ್ಧನ ಕಾಲದಲ್ಲಿದ್ದ ಹಿಂದೂ ಧರ್ಮ ಅರ್ಥಾತ್ ಬ್ರಾಹ್ಮಣತ್ವದ ಭ್ರಷ್ಟರೂಪದ ಪ್ರತಿಕ್ರಿಯೆಯಾಗಿ ಬೆಳೆದು ಬಂದಿದೆ. ಆ ಕಾಲದಲ್ಲಿ ಬ್ರಾಹ್ಮಣರು ಸಂಸ್ಕೃತವನ್ನು ತಮ್ಮ ಧರ್ಮಭಾಷೆಯೆಂದು ಹೇಳಿ ಜನಸಾಮಾನ್ಯರನ್ನು ಶೋಷಿಸಿ ಲಾಭ ಪಡೆಯುತ್ತಿದ್ದರು. ಹಿಂದೂ ಧರ್ಮದಲ್ಲಿ ಯಜ್ಞಗಳ ಬಾಹುಳ್ಯವಿತ್ತು. ಅದರಲ್ಲಿ ಭಾರೀ ಸಂಖ್ಯೆಯಲ್ಲಿ ಜಾನುವಾರುಗಳ ಹತ್ಯೆಯು ಕ್ರೂರ ರೀತಿಯಲ್ಲಿ ನಡೆಯುತ್ತಿತ್ತು. ಜಾನುವಾರುಗಳ ಹತ್ಯೆಯ ಹೊರತಾಗಿ ಹಿಂದೂ ಧರ್ಮದಲ್ಲಿ ಇತರ ದುಬಾರಿ ಕರ್ಮಗಳು ತುಂಬಿ ಕೊಂಡಿದ್ದುವು. ಚಿಕ್ಕ ಪುಟ್ಟ ಜನಾಂಗಗಳನ್ನು ಬಹಳ ತಿರಸ್ಕಾರ ಭಾವದಿಂದ ನೋಡಲಾಗುತ್ತಿತ್ತು. ಗೌತಮ ಬುದ್ಧನು ಬಾಲ್ಯದಿಂದಲೇ ಮಹಾ ದಯಾಳು ಮತ್ತು ವಿಚಾರಶೀಲನಾಗಿದ್ದನು. ಸ್ವಭಾವತಃ ಅತ್ಯಾಚಾರಗಳ ವಿರೋಧಿ ಮತ್ತು ಸುಧಾರಕ ಮನೋಭಾವದವನಾಗಿದ್ದನು. ಅವನಿಗೆ ಎಲ್ಲ ರೀತಿಯ ಸುಖವೂ ಪ್ರಾಪ್ತವಾಗಿತ್ತು. ಆದರೆ ರೋಗಿಗಳು ವೃದ್ಧರು ಮತ್ತು ಹೆಣಗಳನ್ನು ಕಂಡ ಅವನಿಗೆ ಜಗತ್ತಿನಲ್ಲಿ ವೈರಾಗ್ಯ ವುಂಟಾಗಿತ್ತು.

ಹೀಗೆ ಒಂದು ದಿನ ಅವನು ಅರಮನೆಯನ್ನು ತ್ಯಜಿಸಿದನು. ಘೋರ ತಪಸ್ಸಿನಿಂದ ಆತನಿಗೆ ಜ್ಞಾನೋದಯವಾಯಿತು. ಅವನು ಹೀಗೆ ಘೋಷಿಸಿದನು: "ದುಃಖಕ್ಕೆ ಆಶೆಯೇ ಕಾರಣವಾಗಿದೆ. ಮೋಕ್ಷಕ್ಕಾಗಿ ಅದರ ತ್ಯಾಗ ಅನಿವಾರ್ಯವಾಗಿದೆ." ದೇವನ ಹೆಸರಲ್ಲಿ ನಡೆಯುತ್ತಿದ್ದ ಅತ್ಯಧಿಕ ಪ್ರಾಣಿ ಹಿಂಸೆ ಮತ್ತು ವೈದಿಕ ಧರ್ಮದ ತೆರೆಮರೆಯಲ್ಲಿ ಕೆಳಜಾತಿಗಳ ಮೇಲೆ ನಡೆಸಲಾಗುತ್ತಿದ್ದ ಅತ್ಯಾಚಾರಗಳಿಗೆ ಪ್ರತಿಕ್ರಿಯೆಯಾಗಿ ಅವನು ಅಹಿಂಸೆ ಮತ್ತು ಕೆಳಜಾತಿಯನ್ನು ಪ್ರೀತಿಸುವುದಕ್ಕೆ ಒತ್ತು ಕೊಟ್ಟನು. ತನ್ನ ನೈತಿಕ ಸಿದ್ಧಾಂತಗಳ ಪ್ರಚಾರಕ್ಕಾಗಿ ಆಡುಭಾಷೆಯನ್ನು ಬಳಸಿ ವೇದಗಳನ್ನು ತಿರಸ್ಕರಿಸಿದನು. ಆತನು ಪ್ರತೀಕಾರವಾಗಿ ತನ್ನ ಧರ್ಮದಲ್ಲಿ ದೇವನಿಗೂ ಸ್ಥಾನ ಕೊಡಲಿಲ್ಲ. ಕೇವಲ ಹಿಂದೂ ಧರ್ಮ ಸುಧಾರಣೆಯೇ ಬುದ್ಧನ ಇಚ್ಛೆಯಾಗಿದ್ದರೂ ಅದಕ್ಕಾಗಿ ಅವನು ನೈತಿಕತೆಯನ್ನು ಬಳಸಿದನು. ಹಾಗಿದ್ದರೂ ಅವನ ವಿಚಾರಧಾರೆಗಳು ಹಿಂದೂ ಧರ್ಮದ ಸಿದ್ಧಾಂತಗಳಿಗಿಂತ ಮೂಲಭೂತವಾಗಿ ಭಿನ್ನವಾಗಿತ್ತೆಂಬುದು ಗಮನಾರ್ಹ. ಆದ್ದರಿಂದ ಬೌದ್ಧ ಧರ್ಮವು ಹಿಂದೂ ಧರ್ಮದ ವಿರುದ್ಧ ಒಂದು ಸ್ವತಂತ್ರ ಧರ್ಮವಾಗಿ ಉದಯವಾಯಿತು. ರಾಜವಂಶಸ್ಥನಾದ್ದರಿಂದ ಆತನ ವ್ಯಕ್ತಿತ್ವವು ಜನರ ಮೇಲೆ ಪ್ರಭಾವ ಬೀರಿತು. ಕೆಳಜಾತಿಯ

ಸಹಾನುಭೂತಿ ಮತ್ತು ಆಡುಭಾಷೆಯ ಸಹಾಯದಿಂದ ಅವನಿಗೆ ಕ್ಷಿಪ್ರ ಯಶಸ್ಸು ಪ್ರಾಪ್ತವಾಯಿತು. ಜನರು ಆತನ ಅನುಯಾಯಿಗಳಾದರು. ಆತನು ತನ್ನ ಧರ್ಮವನ್ನು ಒಂದು ಪ್ರಚಾರಕ ಧರ್ಮ(Missionary Religion)ವಾಗಿ ರೂಪಿಸಿದನು. ಸ್ವಲ್ಪಕಾಲ ಮೀನಮೇಷ ಎಣಿಸಿದ ಬಳಿಕ ಮಹಿಳೆಯರನ್ನೂ ತನ್ನ 'ಧರ್ಮ ಸಂಘ'ದಲ್ಲಿ ಪ್ರಚಾರಕರಾಗಿ ಸೇರಿಸಿಕೊಂಡನು. ಆತನು ಗೃಹಸ್ಥರು, ಭಿಕ್ಷು ಮತ್ತು ಭಿಕ್ಷುಣಿಯರಿಗಾಗಿ ಪ್ರತ್ಯಪ್ರತ್ಯೇಕ ನಿಯಮಗಳನ್ನು ರೂಪಿಸಿದನು. ತರುವಾಯ ಬುದ್ಧನ ರಾಜಾಶ್ರಯವನ್ನು ಪಡೆದುಕೊಂಡ ಬೌದ್ಧ ಧರ್ಮವು ವ್ಯಾಪಕವಾಗಿ ಹರಡಿತು. ಅಶೋಕ, ಕನಿಷ್ಕ ಮತ್ತು ಹರ್ಷ ಮುಂತಾದವರು ಅದರ ಪ್ರಚಾರದಲ್ಲಿ ಪ್ರಮುಖ ಪಾತ್ರ ವಹಿಸಿದರು. ಈ ಸಾಮ್ರಾಟರ ಧರ್ಮಪ್ರಚಾರದ ಸ್ಫೂರ್ತಿಯಿಂದಾಗಿ ಬೌದ್ಧ ಧರ್ಮವು ಭಾರತದ ಹೊರಗೂ ಹಬ್ಬಿತು. ಏಕೆಂದರೆ ಅಲ್ಲಿ ಬೌದ್ಧ ಧರ್ಮಕ್ಕೆ ಸ್ಪರ್ಧಿಯಾಗಿ ಇತರ ಯಾವುದೇ ಮಹತ್ವಪೂರ್ಣ ಧರ್ಮವಿರಲಿಲ್ಲ. ಕಾಲಕ್ರಮೇಣ ಬೌದ್ಧ ಧರ್ಮದಲ್ಲಿಯೂ ಭ್ರಷ್ಟಾಚಾರ ತುಂಬಿಕೊಂಡಿತು. ಭಾರತದಲ್ಲಿಯೇ ಅದರ ಪತನ ಆರಂಭವಾಯಿತು. ಭಿಕ್ಷುಗಳು ಮತ್ತು ಭಿಕ್ಷುಣಿಯರಲ್ಲಿ ವ್ಯಭಿಚಾರ, ಭ್ರಷ್ಟಾಚಾರ ನುಸುಳಿಕೊಂಡಿತು. ರಾಜಾಶ್ರಯದ ಸಮಾಪ್ತಿ ಹಾಗೂ ಇತರ ಐತಿಹಾಸಿಕ ಕಾರಣಗಳಿಂದಾಗಿ ಬೌದ್ಧಧರ್ಮವು ತನ್ನ ಜನ್ಮಭೂಮಿಯಲ್ಲಿಯೇ ಅಳಿಯಿತು. ಟಿಬೆಟಿನಲ್ಲಿಯೂ ಅದರ ಪರ್ಯಾವಸಾನವಾಯಿತು. ಈಗ ಬೌದ್ಧ ಧರ್ಮ ಜೀವಂತವಿರುವೆಡೆಗಳಲ್ಲಿಯೂ ಅದು ದುರ್ಬಲಗೊಂಡು ನಿಷ್ಕ್ರಿಯವಾಗಿದೆ.

ಭಾರತದಲ್ಲಿ ಅರ್ಥಾತ್ ತನ್ನ ಜನ್ಮಭೂಮಿಯಲ್ಲಿ ಪ್ರಗತಿಯ ಪರಾಕಾಷ್ಠೆಗೆ ತಲಪಿದ ಬಳಿಕ ಅದು ಪತನಗೊಂಡ ಹಿನ್ನೆಲೆಯಲ್ಲಿ ಅದರ ಉಪಯುಕ್ತತೆಯ ಮೌಲ್ಯಮಾಪನ ನಡೆಸ ಬಹುದು. ಬುದ್ಧನು ಸ್ವತಃ ವಿರೋಧಿಸಿದ್ದ ಮೂರ್ತಿಪೂಜೆಯನ್ನು ಕಾಲಕ್ರಮೇಣ ಅವನ ಅನುಯಾಯಿಗಳು ಅವನನ್ನೇ ದೇವನೆಂದು ನಂಬಿ ಅವನ ಮೂರ್ತಿಯ ಪೂಜೆ ಮಾಡ ಲಾರಂಭಿಸಿದರು. ಆತನು ಯಾವ ಅಂಧವಿಶ್ವಾಸಗಳ ವಿರುದ್ಧ ಆಂದೋಲನ ನಡೆಸಿದ್ದನೋ ಆ ಅಂಧವಿಶ್ವಾಸವು ಹಿಂದೂ ಧರ್ಮಕ್ಕಿಂತಲೂ ಅಧಿಕವಾಗಿ ಬೌದ್ಧರ ಮಹಾಯಾನ ಸಂಪ್ರದಾಯ ಮತ್ತು ಟಿಬೆಟಿನ ಲಾಮಾವಾದಿಗಳಲ್ಲಿ ಸೇರಿಕೊಂಡಿತು. ಬ್ರಾಹ್ಮಣರು ಬೌದ್ಧ ಧರ್ಮದಲ್ಲಿದ್ದ ಅಹಿಂಸೆಯಂತಹ ಆಕರ್ಷಕ ನೈತಿಕ ಸಿದ್ಧಾಂತವನ್ನು ಹಿಂದೂ ಧರ್ಮದಲ್ಲಿ ಸಮನ್ವಯಗೊಳಿಸಿ, ಬುದ್ಧನಿಗೆ ತಮ್ಮ ಧರ್ಮದಲ್ಲಿ ಅವತಾರಿಯ ಸ್ಥಾನವನ್ನು ನೀಡಿ, ಬೌದ್ಧ ಧರ್ಮವನ್ನು ಚಾಣಾಕ್ಷತನದಿಂದ ಭಾರತದಲ್ಲಿ ಅಳಿಸಿಬಿಟ್ಟರು.[1]

ಇಸ್ಲಾಮ್ ಧರ್ಮವು ಅಲ್ಪಾವಧಿಯಲ್ಲಿ ವಿಶ್ವವ್ಯಾಪಿಯಾದುದು ಒಂದು ಐತಿಹಾಸಿಕ ಅದ್ಭುತವೆಂದಾದರೆ, ಬೌದ್ಧ ಧರ್ಮವು ತನ್ನ ಹುಟ್ಟಿದ ನಾಡಿನಲ್ಲಿ ಕ್ಷಿಪ್ರ ನಾಮಾವಶೇಷ ವಾಗಿರುವುದು ಇನ್ನೊಂದು ಅದ್ಭುತವಾಗಿದೆ. ಬೌದ್ಧ ಧರ್ಮಕ್ಕೆ ವೃದ್ಧಾಪ್ಯ, ರೋಗ ಮತ್ತು ಸಾವಿನ ಭಯವು ಆಧಾರವಾಗಿತ್ತೇ ವಿನಾ ದೇವಭಯವಾಗಿರಲಿಲ್ಲ. ಅಡಿಪಾಯವಿಲ್ಲದ ಕಟ್ಟಡವು

[1]ಅದರೊಂದಿಗೆ ಶಂಕರಾಚಾರ್ಯರು ಆಂದೋಲನವೊಂದನ್ನು ನಡೆಸಿ ಬೌದ್ಧಧರ್ಮವನ್ನು ಭಾರತದಿಂದ ಉಚ್ಚಾಟಿಸಿದರು.

ಗಗನ ಕುಸುಮವಾಗಿರುವಂತೆಯೇ ದೇವವಿಶ್ವಾಸದ ಬುನಾದಿಯಲ್ಲಿ ಸ್ಥಾಪಿಸಲ್ಪಡದ ಧರ್ಮವು ನಿರರ್ಥಕವಾಗುತ್ತದೆ.

ಬೌದ್ಧ ಧರ್ಮವು ಅಹಿಂಸೆ; ಸತ್ಯ; ಆಸ್ತೇಯ; ಬ್ರಹ್ಮಚರ್ಯೆ; ಅಪರಿಗ್ರಹ (ಸಂಪತ್ತಿನ ತ್ಯಾಗ) ಸಂಗೀತ ಮತ್ತು ನೃತ್ಯಗಳ ತ್ಯಾಗ; ಅಂಜನ, ಹಣ್ಣು ಮತ್ತು ಸುಗಂಧದ್ರವ್ಯಗಳ ತ್ಯಾಗ; ಅಸಾಮಯಿಕ ಭೋಜನ ತ್ಯಾಗ; ಕೋಮಲ ಶಯ್ಯೆಯ ತ್ಯಾಗ; ಕಾಮಿನಿ ಕಾಂಚಾನದ ತ್ಯಾಗ;[2] ಇತ್ಯಾದಿ 10 ಗುಣಗಳನ್ನು ಹೊಂದಿದೆ.

ಬಖ್ತಿಯಾರ್ ಖಿಲ್ಜಿಯು ಕೆಲವಾರು ಸೈನಿಕರೊಂದಿಗೆ ಆಗಮಿಸುತ್ತಿರುವನೆಂಬ ಸುದ್ದಿ ತಿಳಿದ ಕೂಡಲೇ ಬಿಹಾರದ ರಾಜನಾಗಿದ್ದ ಬೌದ್ಧ ದೊರೆಯು ಬರಿಗಾಲಿನಲ್ಲಿ ರಾಜಧಾನಿಯಿಂದ ಓಡಿ ಹೋಗಿದ್ದ. ಅದೇ ರೀತಿ ಟಿಬೆಟ್‌ನಲ್ಲಿ ಚೀನಾ ಅತಿಕ್ರಮಣ ನಡೆಸಿದ ಸಂದರ್ಭದಲ್ಲಿ ಸ್ಥಳೀಯರು ಯಾವುದೇ ಪ್ರತಿಭಟನೆ ತೋರಿಸಲಿಲ್ಲ. ಇದು ಅಸ್ತಿತ್ವಕ್ಕಾಗಿ ಹೋರಾಡದಿರುವ ಬೌದ್ಧ ಧರ್ಮದ ಅಸಾಮರ್ಥ್ಯಕ್ಕೆ ಐತಿಹಾಸಿಕ ಪುರಾವೆಯಾಗಿದೆ. ನಾಸ್ತಿಕವಾದ ಮತ್ತು ನಿರಾಶಾವಾದಗಳು(Atheism and pessimism) ಮಾನವ ಕಲ್ಯಾಣಕ್ಕೆ ಕಿಂಚಿತ್ತೂ ಕಲ್ಯಾಣ ಕಾರಿಯಾಗಿಲ್ಲ. ನೈತಿಕತೆಗೂ ಅಸ್ತಿತ್ವ ಹೋರಾಟದ ಯಶಸ್ಸಿಗೂ ಅದು ಪ್ರಯೋಜನಕಾರಿಯಲ್ಲ.[3]

---

[2]ಜೀವನ ಪರ್ಯಂತ ಬ್ರಹ್ಮಚರ್ಯೆಯ ಸಿದ್ಧಾಂತದಲ್ಲಿ ಆಧಾರಿತವಾಗಿರುವ ಧರ್ಮವು ಮಾನವ ಪ್ರಕೃತಿಗೆ ವಿರುದ್ಧವಾಗಿದೆ. ಅದರಲ್ಲಿ ದೇವನ ನಂಬಿಕೆಯಿದ್ದರೂ ಅಖಿಲ ಮಾನವ ಧರ್ಮವೆನಿಸಲಾರದು ಮತ್ತು ಅದು ಸ್ಥಿರವಾಗಿ ಉಳಿಯಲಾರದು. ಆ ಸಿದ್ಧಾಂತಗಳನ್ನು ಪಾಲಿಸಲೂ ಸಾಧ್ಯವಿಲ್ಲ.

[3]ವೈಚಾರಿಕವಾಗಿ ನೋಡಿದರೆ ಬೌದ್ಧ ಧರ್ಮವು ಧರ್ಮಗಳ ಸಾಲಿನಲ್ಲಿಯೇ ಸೇರುವುದಿಲ್ಲ. ದೇವ ಮತ್ತು ದೇವದತ್ತ ಜ್ಞಾನ ನಂಬಿಕೆಗಳೇ ಧರ್ಮದ ಮೂಲಾಧಾರವಾಗಿವೆ. ಬುದ್ಧನು ಹಿಂದೂ ಜಾತಿಯವನಾಗಿದ್ದರೂ ದೇವನನ್ನು ಮತ್ತು ವೇದಗಳನ್ನು ನಂಬದೆ ನಿರಾಕರಿಸಿದನು. ಇದೇ ಅವನ ಧರ್ಮದ ಮೂಲಾಧಾರವಾಗಿದೆ. ಹಾಗಾದರೆ ಅವನ ತಪಸ್ಸು ಜ್ಞಾನಗಳಿಗೆ ಯಾವ ಅರ್ಥವಿದೆ? ಅವನಿಗೆ ತಪಸ್ಸು ಮತ್ತು ಧ್ಯಾನದ ಮೂಲಕ ಗಳಿಸಿದ ಜ್ಞಾನ ಎಲ್ಲಿಂದ ಮತ್ತು ಯಾರಿಂದ ದೊರೆಯಿತು? ದೇವನೇ ಜ್ಞಾನದ ಮೂಲವಾಗಿದ್ದಾನೆ. ಬುದ್ಧನು ದೇವನನ್ನೂ ನಂಬಲಿಲ್ಲ. ದೇವೋಪಾಸನೆ ಮತ್ತು ಭಕ್ತಿಯ ಶಿಕ್ಷಣವನ್ನೂ ನೀಡಲಿಲ್ಲ. ಲೌಕಿಕ ಜೀವನದ ಈ ಕಲ್ಯಾಣ ಮತ್ತು ಮೋಕ್ಷದ ಮೌಲ್ಯಗಳೇ ಬುದ್ಧನ ಬೋಧನೆಗಳಲ್ಲಿರಲಿಲ್ಲ.

ಲೌಕಿಕ ತ್ಯಾಗ ಮತ್ತು ಬ್ರಹ್ಮಚರ್ಯೆಯು ಬೌದ್ಧ ಧರ್ಮದ ಮೂಲಶಿಕ್ಷಣಗಳಾಗಿವೆ. ಈ ಶಿಕ್ಷಣಗಳ ಪ್ರಕಾರ ಸೃಷ್ಟಿಯೇ ನಿರರ್ಥಕವಾಗುತ್ತದೆ. ಇಂತಹ ಧರ್ಮವು ಸಕಲ ಮಾನವರ ಧರ್ಮ ವೆನಿಸಿಕೊಳ್ಳಲು ಸಾಧ್ಯವಿಲ್ಲ. ಮಾನವನ ಸಮಗ್ರ ಜೀವನ ವಿಧಾನಗಳನ್ನೊಳಗೊಂಡ ಧರ್ಮವೇ ಪರಿಪೂರ್ಣ ಧರ್ಮವಾಗಿರುತ್ತದೆ. ಅದರಲ್ಲಿ ಲೌಕಿಕ ಜೀವನದ ನಿಯಮಗಳಿರಬೇಕು. ಪಾರಲೌಕಿಕ ಶಿಕ್ಷಣಗಳೂ ಸೇರಿರಬೇಕು. ಎರಡೂ ರೀತಿಯ ಶಿಕ್ಷಣಗಳು ಪರಸ್ಪರ ಸಂತುಲಿತವಾಗಿರಬೇಕು.

ಬೌದ್ಧ ಧರ್ಮವು ವಿಶಿಷ್ಟ ರೀತಿಯ ಮತವಾಗಿದೆ. ಬುದ್ಧನು ಓರ್ವ ಸಹೃದಯಿಯಾಗಿದ್ದ. ಅವನ ಕಾಲದಲ್ಲಿ ಧರ್ಮದ ದುರುಪಯೋಗ ನಡೆಯುತ್ತಿತ್ತು. ಬಾಹ್ಯಾಡಂಬರ ಮೆರೆದಾಡುತ್ತಿತ್ತು. ಧಾರ್ಮಿಕ ವರ್ಗದ ಜೀವನವೂ ಅದೇ ರೀತಿಯಿತ್ತು. ಸದಾಚಾರ ಮತ್ತು ನೈತಿಕತೆ ಕುಂಠಿತವಾಗಿತ್ತು. ಆದರೆ ಅವೆಲ್ಲವೂ ಧರ್ಮದ ಹೆಸರಲ್ಲಿಯೇ ನಡೆಯುತ್ತಿತ್ತು. ಆಗ ದೇವದಾಸಿಯರ ಹೆಸರಲ್ಲಿ ಯುವತಿಯರನ್ನು ಮಂದಿರಗಳಿಗೆ ಹರಕೆ ಒಪ್ಪಿಸಿ ಅವರ ನೃತ್ಯ-ಗಾಯನ, ಭೂರಿ ಭೋಜನ ಸಂತರ್ಪಣೆ, ಗಾಂಜಾ ಭಂಗಿ ಮುಂತಾದ ಮಾದಕ ವಸ್ತುಗಳ ಸೇವನೆ ಇತ್ಯಾದಿಗಳು ಧಾರ್ಮಿಕ ಕಾರ್ಯಗಳಲ್ಲಿ ಸೇರಿದರೆ ಧರ್ಮದ ಪರಿಶುದ್ಧಿ ಮತ್ತು ಧಾರ್ಮಿಕ ಪಾವಿತ್ರ್ಯ ಎಲ್ಲಿ ಉಳಿದೀತು? ಅದರೊಂದಿಗೆ ಯಜ್ಞಗಳು ಮತ್ತು ಜಾನುವಾರುಗಳ ಹಿಂಸೆ ಯಥೇಚ್ಛವಾಗಿ ನಡೆಯುತ್ತಿತ್ತು. ಈ ಪರಿಸ್ಥಿತಿಯು ಬುದ್ಧನನ್ನು ಧರ್ಮ ವಿರೋಧಿಯನ್ನಾಗಿ ಮಾಡಿತು.

ಧರ್ಮದಲ್ಲಿ ಭೌತಿಕತೆ ಪ್ರವೇಶಿಸಿದೆಯೆಂದು ಬುದ್ಧನಿಗೆ ಮನವರಿಕೆಯಾಯಿತು. ಅದರಿಂದ ಆತನು ಆಧ್ಯಾತ್ಮವನ್ನು ತನ್ನ ಧರ್ಮದ ಆಧಾರವಾಗಿ ಮಾಡಿದನು. ವೈರಾಗ್ಯ, ಬ್ರಹ್ಮಚರ್ಯೆ, ಸಹೃದಯ, ಪ್ರೇಮ, ನಮ್ರತೆ ಮತ್ತು ಸ್ನೇಹದ ಪ್ರಚಾರವನ್ನು ಆರಂಭಿಸಿದನು. ಅದು ಸಮಾಜದ ಮೇಲೆ ಪ್ರಭಾವ ಬೀರಿತು.

ಬೌದ್ಧ ಧರ್ಮವು ಭಾರತದ ಹೊರಗೆ ಕಾಲಿರಿಸಿದಾಗ ಇತರ ದೇಶಗಳಲ್ಲಿಯೂ ಅದಕ್ಕೆ ಹಾರ್ದಿಕ ಸ್ವಾಗತ ದೊರೆಯಿತು. ಆದರೆ ಆ ಎಲ್ಲ ದೇಶಗಳಲ್ಲಿ ಬಹುದೇವವಾದ ರೂಢಿಯಲ್ಲಿತ್ತು. ಬೌದ್ಧ ಧರ್ಮವು ನಂಬಿಕೆ ಮತ್ತು ಧೋರಣೆಗಳಲ್ಲಿ ಹೊಂದಾಣಿಕೆ ನಡೆಸಿತು. ತನ್ಮೂಲಕ ಅದು ಬುದ್ಧನನ್ನೇ ಪೂಜಿಸುವ ಧರ್ಮವಾಯಿತು. ಬ್ರಹ್ಮಚರ್ಯೆ ಹಾಗೂ ಭಿಕ್ಷು ಮತ್ತು ಭಿಕ್ಷುಣಿಯರ ಮಿಲನದ ಸ್ಥಿತಿಯೂ ದೇವದಾಸಿಯರ ಮತ್ತು ಅರ್ಚಕರ ಮಿಲನದಂತಾಯಿತು. ಇದರಿಂದಲೂ ಬೌದ್ಧ ಧರ್ಮದ ಗೌರವಕ್ಕೆ ಹಾನಿಯಾಯಿತು. ಈ ಹಿನ್ನೆಲೆಯಲ್ಲಿ ಶಂಕರಾಚಾರ್ಯರು ಆಂದೋಲನ ವನ್ನು ನಡೆಸಿ ಬೌದ್ಧ ಧರ್ಮವನ್ನು ಭಾರತದಿಂದಲೇ ಹೊರಹಾಕಿದರು. ಬೌದ್ಧ ವಿಹಾರಗಳನ್ನೂ ಹಾಳುಗೆಡವಿದರು. ಆದರೆ ಅದರ ಆರೋಪವನ್ನು ಮುಸ್ಲಿಮ್ ಬಾದಶಹರ ಮೇಲೆಯೇ ಹೊರಿಸಲಾಗಿದೆ.

ಬೌದ್ಧ ಧರ್ಮದಲ್ಲಿ ಇತರ ಅನೇಕ ವಿರೋಧಾಭಾಸಗಳಿವೆ. ಬುದ್ಧನು ದೇವನನ್ನೇ ನಂಬುತ್ತಿರಲಿಲ್ಲ. ಹಾಗಾದರೆ ಆತನು ಸೃಷ್ಟಿಯ ಉತ್ಪತ್ತಿಯನ್ನು ಹೇಗೆ ಮತ್ತು ಯಾರಿಂದ ಎಂದು ನಂಬುತ್ತಿದ್ದನು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಎರಡನೆಯದಾಗಿ ಬುದ್ಧನು ಕೈಗೊಂಡ ತಪಸ್ಸಿಗೆ ಯಾವ ಅರ್ಥವಿದೆ? ತಪಸ್ಸಿನ ಸಂಬಂಧವು ದೇವನೊಂದಿಗೆಯೇ ಇರುತ್ತದೆ. ಮೂರನೆಯದಾಗಿ ದೇವನೇ ಜ್ಞಾನದ ಮೂಲ. ಹಾಗಿರುತ್ತಾ ದೇವನನ್ನೇ ನಂಬದ ಬುದ್ಧನಿಗೆ ದೊರಕಿರುವ ಜ್ಞಾನಕ್ಕೆ ಆಧಾರವೇನು? ಅವನಿಗೆ ಯಾರಿಂದ ಮತ್ತು ಹೇಗೆ ಜ್ಞಾನ ಪ್ರಾಪ್ತವಾಯಿತು? ಬುದ್ಧ ಯಾವ ದೃಶ್ಯ ಗಳಿಂದ ಪ್ರಭಾವಿತನಾಗಿ ವೈರಾಗಿಯಾಗಿದ್ದನೋ ಆ ಪ್ರಕಾರವೇ ಕೆಲವು ನಿಯಮಗಳನ್ನು ನಿರ್ಣಯಿಸಿದನು. ಆ ನಿಯಮಗಳೆಲ್ಲ ತ್ಯಾಗವನ್ನೇ ಆಧರಿಸಿವೆ. ಅಂತಹ ಧರ್ಮವು ಸಂಪೂರ್ಣ ಜೀವನ ಧರ್ಮವೆನಿಸ ಲಾರದು. ಆ ಪ್ರಕಾರ ಜೀವಿಸಲೂ ಸಾಧ್ಯವಾಗಲಾರದು. ನಾಲ್ಕನೆಯದಾಗಿ ಬೌದ್ಧ ಧರ್ಮದ ಪ್ರಕಾರ ದೇಹದೊಂದಿಗೆ ಆತ್ಮವೂ ಸಾಯುತ್ತದೆ. ಕರ್ಮಫಲದ ಪ್ರಕಾರ ಇನ್ನೊಂದು ದೇಹ ಹುಟ್ಟುತ್ತದೆ. ಈ ಹಿನ್ನೆಲೆಯಲ್ಲಿ ಮುಕ್ತಿ ಅಥವಾ ಮೋಕ್ಷಕ್ಕೆ ಯಾವ ಅರ್ಥವಿದೆ? ಒಂದು ವೇಳೆ ಮನುಷ್ಯ ಪುನಃ ಹುಟ್ಟುವುದಿಲ್ಲವೆಂದಾದರೆ ಮಾನವ ಸೃಷ್ಟಿಯೇ ನಿಷ್ಫಲವಾಗುತ್ತದೆ.

ಕ್ರೈಸ್ತ ಧರ್ಮ

ಮಹಾತ್ಮ ಏಸು(ಈಸಾ)ರವರ ಮೂಲಕ ಬೈಬಲ್‌ನ ರೂಪದಲ್ಲಿ ಅವತೀರ್ಣಗೊಂಡಿರುವ ದೈವಿಕ ಜ್ಞಾನವೇ ಕ್ರೈಸ್ತ ಧರ್ಮಕ್ಕೆ ಆಧಾರವಾಗಿದೆ. ಬೇಡಿಕೆಯ ಪರಿಣಾಮವು ಅದರ ಈಡೇರಿಕೆಯಾಗಿದೆ. ಯಹೂದಿಯರ ಧಾರ್ಮಿಕ ಗ್ರಂಥದಲ್ಲಿ ಸೇರ್ಪಡೆ ಮತ್ತು ತಿದ್ದುಪಡಿಯಾಗಿದೆ. ಹರ್ಝ್ರತ್ ಮೂಸಾರ ಉಪದೇಶಗಳಿಂದ ಯಹೂದಿಗಳು ಬಹಳಷ್ಟು ಹಿಂದೆ ಸರಿದಿದ್ದರು. ಈ ಕೆಡುಕುಗಳ ನಿವಾರಣೆಗಾಗಿ ಹರ್ಝ್ರತ್ ಈಸಾ ದೇವ ಸಂದೇಶವಾಹಕರಾಗಿ ಆಗಮಿಸಿದರು. ಬೈಬಲ್ ಮತ್ತು ತೌರಾತ್‌ನ ತಿದ್ದುಪಡಿಯ ಮೂಲಕ ಅದು ಜಗತ್ತಿಗೆ ದೊರೆಯಿತು. ಜಗತ್ತಿನ ಕಲ್ಯಾಣಕ್ಕಾಗಿ ಈಸಾರು ಅದ್ಭುತ ಆತ್ಮ ಬಲಿದಾನ[1] ನಡೆಸಿದರು. ಹಾಗಿದ್ದರೂ ಈಸಾ ಮಸೀಹರಿಗೆ ತನ್ನ ಜೀವಮಾನದಲ್ಲಿ ನಿರೀಕ್ಷಿತ ಯಶಸ್ಸು ದೊರೆಯಲಿಲ್ಲ. ಅವರ ಕಾಲಾನಂತರ ಈಸಾರ ಧರ್ಮವು ವಿಶ್ವಧರ್ಮವಾಗಿ ಮಾರ್ಪಟ್ಟಿತು. ಅವರು ಕನ್ಯಾ ಮರ್ಯಮ್‌ರಲ್ಲಿ ಹುಟ್ಟಿದರು. ದೇವನ ಅದ್ಭುತಗಳಲ್ಲಿ ವಿಶ್ವಾಸವಿರಿಸುವವರು ಅದನ್ನು ತರ್ಕಬದ್ಧ ಕಥನ(Rational) ಎಂದು ನಂಬುತ್ತಾರೆ ಮತ್ತು ನಂಬಬೇಕಾಗಿದೆ.

ಪ್ರಥಮ ಮಾನವನ ಉತ್ಪತ್ತಿಯು ವಿಜ್ಞಾನದ ಮಟ್ಟಿಗೆ ಅಜ್ಞಾತವಾಗಿದೆ. ಅದೇ ರೀತಿ ಪ್ರಥಮ ಬೀಜ ಅಥವಾ ಪ್ರಥಮ ಹಣ್ಣಿನ ವಿಷಯವು ವಿಜ್ಞಾನಕ್ಕೆ ಅಜ್ಞಾತವಾಗಿದೆ. ಧರ್ಮ ನಿಷ್ಠರ ಮಟ್ಟಿಗೆ ಅದು ದೇವನ ಕ್ರಿಯೆಯಾಗಿದೆ. ಪ್ರಾಚೀನ ಹಿಂದೂ ಧರ್ಮವೂ ಇದೇ ರೀತಿಯ ಉತ್ಪತ್ತಿಯನ್ನು ಅನುಮೋದಿಸುತ್ತದೆ. ಶಂಕರನು ಸ್ವಯಂಭು ಅರ್ಥಾತ್ ತಂದೆತಾಯಿಗಳಿಲ್ಲದೆ ಉದ್ಭವಿಸಿದ್ದನು. ಆದರೆ ಆತನಿಗೆ ಗಣೇಶ ಮತ್ತು ಕಾರ್ತಿಕೇಯರೆಂಬ ಈರ್ವರು ಪುತ್ರರಿದ್ದರು. ರಾಮನ ಪತ್ನಿಯ ಜನನವು ಇದೇ ರೀತಿಯಲ್ಲಿ ಆಗಿತ್ತು. ಜನಕನು ಆಕೆಯನ್ನು ಭೂಮಿಯೊಳಗಿಂದ ಪಡೆದಿದ್ದನು. ಕೃಷ್ಣನ ಸಂಬಂಧಿಕಳಾಗಿದ್ದ ಕುಂತಿಯು ಕೌಮಾರ್ಯ ಸ್ಥಿತಿಯಲ್ಲಿಯೇ ಕರ್ಣನೆಂಬ ಪುತ್ರನನ್ನು ಪಡೆದಿದ್ದಳು. ಈ ಎಲ್ಲ ಜನನಗಳು ಹಿಂದೂ ಧರ್ಮದಲ್ಲಿ ಪವಿತ್ರವೆನಿಸಿವೆ. ಈಸಾ ಮಸೀಹರು ಕೇವಲ ದೇವಸಂದೇಶವಾಹಕರಾಗಿದ್ದರೂ ಈಸಾಯಿ(ಕ್ರೈಸ್ತ) ಧರ್ಮದಲ್ಲಿ ದೋಷಗಳು ನುಸುಳಿಕೊಂಡುವು. ಕ್ರೈಸ್ತರಲ್ಲಿರುವ ದೇವ, ದೇವಪುತ್ರ ಮತ್ತು ಆತ್ಮವೆಂಬ ತ್ರಿಏಕತ್ವ ಕಲ್ಪನೆಯು ಹಿಂದೂಗಳ ತ್ರಿಮೂರ್ತಿ ಕಲ್ಪನೆಯಾಗಿರುವ ಬ್ರಹ್ಮ, ವಿಷ್ಣು, ಮಹೇಶ ಕಲ್ಪನೆಗಿಂತ ದೋಷಪೂರ್ಣವಾಗಿದೆ. ವಾಸ್ತವದಲ್ಲಿ ಹಿಂದೂಗಳ ಈ ತ್ರಿಮೂರ್ತಿಯು

---

[1] ಲೇಖಕರು ಕ್ರೈಸ್ತರ ವಿಶ್ವಾಸವನ್ನಷ್ಟೆ ಹೇಳಿದ್ದಾರೆ. ಅನ್ಯಥಾ ಮುಸ್ಲಿಮರ ವಿಶ್ವಾಸ ಪ್ರಕಾರ ಈಸಾರನ್ನು(ಅ) ಶಿಲುಬೆಗೇರಿಸಲಾಗಿಲ್ಲ. ಜೀವಂತವಾಗಿ ಆಕಾಶಕ್ಕೇರಿಸಲ್ಪಟ್ಟರು- ಅನು

ಮೂಲತಃ ದೇವನ ಗುಣವಾಚಕ ನಾಮಗಳಾಗಿವೆ. ಬ್ರಹ್ಮ(Creator) ಎಂದರೆ ಸೃಷ್ಟಿಕರ್ತ, ವಿಷ್ಣು(Protector) ಎಂದರೆ ಸೃಷ್ಟಿಯ ಪರಿಪಾಲಕ, ಮಹೇಶ(Destroyer) ಎಂದರೆ ಸೃಷ್ಟಿಯ ಸಂಹಾರಕ. ಕಾಲಕ್ರಮೇಣ ಜೈನರ ಸಂಪರ್ಕದಿಂದಾಗಿ ಹಿಂದೂಗಳಲ್ಲಿ ಮೂರ್ತಿ ಪೂಜೆಯು ಸೇರಿಕೊಂಡಿತು. ಆ ಮೂವರಿಗೂ ಸಾಕಾರ ರೂಪವನ್ನು ನೀಡಲಾಯಿತು. ಮೂಲತಃ ಆ ತನಕ ಅವು ನಿರಾಕಾರವಾದ ದೇವನ ಗುಣವಾಚಕ ನಾಮಗಳಾಗಿದ್ದುವು. ಆದರೆ ಕ್ರೈಸ್ತರ ತ್ರಿಏಕತ್ವವು ದೇವನ ಗುಣವಾಚಕ ನಾಮವಾಗಿರದೆ ಸ್ವತಂತ್ರ ಅಸ್ತಿತ್ವವನ್ನು ಹೊಂದಿದೆ. ಈಸಾರು ದೇವಪುತ್ರನೆಂಬ ಕಲ್ಪನೆಯು ಪೌರಾಣಿಕ ಹಿಂದೂ ಧರ್ಮದಲ್ಲಿರುವ ಅವತಾರದ ಕಲ್ಪನೆಗೆ ಸಮಾನವಾಗಿದೆ. ಇದೇ ಕಲ್ಪನೆ ಮತ್ತು ನಂಬಿಕೆಗಳಿಂದಾಗಿ ಕ್ರೈಸ್ತ ಧರ್ಮವು ಏಕದೇವವಾದ ದಿಂದ ಹೊರ ಹೋಯಿತು. ಅದರೊಂದಿಗೆ ಹಿಂದೂ ಧರ್ಮದಲ್ಲಿದ್ದಂತಹ ಅಂಧವಿಶ್ವಾಸ ಮತ್ತು ಮೂರ್ತಿಪೂಜೆಯ ದೋಷಗಳು ಕ್ರೈಸ್ತ ಧರ್ಮದಲ್ಲಿ ಸೇರಿಕೊಂಡಿತು.

ಕಾಲಕ್ರಮೇಣ ಕ್ರೈಸ್ತ ಧರ್ಮದಲ್ಲಿ ಮರ್ಯಮರ ಪೂಜೆಯೂ ಆರಂಭವಾಯಿತು. ಈಸಾರಲ್ಲಿ ಕೇವಲ ನಂಬಿಕೆ ಮತ್ತು ಪ್ರಾಯಶ್ಚಿತ್ತಗಳಿಗೆ ಹೆಚ್ಚು ಒತ್ತು ನೀಡಲಾಯಿತು. ಅಂತೆಯೇ ಸಾಯುವುದಕ್ಕಿಂತ ಮುಂಚಿತವಾಗಿ ಕ್ರೈಸ್ತ ಪಾದ್ರಿಗಳ ಸಮಕ್ಷಮ ಪಾಪದ ಪ್ರಾಯಶ್ಚಿತ್ತವು ಮೋಕ್ಷದ ಹಾದಿಯೆಂದು ನಂಬಲಾಯಿತು. ಪೌರಾಣಿಕ ಹಿಂದೂ ಧರ್ಮ ದಂತೆಯೇ ಕ್ರೈಸ್ತ ಧರ್ಮದಲ್ಲಿ, ದೇವನನ್ನು ಪ್ರಮುಖ(Primary) ಸ್ಥಾನದಿಂದ ದ್ವಿತೀಯ (Secondary) ಸ್ಥಾನಕ್ಕೆ ಸರಿಸಲಾಗಿದೆ. ಕ್ರೈಸ್ತ ಧರ್ಮದಲ್ಲಿ ನೈತಿಕ ಮೌಲ್ಯಗಳಿಗೆ ಬಹಳ ಕಡಿಮೆ ಗಮನ ನೀಡಲಾಗಿದೆ. ಯುರೋಪು ಮತ್ತು ಅಮೇರಿಕಾಗಳಲ್ಲಿ ಮದ್ಯಪಾನ, ಜೂಜಾಟ ಮತ್ತು ವ್ಯಭಿಚಾರಗಳು[1] ಪರಾಕಾಷ್ಠೆಗೆ ತಲಪಿವೆ. ಆಫ್ರಿಕಾದಲ್ಲಿ ಕರಿಯ ಬಿಳಿಯ ಪಕ್ಷಪಾತ ಮತ್ತು ಬಿಳಿಯ ಕ್ರೈಸ್ತರು ಕರಿಯ ಕ್ರೈಸ್ತರ ಮೇಲೆ ನಡೆಸುವ ಅತ್ಯಾಚಾರಗಳು, ಹಿಂದೂಗಳು ಕ್ರೈಸ್ತರ ಮೇಲೆ ನಡೆಸುತ್ತಿರುವ ಅತ್ಯಾಚಾರಕ್ಕೆ ಸಮಾನವಾಗಿದೆ. ಹಿಂದೂ ಧರ್ಮದಂತೆಯೇ ಕ್ರೈಸ್ತ ಧರ್ಮ ದಲ್ಲಿಯೂ ಸಮಾನತೆ ಮತ್ತು ಸಹೋದರತೆ(Equality and Fraternity)ಯ ಭಾವನೆ ಗಳನ್ನು ಬೆಳೆಸುವ ಕ್ಷಮತೆ ಮತ್ತು ಸಾಮರ್ಥ್ಯವಿಲ್ಲದಿರುವುದು ಸುಸ್ಪಷ್ಟವಾಗಿದೆ. ಆದ್ದರಿಂದ ದೇವನು ಪೂರ್ವ ಧರ್ಮದಲ್ಲಿ ಸೇರಿಕೊಂಡಿದ್ದ ದೋಷಗಳನ್ನು ನಿವಾರಿಸಿ ಜನಕಲ್ಯಾಣಕ್ಕಾಗಿ ಹಝ್ರತ್ ಮುಹಮ್ಮದ್‌ರನ್ನು ಅಂತಿಮ ದೇವ ಸಂದೇಶವಾಹಕರಾಗಿ ಜಗತ್ತಿಗೆ ಕಳುಹಿಸಿದನು. ಏಕೆಂದರೆ ಕುರ್‌ಆನ್ ಎಂಬ ಅಂತಿಮ ದೈವಿಕ ಆದೇಶಗಳ ಮೂಲಕ ಜಗತ್ತಿನಲ್ಲಿರುವ ಸಕಲ ಕೆಡುಕುಗಳು ಮತ್ತು ದೌರ್ಬಲ್ಯಗಳನ್ನು ಶಾಶ್ವತವಾಗಿ ಕೊನೆಗೊಳಿಸಬೇಕಾಗಿತ್ತು.

---

[1] ಈಗ ಸಲಿಂಗ ರತಿ ಸಂಬಂಧ (Homo Sexuality and Lesbianism) ಮತ್ತು ಸಲಿಂಗ ವಿವಾಹವನ್ನೂ ಕಾನೂನು ಬದ್ಧವೆಂದು ಅಂಗೀಕರಿಸಲಾಗುತ್ತಿದೆ.

5. ಇಸ್ಲಾಮ್ ಧರ್ಮ

ಇಸ್ಲಾಮಿನ ಮೌಲ್ಯಮಾಪನಕ್ಕೆ ಪ್ರಥಮವಾಗಿ ಮುಹಮ್ಮದ್‌ರ ವ್ಯಕ್ತಿತ್ವದ ಮೌಲ್ಯಮಾಪನದ ಅಗತ್ಯವಿದೆ. ಅವರ ಮೂಲಕ ದೇವಾದೇಶಗಳು ಕುರ್‌ಆನಿನ ರೂಪದಲ್ಲಿ ಅಂತಿಮವಾಗಿ ಪ್ರಕಟಗೊಂಡಿತು. ರಾಮ, ಬುದ್ಧ ಮತ್ತು ಮಹಾವೀರರಂತೆ ಮುಹಮ್ಮದ್‌ರು ರಾಜ ಕುಟುಂಬದಲ್ಲಿ ಜನಿಸಿರಲಿಲ್ಲ. ಅವರ ಜನನಕ್ಕಾಗಿ ಉತ್ಸವಗಳು ಆಚರಿಸಲ್ಪಡಲಿಲ್ಲ. ಸುಖಸಮೃದ್ಧಿಗಳಿಂದ ಅವರ ಪಾಲನೆ ಪೋಷಣೆಯೂ ನಡೆಯಲಿಲ್ಲ. ಅವರ ಶಿಕ್ಷಣ-ದೀಕ್ಷೆಗಳಿಗಾಗಿ ಯಾವ ವ್ಯವಸ್ಥೆಯೂ ಇರಲಿಲ್ಲ. ತಾಯಿಯ ಗರ್ಭದಲ್ಲಿರುವಾಗಲೇ ಅವರ ತಂದೆ ಮೃತರಾಗಿದ್ದರು. ತಮ್ಮ ಆರನೆಯ ವಯಸ್ಸಿನಲ್ಲಿಯೇ ತಾಯಿಯನ್ನೂ ಕಳೆದುಕೊಂಡರು. ಎಂಟನೆಯ ವಯಸ್ಸಿನಲ್ಲಿ ಅವರ ತಾತ ತೀರಿಕೊಂಡರು. ಅವರಿಗೆ ದೊಡ್ಡಪ್ಪ ಅಬೂತಾಲಿಬ್‌ರ ಪ್ರೀತಿ ಮತ್ತು ಸಹಾನುಭೂತಿ ಮಾತ್ರ ದೊರೆಯಿತು. ಹೀಗೆ ಶಿಕ್ಷಣ ಹಾಗೂ ಸುಖಸಮೃದ್ಧಿಯ ವಾತಾವರಣದಿಂದ ಸಂಪೂರ್ಣ ವಂಚಿತರಾಗಿದ್ದರು. ನಲ್ವತ್ತು ವಯಸ್ಸಿನ ತನಕ ಪ್ರಾಮಾಣಿಕತೆ, ಸತ್ಯಸಂಧತೆ ಮತ್ತು ಸನ್ನಡತೆಯ ಜೀವನ ಸಾಗಿಸಿ ಅಮೀನ್(ಪ್ರಾಮಾಣಿಕ) ಎಂಬ ಖ್ಯಾತಿಗೆ ಪಾತ್ರರಾದರು. ಆರಂಭದಿಂದ ಪ್ರವಾದಿತ್ವ ಪ್ರಾಪ್ತಿಯಾಗುವ ತನಕ ಮತ್ತು ಅನಂತರ ಜಗತ್ತಿನಲ್ಲಿ ಇಸ್ಲಾಮನ್ನು ಸಂಪೂರ್ಣವಾಗಿ ಪ್ರತಿಷ್ಠಾಪಿಸಿ ನಿಧನರಾಗುವ ತನಕ ಅವರು ನಿರಕ್ಷರಿಯಾಗಿಯೇ ಉಳಿದಿದ್ದರು. ನಲ್ವತ್ತನೇ ವಯಸ್ಸಿನಲ್ಲಿ ಅವರಿಗೆ ದಿವ್ಯಜ್ಞಾನ ಲಭಿಸಿತು. ಎಲ್ಲರಿಗಿಂತ ಮುಂಚಿತವಾಗಿ ಅವರ ಪತ್ನಿ ಖದೀಜ, ತರುವಾಯ ದೊಡ್ಡಪ್ಪನ ಮಗನಾದ ಹದಿಹರೆಯದ ಅಲೀ, ಗುಲಾಮ ಝೈದ್ ಮತ್ತು ಮಿತ್ರ ಅಬೂಬಕರ್ ಪ್ರವಾದಿವರ್ಯರ ಪ್ರೇರಣೆಯಂತೆ ಇಸ್ಲಾಮ್ ಸ್ವೀಕರಿಸಿದರು. ತರುವಾಯ ಅವರ ನಿಕಟವರ್ತಿಗಳು ಇಸ್ಲಾಮ್ ಸ್ವೀಕರಿಸ ತೊಡಗಿದರು. ಅದರೊಂದಿಗೆ ಅನ್ಯಧರ್ಮೀಯರ ವಿರೋಧವೂ ಆರಂಭವಾಯಿತು. ದಿನಗಳೆದಂತೆ ಅವರ ಸಂಖ್ಯೆ ಹೆಚ್ಚಿತು. ಆ ಕಾಲದ ರಾಜ್ಯಾಧಿಕಾರ ಮತ್ತು ಅನೇಕ ರೀತಿಯ ಆಮಿಷಗಳಿಂದ ಅವರನ್ನು ಸತ್ಯದಿಂದ ಹಿಮ್ಮೆಟ್ಟಿಸಲು ಪ್ರಯತ್ನಿಸಿದರು. ಅದು ವಿಫಲವಾದಾಗ ಅವರ ಅನುಯಾಯಿಗಳನ್ನು ಕ್ರೂರವಾಗಿ ಹಿಂಸಿಸಿದರು. ವಿರೋಧಿಗಳ ಹಿಂಸೆಯನ್ನು ಸಹಿಸಲಾಗದೆ ಅವರ ಅನುಯಾಯಿಗಳು ದೇಶ ತೊರೆದು ಇಥಿಯೋಪಿಯಾದಲ್ಲಿ ಆಶ್ರಯ ಪಡೆಯಬೇಕಾಯಿತು. ಶತ್ರುಗಳಾದ ಕುರೈಶರು[1] ಅಲ್ಲಿಯೂ ಅವರ ಬೆನ್ನು ಬಿಡಲಿಲ್ಲ. ಆದರೆ ಅಲ್ಲಿನ

---

[1]ಕುರೈಶ್ ಗೋತ್ರವು ಅರೇಬಿಯಾದಲ್ಲಿ ಪ್ರಸಿದ್ಧ ಮತ್ತು ಪ್ರತಿಷ್ಠಿತ ಗೋತ್ರವಾಗಿತ್ತು. ಅಲ್ಲಾಹನ ಪ್ರವಾದಿ ಹ.ಮುಹಮ್ಮದ್‌ರು(ಸ) ಅದೇ ಗೋತ್ರದಲ್ಲಿ ಜನಿಸಿದರು. ಅರೇಬಿಯಾದ

ಆಡಳಿತಗಾರನು[2] ಇಸ್ಲಾಮಿನ ಸತ್ಯದಿಂದ ಪ್ರಭಾವಿತನಾಗಿ ಮುಸ್ಲಿಮ್ ವಲಸೆಗಾರರನ್ನು ಕುರೈಶರ ಕೈಗೊಪ್ಪಿಸಲು ನಿರಾಕರಿಸಿದನು.

ಇತ್ತ ಮಕ್ಕಾದಲ್ಲಿ ಮುಹಮ್ಮದ್ ಮತ್ತು ಅವರ ಅನುಯಾಯಿಗಳ ಮೇಲೆ ವೈರಿಗಳ ದೌರ್ಜನ್ಯವು ಮೇರೆ ಮೀರಿತು. ಮುಹಮ್ಮದ್‌ರನ್ನು ಕೊಲ್ಲುವ ಸಂಚು ಹೂಡಲಾಯಿತು. ದೈವಿಕ ಪ್ರೇರಣೆಯಂತೆ ಅವರು ಮಕ್ಕಾದಿಂದ ಮದೀನಾಕ್ಕೆ ವಲಸೆ ಹೋಗಬೇಕಾಯಿತು. ಈ ಘಟನೆಯನ್ನು ಇಸ್ಲಾಮೀ ಪಾರಿಭಾಷಿಕದಲ್ಲಿ 'ಹಿಜ್ರತ್' ಎಂದು ಕರೆಯಲಾಗುತ್ತದೆ. ಅರ್ಥಾತ್ ಧರ್ಮ ಕಾರ್ಯಕ್ಕಾಗಿ ದೇಶತ್ಯಾಗ. ಆದರೆ ಕುರೈಶರು ಅಲ್ಲಿಯೂ ನೆಮ್ಮದಿಯಿಂದಿರಲು ಬಿಡಲಿಲ್ಲ. ಮದೀನಾದ ಮೇಲೆ ಸಶಸ್ತ್ರ ಆಕ್ರಮಣ ಆರಂಭಿಸಿದರು. ಆಗ ಪ್ರವಾದಿ ಮತ್ತು ಮುಸ್ಲಿಮರಿಗೆ ರಕ್ಷಣಾತ್ಮಕ ಯುದ್ಧ ಅರ್ಥಾತ್ ಜಿಹಾದ್‌ನ ವಚನಗಳು ಅವತೀರ್ಣಗೊಂಡುವು. ಕೊನೆಗೆ ಅಲ್ಪಾವಧಿಯಲ್ಲಿಯೇ ಇಡೀ ಅರಬಸ್ತಾನದಲ್ಲಿ ಮುಹಮ್ಮದರ ಹಾಗೂ ಇಸ್ಲಾಮಿನ ಆಧಿಪತ್ಯ ಸ್ಥಾಪನೆಯಾಯಿತು. ಇನ್ನೊಂದು ರೀತಿಯಲ್ಲಿ ಹೇಳುವುದಿದ್ದರೆ ಆ ಅರಬ್ ಜನಾಂಗವು ಸಾಮೂಹಿಕವಾಗಿ ಎಲ್ಲ ವಿಧದ ಕೆಡುಕುಗಳಲ್ಲಿ ತಲ್ಲೀನವಾಗಿತ್ತು. ನಿರಕ್ಷರತೆ, ನಿರಂಕುಶತೆ, ಅಂಧವಿಶ್ವಾಸ, ಜೂಜು, ದರೋಡೆ, ವ್ಯಭಿಚಾರ ಮಾತ್ರವಲ್ಲ ತಂದೆ ಮೃತನಾದ ಬಳಿಕ ಮಲತಾಯಿಯೊಂದಿಗೂ ವಿವಾಹ ಜರಗುತ್ತಿತ್ತು. ಮದ್ಯಪಾನ, ಕಲಹ, ಹೆಣ್ಣು ಶಿಶು ಹತ್ಯೆ, ಮೋಸ, ವಂಚನೆ, ಸ್ತ್ರೀ ಪೀಡನೆ, ಗುಲಾಮರಿಗೆ ಹಿಂಸೆ, ಅನಾಥರ ಹಕ್ಕು ಅಪಹರಣ, ವಿಗ್ರಹ ಪೂಜೆ ಹಾಗೂ ಇತರ ಅನೇಕ ರೀತಿಯ ಅಪರಾಧವೆಸಗುತ್ತಿದ್ದ ಜನಾಂಗವನ್ನು ಪ್ರವಾದಿ ಯವರು ತಮ್ಮ ಜೀವನಾವಧಿಯಲ್ಲಿಯೇ ಇಸ್ಲಾಮಿನ 20 ವರ್ಷಗಳ ಪ್ರಚಾರದಿಂದ ಏಕದೇವ ವಾದಿಗಳಾಗಿ ಮತ್ತು ಧರ್ಮನಿಷ್ಠರನ್ನಾಗಿ ರೂಪಿಸಿದರು. ಅನ್ಯಧರ್ಮಗಳ ಗ್ರಂಥಗಳಲ್ಲಿ ಇಂತಹ ಭ್ರಷ್ಟ ಮತ್ತು ಪಾಪಿಗಳಾದ ಜನಾಂಗವನ್ನು ರಾಕ್ಷಸರೆಂದೇ ಹೆಸರಿಸಿ ಯಾವುದಾದರೂ ದೇವತೆ ಅಥವಾ ಅವತಾರದ ಮೂಲಕ ಅವರ ನಾಶ ಮತ್ತು ವಧೆಯಾಗುವುದನ್ನು ಹೇಳಲಾಗುತ್ತಿತ್ತು. ಆದರೆ ಈ ಐತಿಹಾಸಿಕ ಪ್ರಕ್ರಿಯೆಯಲ್ಲಿ ಮುಹಮ್ಮದ್‌ರು ಪಾಪಿಗಳನ್ನು ನಾಶಮಾಡದೆ ಪಾಪಿಗಳ ಪಾಪಗಳನ್ನು ನಾಶ ಮಾಡಿದರು. ಈ ರೀತಿ ಪ್ರವಾದಿಯವರು 'ಅಕ್ರಮಿಯನ್ನು ತಿರಸ್ಕರಿಸಬೇಡ, ಅಕ್ರಮವನ್ನು ತಿರಸ್ಕರಿಸು' ಎಂಬ ನಾಣ್ಣುಡಿಯನ್ನು ಇಸ್ಲಾಮಿನ ಮೂಲಕ ಸಾಕಾರಗೊಳಿಸಿ ತೋರಿಸಿದರು.

ಒಟ್ಟಿನಲ್ಲಿ ಘೋರ(Chronic) ಅಪರಾಧಗಳಿಂದ ರೋಗಗ್ರಸ್ತವಾಗಿದ್ದ ಜನಾಂಗವು ಅತಿ ಶೀಘ್ರ ಆರೋಗ್ಯವಂತವಾಯಿತು. ಸಾಮೂಹಿಕ ಅಪರಾಧ ಮನೋವೃತ್ತಿಯ ರೋಗವನ್ನು ಪೈಗಂಬರರು ಯಶಸ್ವಿಯಾಗಿ ಶಮನ ಗೊಳಿಸಿದರು. ಇದನ್ನು ಐತಿಹಾಸಿಕ ಅದ್ಭುತವೆಂದೇ

ಇತರೆಲ್ಲ ಗೋತ್ರ ಮತ್ತು ಮನೆತನಗಳಿಗಿಂತ ಹೆಚ್ಚಾಗಿ ಈ ಗೋತ್ರವೇ ಇಸ್ಲಾಮನ್ನು ತಮ್ಮ ಸಾಮಾಜಿಕ ಹಿರಿಮೆ ಮತ್ತು ಬಹುದೇವವಾದಿ ಧಾರ್ಮಿಕ ಪ್ರಭುತ್ವಕ್ಕೆ ಅತ್ಯಂತ ಅಪಾಯ ಕಾರಿಯೆಂದು ಭಾವಿಸಿತ್ತು. ಆದ್ದರಿಂದ ಈ ಗೋತ್ರವೇ ಎಲ್ಲರಿಗಿಂತ ಮುಂಚೂಣಿಯಲ್ಲಿ ನಿಂತು ಇಸ್ಲಾಮನ್ನು ವಿರೋಧಿಸಿತು. ಅದಕ್ಕಾಗಿ ಇತರ ಗೋತ್ರಗಳನ್ನೂ ತಮ್ಮ ಜತೆ ಸೇರಿಸಿಕೊಂಡಿತು.

[2]ಇಥಿಯೋಪಿಯಾದ ಆಡಳಿತೆಗಾರ- ನಜ್ಜಾಶಿ ಬಿರುದಾಂಕಿತ ಕ್ರೈಸ್ತ ದೊರೆ.

ಹೇಳಬಹುದು. ಏಕೆಂದರೆ, ಅರಬ್ ಜನಾಂಗದ ಈ ರೋಗವು ಆ ಜನಾಂಗದಲ್ಲಿಯೇ ಹುಟ್ಟಿದ ವೈದ್ಯನಿಂದಲೇ ವಾಸಿಯಾಯಿತು. ಅವರು ಅಪರಾಧೀಕೃತ ಜನಾಂಗದಲ್ಲಿಯೇ ಹುಟ್ಟಿದ್ದರೂ ಮನಸಾ, ವಾಚಾ, ಕರ್ಮಣಾ ಆ ಜನಾಂಗಕ್ಕಿಂತ ಸಂಪೂರ್ಣ ಭಿನ್ನರಾಗಿದ್ದರು. ಇಸ್ಲಾಮ್, ನೈತಿಕತೆಯ ಶಕ್ತಿವರ್ಧಕ(Elixir) ಔಷಧಿಯೆಂಬುದು ಸ್ಪಷ್ಟ. ಅದು ಅಂತಹ ರೋಗಗಳಿಂದ ಬಳಲುತ್ತಿರುವ ಇತರ ಜನಾಂಗಗಳಿಗೂ ಸಮರ್ಥವಾಗಿ ಉಪಶಮನ ನೀಡಬಲ್ಲ ಪರೀಕ್ಷಿತ (Tested) ಮತ್ತು ಅಧಿಕೃತ ಹಾಗೂ ಸಂರಕ್ಷಿತ(Registered and Patent) ಔಷಧಿಯಾಗಿದೆ. ಪುನರ್ಜನ್ಮದ ಕಲ್ಪನೆಯು ಮಿಥ್ಯೆಯಾಗಿದ್ದರೂ ಇಸ್ಲಾಮಿಗಿಂತ ಮುಂಚಿನ ಅರಬ್ ಜನಾಂಗದಲ್ಲಿ ಇಸ್ಲಾಮಿನ ಬಳಿಕ ಸಂಭವಿಸಿದ ಸುಧಾರಣೆಯನ್ನು ಅದರ ಐತಿಹಾಸಿಕ ಪುನರ್ಜನ್ಮವೆಂದೇ ಹೇಳಬಹುದು. ಎಲ್ಲಕ್ಕಿಂತ ಮಿಗಿಲಾಗಿ ಮುಹಮ್ಮದ್‌ರ ಮಕ್ಕಾ ವಿಜಯದಲ್ಲಿ ಒಂದಾದರೂ ಪ್ರಾಣ ಹಾನಿಯಾಗಿಲ್ಲವೆಂಬುದು ಇನ್ನೊಂದು ಅದ್ಭುತವಾಗಿದೆ. ಪ್ರವಾದಿ ಮತ್ತು ಅವರ ಅನುಯಾಯಿಗಳು ತಮ್ಮ ಶತ್ರುಗಳ ಕ್ರೂರ ಕೃತ್ಯಗಳಿಗೆ ಪ್ರತೀಕಾರ ವೆಸಗಲಿಲ್ಲ. ಇತಿಹಾಸದಲ್ಲಿ ಯುದ್ಧ ಜಯಿಸಿದ ಬಳಿಕ ಗೆದ್ದವರು ಸೋತವರಿಗೆ ಇಂತಹ ಸಾಮೂಹಿಕ ಕ್ಷಮಾದಾನ ನೀಡಿದ ಯಾವುದೇ ಉದಾಹರಣೆ ದೊರೆಯುವುದಿಲ್ಲ. ತದ್ವಿರುದ್ಧ ವಾಗಿ ಅನ್ಯರ ಧಾರ್ಮಿಕ ಪುರಾಣ ಕಥೆಗಳಲ್ಲಿ ಅವತಾರ ಪುರುಷರು ಮತ್ತು ದೇವತೆಗಳ ಮೂಲಕ ವೈರಿಗಳ ರೋಮಾಂಚಕಾರಿ ಸಂಹಾರವನ್ನು ವರ್ಣಿಸಲಾಗಿದೆ. ಇಸ್ಲಾಮಿನ ಶುಭ್ರ ಪ್ರಕಾಶದಿಂದ ಕೇವಲ ಅರಬರು ಮಾತ್ರ ಗಾಢಾಂಧಕಾರಗಳಿಂದ ಮುಕ್ತರಾದುದಲ್ಲ. ಮುಂದಿನ ಒಂದು ಶತಮಾನದಲ್ಲಿ ಅವರು ಜಗತ್ತಿನ ವಿಶಾಲ ಭೂಭಾಗಗಳನ್ನೂ ಇಸ್ಲಾಮಿನ ಪ್ರಕಾಶ ದಿಂದ ಕ್ಷಿಪ್ರವಾಗಿ ಬೆಳಗಿಸಿದರು.

ಶ್ರೀಮಂತ ಮಹಿಳೆಯನ್ನು ವಿವಾಹವಾದ ಬಳಿಕ ಅಥವಾ ಪ್ರವಾದಿತ್ವ ಪದವಿ ಪ್ರಾಪ್ತವಾಗಿ ಅರಬರ ಮಹಾನಾಯಕರಾದರೂ, ಅವರ ಸರಳ ಜೀವನದಲ್ಲಿ ಯಾವುದೇ ಬದಲಾವಣೆ ಯಾಗಲಿಲ್ಲ. ಅವರು ತಮ್ಮ ಸಂಪೂರ್ಣ ಜೀವನವನ್ನು ಬಹಳ ಸರಳತೆಯಿಂದಲೇ ಬಾಳಿದರು. ಅವರು ಯಾವುದೇ ಧರ್ಮ ಅಥವಾ ಜಾತಿ ಭೇದವಿಲ್ಲದಂತಹ ಪರೋಪಕಾರಿಯಾಗಿದ್ದರು. ಅವರು ಸ್ವತಃ ಸಾಲ ಪಡೆದಾದರೂ ಇತರರ ಅಗತ್ಯಗಳನ್ನು ಪೂರೈಸುವಂತಹ ದಾನಶೀಲರಾಗಿ ದ್ದರು. ಅವರಿಗೆ ಯಾವುದೇ ನೈತಿಕ ದೋಷಗಳಿರಲಿಲ್ಲ. ಅವರು ಅಪ್ಪಟ(Personified) ಸತ್ಯಸಂಧತೆ, ಪ್ರಾಮಾಣಿಕತೆ, ಪಾವಿತ್ರ್ಯ, ದಯೆ, ಸೌಜನ್ಯ ಮತ್ತು ಶಾಂತಿಯ ದೂತರಾಗಿದ್ದರು. ಕರುಣೆ ಮತ್ತು ಔದಾರ್ಯದ ಪ್ರತೀಕವಾಗಿದ್ದರು. ಇತರರ ಬದುಕಿಗಾಗಿ ತಮ್ಮ ಜೀವನ ಸವೆಸಿದರು. ಎಲ್ಲಕ್ಕಿಂತ ಮಿಗಿಲಾಗಿ ಅವರ ಸತ್ಕರ್ಮವು ಸೀಮಾತೀತವಾಗಿತ್ತು. ಶ್ರಮದ ಗೌರವಾರ್ಥ ಹಾಗೂ ಸಮಾನತೆ ಮತ್ತು ಸಹೋದರತೆಯ ಭಾವನೆಯನ್ನು ಜಾಗೃತಗೊಳಿಸ ಲಿಕ್ಕಾಗಿ, ಯುದ್ಧ ಅಥವಾ ಶಾಂತಿಯ ಕಾಲದಲ್ಲಿ ಜನರು ತಮ್ಮನ್ನು ಇತರರಿಗಿಂತ ಗಣ್ಯರೆಂದು ಭಾವಿಸುವಂತೆ ವರ್ತಿಸಲಿಲ್ಲ. ಅವರು ಯುದ್ಧ ಕಾಲದಲ್ಲಿಯೂ ಶಾಂತಿಕಾಲದಲ್ಲಿಯೂ ಅತ್ಯಂತ ವಿನಮ್ರ, ಉದಾರಿ ಮತ್ತು ಸಹನಾಶೀಲರಾಗಿರುತ್ತಿದ್ದರು. ದೈನಂದಿನ ಗೃಹಸ್ಥ ಜೀವನ ನಡೆಸುತ್ತಿರು ವಾಗಲೂ ಸದಾ ದೇವನ ಬಗ್ಗೆ ಚಿಂತಿಸುತ್ತಿದ್ದರು. ವಿರೋಧಿಗಳೂ ಸೇರಿದಂತೆ ಎಲ್ಲರ

ಕಲ್ಯಾಣಕ್ಕಾಗಿ ದೇವನಲ್ಲಿ ಪ್ರಾರ್ಥಿಸುತ್ತಿದ್ದರು. ರಾತ್ರಿಯಲ್ಲಿ ಎಚ್ಚೆತ್ತು ನಮಾಝ್ ನಿರ್ವಹಿಸುತ್ತಿದ್ದರು. ಒಮ್ಮೆ ಅವರ ಪತ್ನಿ ಹಝ್ರತ್ ಆಯಿಶಾರಿಗೆ ರಾತ್ರಿಯ ವೇಳೆ ಪತಿಯು ಬಳಿಯಲ್ಲಿ ಕಾಣಿಸದಿರುವಾಗ ಅವರು ಇನ್ನೋರ್ವ ಪತ್ನಿಯ ಕೋಣೆಗೆ ತೆರಳಿರಬಹುದೆಂಬ ಸಂಶಯವಾಯಿತು. ಆದರೆ ಆ ಬಳಿಕ ಅವರು ಎದ್ದು ನೋಡಿದಾಗ ಪತಿಯು ಪವಿತ್ರ ಹಣೆಯನ್ನು ಭೂಮಿಗೆ ತಾಗಿಸಿ ದೇವಾರಾಧನೆಯಲ್ಲಿ ತಲ್ಲೀನರಾಗಿರುವುದನ್ನು ಕಂಡು ಅವರಿಗೆ ಪಶ್ಚಾತ್ತಾಪವಾಯಿತು. ಪ್ರವಾದಿಯವರು ತಮ್ಮನ್ನು ಸಂಪೂರ್ಣವಾಗಿ ದೇವನಿಗೆ ಸಮರ್ಪಿಸಿದ್ದರು. ದೇವನ ಮೇಲೆ ಅವರಿಗೆ ಅಚಂಚಲ ವಿಶ್ವಾಸವಿತ್ತು. ಅವರು ಅತ್ಯಂತ ಕ್ಷುಲ್ಲಕ ವಸ್ತುವಿಗೂ ದೇವನ ಮೇಲೆಯೇ ಭರವಸೆಯಿರಿಸಿದ್ದರು. ಹೀಗೆ ದೇವನಿಗೆ ಅರ್ಪಿಸಿದ ಅವರ ಗೃಹಸ್ಥ ಜೀವನವು ನೈಜ ಯೋಗ ಮತ್ತು ವೈರಾಗ್ಯದಿಂದ ಕೂಡಿತ್ತು. ಅವರ ಜೀವನವು 'ನೀರಿನಲ್ಲಿರುವ ಕಮಲದ ಹೂವಿ'ಗೆ ಸಮಾನವಾಗಿತ್ತು. ಅವರು ನೈಜ ತಪಸ್ವಿಯೂ ಆಗಿದ್ದರು. ಅವರ ಅಪೂರ್ವ ಯಶಸ್ಸು ಮತ್ತು ಇಸ್ಲಾಮ್ ಧರ್ಮವು ವಿಶ್ವವ್ಯಾಪಿಯಾಗಿರುವುದೇ ಅವರ ಪ್ರವಾದಿತ್ವಕ್ಕೆ ಸಾಕ್ಷಿಯಾಗಿದೆ. ಮುಹಮ್ಮದ್ ಮತ್ತು ಇಸ್ಲಾಮಿನ ಕ್ರಾಂತಿಕಾರಿ ಪ್ರಭಾವಗಳು ಐತಿಹಾಸಿಕ ಆಧಾರಗಳಿಂದಲೂ ದೃಢಗೊಂಡಿದೆ. ಪೂರ್ವಗ್ರಹ ಪೀಡಿತರಾಗಿ ದುರುದ್ದೇಶದಿಂದ ಬಂದ ಉಮರ್‌ರು ಇಸ್ಲಾಮಿನ ಹಾದಿಯಲ್ಲಿ ಸಾಗಿ ಹಝ್ರತ್ ಉಮರ್ ಎಂದು ಖ್ಯಾತರಾದರು. ಅವರು ಮುಹಮ್ಮದ್‌ರ ಬಳಿಕ ಎರಡನೆಯ ಪ್ರಭಾವಶಾಲಿ ಖಲೀಫರಾದರು. ಉಮರ್‌ರು ನಗ್ನ ಖಡ್ಗ ಹಿಡಿದು ಮುಹಮ್ಮದ್‌ರನ್ನು(ಸ) ಕೊಲ್ಲಲಿಕ್ಕಾಗಿ ಮನೆಯಿಂದ ಹೊರಟು ಬಂದಿದ್ದರು. ಕುರ್‌ಆನಿನ ಕೆಲವು ವಚನಗಳನ್ನು ಆಲಿಸಿದ ಕೂಡಲೇ ಅವರ ಹೃದಯ ಪರಿವರ್ತನೆಯಾಯಿತು. ತಕ್ಷಣವೇ ಅವರು ಮುಹಮ್ಮದ್‌ರ ಸೇವೆಗೆ ಸಿದ್ಧರಾಗಿ ಇಸ್ಲಾಮ್ ಸ್ವೀಕರಿಸಿದರು. ತುಫೈಲ್ ಬಿನ್ ಅಮ್ರ್ ದೂಸಿಯವರ ಸ್ಥಿತಿಯೂ ಅದೇ ಆಗಿದೆ. ಮುಹಮ್ಮದ್‌ರ ವಾಣಿಯು ಕಿವಿಗೆ ಕೇಳಿಸಬಾರದೆಂದು ಅವರು ಕಿವಿಗೆ ಹತ್ತಿ ತುರುಕಿಸಿದ್ದರು. ಆದರೆ ಆಕಸ್ಮಿಕವಾಗಿ ಮುಹಮ್ಮದ್‌ರಿಂದ ಕೆಲವು ವಚನಗಳನ್ನು ಆಲಿಸಿದ ಕೂಡಲೇ ಇಸ್ಲಾಮಿನಿಂದ ಆಕರ್ಷಿತರಾದರು.

ಮುಹಮ್ಮದ್‌ರು ಬಡವ ಮತ್ತು ಅನಾಥರಾಗಿ ಬೆಳೆದು ಜೀವನವಿಡೀ ಲೌಕಿಕ ಶಿಕ್ಷಣದಿಂದ ವಂಚಿತರಾಗಿದ್ದರೂ ದೈವಿಕ ಜ್ಞಾನದಿಂದ ವಿಭೂಷಿತರಾಗಿ ಅಕ್ರಮಗಳನ್ನು ಸಹಿಸುತ್ತಾ ಅಕ್ರಮಿಗಳಿಗಾಗಿಯೂ ಪ್ರಾರ್ಥಿಸುತ್ತಿದ್ದರು. ಅನಿವಾರ್ಯ ಪರಿಸ್ಥಿತಿಯಲ್ಲಿ ದೇವಾದೇಶದಂತೆ ರಕ್ಷಣಾತ್ಮಕ ಯುದ್ಧ ಮಾಡಿ ಸಂಪೂರ್ಣ ಜಯಗಳಿಸಿದ ಬಳಿಕವೂ ತಮ್ಮ ಮತ್ತು ತಮ್ಮ ಅನುಯಾಯಿಗಳ ಮೇಲೆ ಘೋರ ಅಕ್ರಮವೆಸಗಿದ್ದ ಮಂದಿಯನ್ನು ಸಾಮೂಹಿಕವಾಗಿ ಕ್ಷಮಿಸಿದರು. ತಮ್ಮ ಜೀವನಾವಧಿಯಲ್ಲಿ ರಕ್ಕಸರೆಂಬ ಹೆಸರಿಗೆ ಅರ್ಹರಾಗಿದ್ದ ಅರಬರನ್ನು ಪುಣ್ಯಾತ್ಮರನ್ನಾಗಿ ಮಾಡಿದರು. ಅನಂತರ ಒಂದು ಶತಮಾನದಲ್ಲಿ ಜಗತ್ತಿನ ವಿಶಾಲ ಭೂಭಾಗದಲ್ಲಿ ಇಸ್ಲಾಮ್ ಸ್ಥಾಪನೆಗೊಂಡು ಇಂದಿಗೂ ಅತ್ಯಧಿಕ ಜನಪ್ರಿಯ ಮತ್ತು ವಿಶ್ವವ್ಯಾಪಿ ಧರ್ಮವಾಗಿ ಉಳಿದಿರುವುದರಿಂದ ಮುಹಮ್ಮದ್‌ರ ಮತ್ತು ಇಸ್ಲಾಮಿನ ಶಕ್ತಿಯು ಸ್ವಯಂ ಸಾಬೀತಾಗುತ್ತದೆ. ಅವರು ಅಕ್ರಮಗಳನ್ನು ಸಹಿಸುತ್ತಾ ಧೈರ್ಯ ಮತ್ತು ದೇವ ಸಹಾಯದಿಂದ ಸುಧಾರಣೆಯನ್ನು ಸಾಧಿಸಿದರು. ಘೋರ ಸಂಘರ್ಷಗಳಲ್ಲಿಯೂ ಯಶಸ್ವಿ

ಯಾದರು. ಹಾಗೆಯೇ ಸತ್ಯಧರ್ಮವಾಗಿರುವ ಇಸ್ಲಾಮ್ ಅವರ ಧ್ಯೇಯವಾಗಿತ್ತು. ಒಂದು ವೇಳೆ ಅಸ್ತಿತ್ವಕ್ಕಾಗಿ ಹೋರಾಟ(Struggle for Existence) ಮತ್ತು ಬಲಾಢ್ಯರ ಉಳಿವು (Survival of the Fittest) ಎಂಬ ಸಿದ್ಧಾಂತವು ನಿಜವೆಂದಾದರೆ ಈ ಸಿದ್ಧಾಂತವು ವಸ್ತುತಃ ವೈಜ್ಞಾನಿಕವಾಗಿರುವುದರಿಂದ ವ್ಯಕ್ತಿ ಮತ್ತು ದೇವ ಸಂದೇಶವಾಹಕರೆಂಬ ನೆಲೆಯಲ್ಲಿ ಮುಹಮ್ಮದ್‌ರಿಗೂ, ಧರ್ಮವೆಂಬ ನೆಲೆಯಲ್ಲಿ ಇಸ್ಲಾಮಿಗೂ ಸರಿ ಹೊಂದುತ್ತದೆ. ಯುದ್ಧದ ವೇಳೆಯಲ್ಲಿಯೂ ನೈತಿಕತೆಯನ್ನು ತೊರೆಯದಿರುವುದು ಪ್ರವಾದಿಯವರ ಮಹಾನ್ ಸಾಧನೆಯಾಗಿದೆ.

ಅದೇ ವೇಳೆ ರಾಮನು ವಾಲಿಯನ್ನು ವಧಿಸಲಿಕ್ಕಾಗಿ ಮರಗಳ ಮರೆಯಲ್ಲಿ ನಿಂತು ಬಾಣವನ್ನು ಪ್ರಯೋಗಿಸಿದ್ದನು. ರಾವಣನ ವಧೆಗಾಗಿ, ರಾವಣನ ಸಹೋದರ ವಿಭೀಷಣನಿಂದ ರಾವಣನ ನಾಭಿಯಲ್ಲಿದ್ದ ಅಮೃತದ ರಹಸ್ಯವನ್ನು ತಿಳಿದು ಅವರ ಸಹಕಾರ ಪಡೆದು ರಾಜನೀತಿಯನ್ನು ಪ್ರದರ್ಶಿಸಿದ್ದನು. ಹಾಗೆಯೇ ಕೃಷ್ಣನು ದ್ರೋಣಾಚಾರ್ಯರ ವಧೆಗಾಗಿ 'ಅಶ್ವತ್ಥಾಮ'ನೆಂಬ ಹೆಸರಿನ ಆನೆಯನ್ನು ಕೊಲ್ಲಿಸಿ, ಯುಧಿಷ್ಠಿರನಿಂದ ಜೋರಾಗಿ 'ನರ' ಮತ್ತು ಮೆಲ್ಲಗೆ 'ಕುಂಜರ(ಆನೆ)' ಎಂದು ಹೇಳಿಸಿದನು. ಆ ಮೂಲಕ ದ್ರೋಣಾಚಾರ್ಯರಲ್ಲಿ ತಮ್ಮ ಪುತ್ರ ಅಶ್ವತ್ಥಾಮನೇ ಹತನಾದನೆಂಬ ಗಲಿಬಿಲಿ ಮೂಡಿಸಿ ಇಚ್ಛಾಮರಣಕ್ಕೊಳಗಾಗುವಂತೆ ಮಾಡುತ್ತಾನೆ. ಅದೇ ರೀತಿಯಲ್ಲಿ ಜಯಪ್ರದನ ವಧೆಗಾಗಿ ಸಂಜೆಯಾಗಿಲ್ಲದಿದ್ದರೂ ಸಂಜೆಯ ಮಾಯಾಜಾಲವನ್ನು ಸೃಷ್ಟಿಸಿ ತನ್ನ ರಾಜನೀತಿಯನ್ನು ಅಭಿವ್ಯಕ್ತಗೊಳಿಸಿದ್ದಾನೆ. ಆದರೆ ತದ್ವಿರುದ್ಧವಾಗಿ ಮುಹಮ್ಮದ್‌ರು 'ಬದ್ರ್ ಯುದ್ಧ'ದ ವೇಳೆ ಸೈನಿಕರ ತೀವ್ರ ಕೊರತೆಯಿದ್ದಾಗ,[1] ಈರ್ವರು ಸೈನಿಕರು ವಿನಮ್ರವಾಗಿ ವಿನಂತಿಸಿದರೂ ಅವರನ್ನು ಸೇನೆಗೆ ಸೇರಿಸಿಕೊಳ್ಳಲಿಲ್ಲ. ಏಕೆಂದರೆ ಆ ಈರ್ವರನ್ನು ವೈರಿಗಳು ಬಂಧಿಸಿದ್ದಾಗ ಬಿಡುಗಡೆಗೊಳಿಸಿದರೆ ಮುಹಮ್ಮದ್‌ರ ಪರವಾಗಿ ಯುದ್ಧ ಮಾಡುವುದಿಲ್ಲವೆಂದು ಅವರು ಮಾತುಕೊಟ್ಟಿದ್ದರೆಂದು ಪ್ರವಾದಿಯವರಿಗೆ ತಿಳಿದಿತ್ತು. ಇದು ಮುಹಮ್ಮದ್‌ರ ಅದ್ಭುತ ನೈತಿಕ ಪ್ರಜ್ಞೆಯಾಗಿದೆ. ಅವರು ಉತ್ತಮ ಸಾಧನೆಗಾಗಿ ಉತ್ತಮ ಸಾಧನವೆಂಬ ಸಿದ್ಧಾಂತದ ಪ್ರತೀಕವಾಗಿದ್ದರು. ಮಕ್ಕಾ ವಿಜಯದ ಬಳಿಕವೂ ಅವರು ಈ ಹಿಂದೆ ತಮ್ಮ ಮಗಳನ್ನು ಒಂಟೆಯಿಂದ ಉರುಳಿಸಿ ಪೀಡಿಸಿದ್ದಂತಹ ಅಕ್ರಮಿಗಳನ್ನೂ ಕ್ಷಮಿಸಿದರು. ಇತಿಹಾಸದಲ್ಲಿ ಇಂತಹ ಕ್ಷಮಾಶೀಲಗುಣದ ಉದಾಹರಣೆ ಬೇರೆ ಕಾಣಸುವುದಿಲ್ಲ. ನಿಸ್ಸಂದೇಹವಾಗಿ ಹಝ್ರತ್ ಮುಹಮ್ಮದ್‌ರು(ಸ) ದೇವ ಸಂದೇಶವಾಹಕರಲ್ಲಿಯೇ ಸರ್ವಶ್ರೇಷ್ಠರಾಗಿದ್ದಾರೆ. ಹಾಗೆಯೇ ಇಸ್ಲಾಮ್ ಎಂಬ ಪದವೇ ಉನ್ನತ ಮತ್ತು ಅರ್ಥಪೂರ್ಣವಾಗಿದೆ. ಇಸ್ಲಾಮ್ ಪದದ ಅರ್ಥವು 'ದೇವೇಚ್ಛೆಗೆ ಸಂಪೂರ್ಣ ಶರಣಾಗತಿ' ಎಂದಾಗಿದೆ. ಅಂದರೆ ಸಂಪೂರ್ಣವಾಗಿ

[1] ಇಸ್ಲಾಮೀ ಸೈನಿಕರ ಸಂಖ್ಯೆ ಸುಮಾರು 313 ಮತ್ತು ವೈರಿ ಸೈನಿಕರ ಸಂಖ್ಯೆ ಸುಮಾರು 1000 ಆಗಿತ್ತು. ಇಸ್ಲಾಮೀ ಸೇನೆಯಲ್ಲಿ ಯುದ್ಧ ಸಾಮಗ್ರಿ ಮತ್ತು ಆಯುಧಗಳ ತೀವ್ರ ಕೊರತೆಯಿತ್ತು. ಅದೇ ವೇಳೆ ವೈರಿ ಸೇನೆಯಲ್ಲಿ ಯುದ್ಧ ಸಾಮಗ್ರಿ ಮತ್ತು ಶಸ್ತ್ರಾಸ್ತ್ರಗಳು ಧಾರಾಳವಾಗಿದ್ದುವು.

ದೇವನ ಆಜ್ಞಾನುವರ್ತಿ ಭಕ್ತನಾಗುವುದು. ಹೀಗೆ ಆರಂಭದಲ್ಲಿಯೇ ಇಸ್ಲಾಮ್ ಏಕದೇವವಾದದ ಸೂಚಕವಾಗುತ್ತದೆ. ಇಸ್ಲಾಮ್ ಎಂದರೆ 'ಮುಹಮ್ಮದನಿಝಮ್' ಅಲ್ಲ.[1] ಬದಲಾಗಿ ಅದು ದೇವದತ್ತವಾದ ಆದಿ ಧರ್ಮವಾಗಿದೆ. ಮುಹಮ್ಮದ್‌ರು ಅಂತಿಮ ದೇವಸಂದೇಶ ವಾಹಕರಾಗಿದ್ದಾರೆ. ಇದು ಇಸ್ಲಾಮ್ ಎಂಬ ಹೆಸರಿಂದಲೇ ಸಾಬೀತಾಗುತ್ತದೆ. ಅದಕ್ಕೆ ವ್ಯತಿರಿಕ್ತವಾಗಿ ಹಿಂದೂ ಧರ್ಮಕ್ಕೆ ಯಾವುದೇ ವಿಶೇಷ ಅರ್ಥವಿಲ್ಲ. ಬೌದ್ಧ ಮತ್ತು ಕ್ರೈಸ್ತ ಧರ್ಮಗಳು ಕೇವಲ ಸಂಸ್ಥಾಪಕರ ಸಂಬಂಧವನ್ನು ಸೂಚಿಸುತ್ತದೆ. ಅವು ವೈಶಾಲ್ಯವನ್ನು ಸೂಚಿಸುವುದಿಲ್ಲ. ಇಸ್ಲಾಮ್ ಯಾವುದೇ ಧರ್ಮಗಳ ಖಂಡನೆ ಅಥವಾ ನಿಂದನೆ ಮಾಡುವುದಿಲ್ಲ. ಬದಲಾಗಿ ಅದು ಜಗತ್ತಿನ ಭೂಭಾಗಗಳಲ್ಲಿ ಮುಹಮ್ಮದರಿಗಿಂತ ಮುಂಚೆ ಕಳುಹಿಸಲಾದ ಎಲ್ಲ ದೇವ ಸಂದೇಶವಾಹಕರನ್ನು ಗೌರವಿಸುತ್ತದೆ. ಎಲ್ಲ ಧರ್ಮಗಳೂ ಮೂಲದಲ್ಲಿ ಒಂದೇ ಎಂಬುದು ಅದರ ನಂಬಿಕೆಯಾಗಿದೆ.[2] ಕಾಲ ಕ್ರಮೇಣ ಅವುಗಳಲ್ಲಿ ತಿದ್ದುಪಡಿ ಮತ್ತು ಸೇರ್ಪಡೆಗಳಾದುವು. ನೈಜ ದೇವ ನಿರ್ದೇಶನಗಳಿಂದ ಜನರು ವ್ಯತಿಚಲಿಸಿದರು. ಆದ್ದರಿಂದ ದೇವನು ಅಂತಿಮವಾಗಿ ಮುಹಮ್ಮದ್‌ರ ಮೂಲಕ ಕುರ್‌ಆನನ್ನು ಅವತೀರ್ಣಗೊಳಿಸಿದನು. 'ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದು ರ್‌ರಸೂಲುಲ್ಲಾಹ್' ಎಂಬುದು ಇಸ್ಲಾಮಿನ ಸಾಕ್ಷ್ಯ ವಚನ(ಕಲಿಮಾ)ವಾಗಿದೆ. ಅದನ್ನು ಇದೇ ಕೃತಿಯ ಮುನ್ನುಡಿಯಲ್ಲಿ ರೇಖಾಗಣಿತದ (Geometrical theorem) ಸಿದ್ಧಾಂತದ ಪ್ರಕಾರ ಸಮರ್ಥಿಸಲಾಗಿದೆ.

ಇಸ್ಲಾಮಿನಲ್ಲಿ ಐದು ಅಧ್ಯಾದೇಶಗಳಿವೆ. 1. ತೌಹೀದ್ ಅರ್ಥಾತ್ ಏಕದೇವತ್ವ. 2. ನಮಾಝ್ ಅರ್ಥಾತ್ ದೈಹಿಕ ಉಪಾಸನೆ ಹಾಗೂ ಪ್ರಾರ್ಥನೆ. 3. ಝಕಾತ್ ಅರ್ಥಾತ್ ಕಡ್ಡಾಯ ದಾನ. 4. ಉಪವಾಸ ಅರ್ಥಾತ್ ರಮಝಾನ್ ತಿಂಗಳಲ್ಲಿ ಪೂರ್ಣ ವ್ರತಾಚರಣೆ. 5. ಹಜ್ಜ್ ಅರ್ಥಾತ್ ಕಅಬಾ ಭವನದ ಪುಣ್ಯ ಯಾತ್ರೆ.

---

[1]ಇಸ್ಲಾಮಿನ ವಿಶಾಲ ಮತ್ತು ಸಾರ್ವಭೌಮವಾದ ವಿಶಿಷ್ಟ ಸ್ವಭಾವವನ್ನು ಸಂಕುಚಿತಗೊಳಿಸುವ ದುರುದ್ದೇಶದಿಂದ ಕ್ರೈಸ್ತ ಜಗತ್ತು, ಆದಿಕಾಲದ ಈ ದೈವಿಕ ಧರ್ಮವನ್ನು ಹ. ಮುಹಮ್ಮದ್ ಎಂಬ ಸಾಂದರ್ಭಿಕ ವ್ಯಕ್ತಿತ್ವಕ್ಕೆ ಸೀಮಿತಗೊಳಿಸಲಿಕ್ಕಾಗಿ "ಮುಹಮ್ಮಡನಿಝಮ್" ಎಂಬ ಪಾರಿಭಾಷಿಕ ಪದವನ್ನು(Terminology) ಪ್ರಚಾರ ಪಡಿಸಿತು. 'ಅದಕ್ಕಿಂತ ಮುಂಚೆ ಯೇಸು ಕ್ರಿಸ್ತರು ಬೋಧಿಸಿದ್ದ ಧರ್ಮವನ್ನು ಕ್ರೈಸ್ತ ಧರ್ಮ'ವೆಂದು ಹೆಸರಿಸಿ ಅದೊಂದು ಮಾನವ ಕೃತ ಧರ್ಮವೆಂದು ಪ್ರಚುರ ಪಡಿಸಲಾಗಿತ್ತು. ಹಾಗೆಯೇ ಇಸ್ಲಾಮ್ ಕೂಡಾ ಒಂದು ಧರ್ಮವಲ್ಲ, ಅದು ಮಾನವ ನಿರ್ಮಿತ ವಿಚಾರಧಾರೆ ಎಂದು ನಂಬಿಸಲು ಪ್ರಯತ್ನಿಸಿತು.

[2]ಎಲ್ಲ ಕಾಲಗಳ ಪ್ರವಾದಿಗಳೂ ಬೋಧಿಸಿದ ಮತ್ತು ಪ್ರಚಾರಗೊಳಿಸಿದ ಮೂಲ ಧರ್ಮವು ಇಸ್ಲಾಮ್(ದೇವನ ಆಜ್ಞಾಪಾಲನೆ) ಧರ್ಮವೇ ಆಗಿತ್ತು. ಆಯಾ ಕಾಲದ ಮತ್ತು ಸಮಕಾಲೀನ ಮಾನವ ಜನಾಂಗದ ಭಾಷೆಯಲ್ಲಿ ಅದರ ಹೆಸರು ಭಿನ್ನವಾಗಿರಲೂಬಹುದು. ಆದರೆ ಏಕದೇವವಾದ, ಪ್ರವಾದಿತ್ವ ಮತ್ತು ಪರಲೋಕ ವಿಶ್ವಾಸಗಳೇ ಅವುಗಳ ಬುನಾದಿಯಾಗಿತ್ತು. ಹಾಗೆಯೇ ಅವುಗಳಲ್ಲಿ ದೇವ(ಅಲ್ಲಾಹ್)ನ ಮುಂದೆ ಸಂಪೂರ್ಣ ಶರಣಾಗತಿಯ ಅರ್ಥವು ಅಡಕವಾಗಿತ್ತು.

ಬೌದ್ಧ ಧರ್ಮವು ನಾಸ್ತಿಕವಾದಿಯಾಗಿರುವುದರಿಂದ ಅದರಲ್ಲಿ ಏಕದೇವವಾದಕ್ಕೆ ಯಾವುದೇ ಸ್ಥಾನವಿಲ್ಲ. ಹಾಗೆಯೇ ಇತರರಿಗಾಗಿ ಸ್ಪಷ್ಟವಾದ ನಿಯಮ-ನಿರ್ದೇಶಗಳೂ ಅದರಲ್ಲಿ ಲಭ್ಯವಿಲ್ಲ. ಅದರಲ್ಲಿ ಅಸ್ಪಷ್ಟವಾಗಿರುವ ನೈತಿಕ ಮೌಲ್ಯಗಳನ್ನು ಬಹಳ ತ್ರಾಸಪಟ್ಟು ಹುಡುಕ ಬೇಕಾಗುತ್ತದೆ. ಕ್ರೈಸ್ತ ಧರ್ಮದ ಸ್ಥಿತಿಯೂ ಹೆಚ್ಚಿನಂಶ ಇದೇ ಆಗಿದೆ. ಈಸಾರು ದೇವಪುತ್ರನೆಂಬ ನಂಬಿಕೆಯಿಂದಾಗಿ ಕ್ರೈಸ್ತರಲ್ಲಿ ಏಕದೇವವಾದವೇ ಮಾಯವಾಗಿದೆ. ಇಸ್ಲಾಮಿನ ಪ್ರಸ್ತುತ ಆದೇಶಗಳನ್ನು ಹಿಂದೂ ಧರ್ಮದಲ್ಲಿಯೂ ಕಾಣಬಹುದು. ಆದರೆ ಆ ನಿಯಮಗಳು ಹೆಚ್ಚಿನಂಶ ಚದುರಿಕೊಂಡಿವೆ ಮತ್ತು ಅವುಗಳನ್ನು ಜಟಿಲಗೊಳಿಸಲಾಗಿದೆ ಅಥವಾ ಅವುಗಳನ್ನು ಬೇರೆ ರೀತಿಯಿಂದ ಮರೆಮಾಚಲಾಗಿದೆ. ಇಸ್ಲಾಮಿನ ಈ ನಿಯಮಗಳಲ್ಲಿ ಸಂಕ್ಷಿಪ್ತತೆ, ಸರಳತೆ ಮತ್ತು ಕ್ರಮಬದ್ಧತೆಯಿದೆ. ವಿಶೇಷ ಪರಿಸ್ಥಿತಿಗಳಲ್ಲಿ ವಿನಾಯಿತಿಯೂ ಇದೆ. ಹಿಂದುತ್ವದಲ್ಲಿ ಈ ಐದು ನಿಯಮಗಳ ವೈಯಕ್ತಿಕ(Individual) ಮುಖಗಳಿವೆ. ಅದೇ ವೇಳೆ ಇಸ್ಲಾಮಿನಲ್ಲಿ ಅದಕ್ಕೆ ಸಾಮಾಜಿಕ ಸ್ಥಾನ ನೀಡಲಾಗಿದೆ. ಇಸ್ಲಾಮಿನ ಈ ಸುಸ್ಪಷ್ಟ ನಿಯಮಗಳು ಧರ್ಮಕ್ಕೆ ಸರಳ, ಸರ್ವಗ್ರಾಹ್ಯ, ಸಾರ್ವಲೌಕಿಕ ಮತ್ತು ಸಮಾನತೆಯ ದೃಷ್ಟಿಕೋನವನ್ನು ನೀಡಿ ಅದನ್ನು ಉನ್ನತ ಸ್ಥಾನದಲ್ಲಿ ನಿಲ್ಲಿಸುತ್ತದೆ. ಪ್ರಾಚೀನ ವೈದಿಕ ಸಾಹಿತ್ಯವು ಮಾನವ ಸಂಸ್ಕೃತಿಯ ಆರಂಭದಲ್ಲಿಯೇ "ಏಕ ಮೇವಾದ್ವಿತೀಯೊ ನಾಸ್ತಿ" ಅರ್ಥಾತ್ ದೇವನೊಬ್ಬನೇ, ಬೇರೆ ಯಾರೂ ಇಲ್ಲವೆಂದು ಏಕದೇವವಾದವನ್ನು ಸಾರಿದೆ. ಶ್ರೀಕೃಷ್ಣನ ಗೀತೆಯಲ್ಲಿ ದೇವನನ್ನು 'ಜೋತಿಷಾಂ ಪಿತಜ್ಯೋತಿ' ಅರ್ಥಾತ್ 'ಪ್ರಕಾಶದ ಪ್ರಕಾಶ'ವೆಂದು ಹೇಳಲಾಗಿದೆ. ಕುರ್‌ಆನ್, ದೇವನ ಈ ವಿಶೇಷತೆಯನ್ನು 'ನೂರುನ್ ಅಲಾ ನೂರ್' ಅರ್ಥಾತ್ ಪ್ರಕಾಶದ ಮೇಲೆ ಪ್ರಕಾಶ (24:35) ಎಂದು ವರ್ಣಿಸಿದೆ. ಉಪನಿಷತ್‌ನಲ್ಲಿ 'ತಮಸೋಮ ಜ್ಯೋತಿರ್ಗಮಯ' ಅರ್ಥಾತ್ 'ನಮ್ಮನ್ನು ಅಂಧಕಾರದಿಂದ ಬೆಳಕಿನೆಡೆಗೆ ತಾ' ಎಂದು ಪದೇಪದೇ ಹೇಳಲಾಗಿದೆ. ಪ್ರವಾದಿಯವರೂ ಇಂತಹ ವಿಶೇಷ ಪ್ರಾರ್ಥನೆಯನ್ನು ಮಾಡುತ್ತಿದ್ದರು.[1] ಗೀತೆಯಲ್ಲಿ ದೇವನನ್ನು 'ವಿಶ್ವತೋ ಮುಖಂ' ಅರ್ಥಾತ್ 'ದೇವನ ಮುಖವು ನಾಲ್ದೆಸೆಗಳಲ್ಲಿಯೂ ಇದೆ' ಎಂದು ಹೇಳಲಾಗಿದೆ. ಕುರ್‌ಆನಿನಲ್ಲಿಯೂ 'ಎಲ್ಲಿ ತಿರುಗಿದರೂ ಅಲ್ಲಿ ದೇವನಿದ್ದಾನೆ' (2:115) ಎಂದು ಹೇಳಲಾಗಿದೆ. ಗೀತೆಯು ದೇವನನ್ನು 'ಸರ್ವಲೋಕ ಮಹೇಶ್ವರಂ' ಅರ್ಥಾತ್ ದೇವನು ಸರ್ವಲೋಕಗಳ ಒಡೆಯನಾಗಿದ್ದಾನೆಂದು ಘೋಷಿಸುತ್ತದೆ. ಹಾಗೆಯೇ ಕುರ್‌ಆನಿನಲ್ಲಿಯೂ ದೇವನನ್ನು 'ರಬ್ಬುಲ್ ಆಲಮೀನ್'(1:2) ಎಂದು ಕರೆಯಲಾಗಿದೆ. ಗೀತೆಯಲ್ಲಿ ದೇವನನ್ನು 'ಸತ್ಯ' ಎನ್ನಲಾಗಿದೆ. ಕುರ್‌ಆನಿನಲ್ಲಿ 'ಹಕ್' ಎನ್ನಲಾಗಿದೆ(22:62). ಗೀತೆ ಮತ್ತು

[1] ಓ ಅಲ್ಲಾಹ್, ನನ್ನ ಹೃದಯದಲ್ಲಿ(ನೂರ್) ಪ್ರಕಾಶವನ್ನು ಸೃಷ್ಟಿಸು ಮತ್ತು ನನ್ನ ಕಿವಿ ಮತ್ತು ಕಣ್ಣುಗಳಲ್ಲಿ ಪ್ರಕಾಶವನ್ನು ಸೇರಿಸು, ನನ್ನ ಬಲಭಾಗವನ್ನೂ ಎಡಭಾಗವನ್ನೂ ಪ್ರಕಾಶಮಾನಗೊಳಿಸು. ನನ್ನ ಮುಂಭಾಗವನ್ನೂ ಹಿಂಭಾಗವನ್ನೂ ಪ್ರಕಾಶಮಾನಗೊಳಿಸು. ನನ್ನ ಮೇಲ್ಭಾಗ ಮತ್ತು ತಳಭಾಗವನ್ನೂ ಪ್ರಕಾಶಮಾನಗೊಳಿಸು. ಅಂತ್ಯ ದಿನದಲ್ಲಿ ನನ್ನ ಪ್ರಕಾಶವನ್ನು ಶೋಭಾಯಮಾನಗೊಳಿಸು. **(ಹದೀಸ್)**

"(ಓ ಪಾಲಕ ಪ್ರಭು) ನಮಗೆ ನೇರ ಮಾರ್ಗವನ್ನು ತೋರಿಸು." **(ಪವಿತ್ರ ಕುರ್‌ಆನ್, 1:6)**

ಕುರ್‌ಆನ್‌ಗಳೆರಡರಲ್ಲಿಯೂ ದೇವನಿಗೆ ಸಮಾನರಾಗಿ ಯಾರೂ ಇಲ್ಲವೆನ್ನಲಾಗಿದೆ (42:11). ಗೀತೆ ಮತ್ತು ಉಪನಿಷತ್‌ಗಳಲ್ಲಿ ಇಡೀ ವಿಶ್ವವನ್ನು ದೇವನು ಆವರಿಸಿದ್ದಾನೆಂದು ಹೇಳಲಾಗಿದೆ. ಅದೇ ಪ್ರಕಾರ ಕುರ್‌ಆನಿನಲ್ಲಿ "ಅಲ್ಲಾಹನು ಎಲ್ಲವನ್ನೂ ಆವರಿಸಿ ಕೊಂಡಿದ್ದಾನೆ" ಎನ್ನಲಾಗಿದೆ(4:126). ಗೀತೆಯಲ್ಲಿ ದೇವನನ್ನು 'ಅಕ್ಷರ್'(ಅವಿನಾಶಿ) ಅರ್ಥಾತ್ 'ಸರ್ವಥಾ ನಾಶ ಹೊಂದದವನು ಮತ್ತು ಇತರರನ್ನು ನಾಶಗೊಳಿಸುವವನು' ಎಂದಿದೆ. ಕುರ್‌ಆನಿನಲ್ಲಿ "ಎಲ್ಲಾ ವಸ್ತುಗಳೂ ನಾಶವಾಗುತ್ತದೆ, ಕೇವಲ ಅಲ್ಲಾಹನು ಬಾಕಿ ಉಳಿಯುತ್ತಾನೆ' ಎಂದು ವಿವರಿಸಲಾಗಿದೆ.(55:26-27) ದೇವನಿಗೆ ಗೀತೆಯಲ್ಲಿ ಅಚಿಂತನೀಯ ಮತ್ತು ಅನಿರ್ವಚನೀಯ ಅರ್ಥಾತ್ ಬುದ್ಧಿಗೆ ನಿಲುಕದವನು ಮತ್ತು ವರ್ಣನಾತೀತನೆಂದು ಕರೆಯಲಾಗಿದೆ. ಕುರ್‌ಆನಲ್ಲೂ ದೇವನಿಗೆ, ಅವನಂತೆ ಯಾವ ವಸ್ತುವೂ ಇಲ್ಲವೆಂದು ಹೇಳಲಾಗಿದೆ. "ಮಾನವನ ದೃಷ್ಟಿಯು ಅವನನ್ನು ನೋಡಲಾರದು ಮತ್ತು ತಿಳಿಯಲಾರದು."(6:103)

ಇತಿಹಾಸದ ಪ್ರಕಾರ ವೈದಿಕ ಸಾಹಿತ್ಯ ಮತ್ತು ಗೀತೆಗಳೊಂದಿಗೆ ಸಮಕಾಲೀನ ಅರಬರ ಧರ್ಮ, ಧಾರ್ಮಿಕ ವಿಚಾರಗಳು ಹಾಗೂ ನಂಬಿಕೆಗಳಿಗೆ ದೂರದ ಸಂಬಂಧವೂ ಇರಲಿಲ್ಲ. ಗೀತೆ ಮತ್ತು ಕುರ್‌ಆನ್‌ಗಳಲ್ಲಿ ಸಮಾನತೆಯು ಕೇವಲ ಏಕದೇವವಾದಕ್ಕೆ ಸೀಮಿತವಾಗಿಲ್ಲ. ಗೀತೆಯು ಧರ್ಮಯುದ್ಧ ಮತ್ತು ಕುರ್‌ಆನಿನ ಜಿಹಾದ್‌ಗಳಿಗೂ ಸಮಾನಾಂತರ ಆಧಾರ ಮತ್ತು ಪರಿಸ್ಥಿತಿ ಹಾಗೂ ಸಮಾನ ಉದ್ಬೋಧನೆ ಮತ್ತು ಪ್ರೇರಣೆಗಳಿವೆ. ಈ ಪ್ರಕಾರ ಗೀತೆಯೂ ಮುಹಮ್ಮದ್‌ರ ಪ್ರವಾದಿತ್ವಕ್ಕೆ ಸಾಕ್ಷ್ಯವಹಿಸುತ್ತದೆ. ಎರಡನೆಯ ನಿಯಮವಾಗಿರುವ ನಮಾಝ್‌ನ ಬಗ್ಗೆ ಹೇಳುವುದಿದ್ದರೆ, ಹಿಂದೂ ಸಾಹಿತ್ಯಗಳಲ್ಲಿ ಉಪಾಸನೆ ಮತ್ತು ಪ್ರಾರ್ಥನೆಗಳ ಮಹತ್ವವನ್ನು ಬಹಳಷ್ಟು ವರ್ಣಿಸಲಾಗಿದೆ. ಅದೇ ಉಪಾಸನೆ ಮತ್ತು ಪ್ರಾರ್ಥನೆಗಳಿಗೆ ಸಮಾನ ರೂಪ, ನಮಾಝನ್ನು ಅತ್ಯಂತ ಪ್ರಭಾವ ಪೂರ್ಣಗೊಳಿಸಿತು. ಹಿಂದೂ ಧರ್ಮದಲ್ಲಿ ದಾನಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. ಆದರೆ ಅದಕ್ಕೆ ಕೇವಲ ಬ್ರಾಹ್ಮಣರು ಅರ್ಹರೆಂದು ಭಾವಿಸಲಾಗಿದೆ. ಅದೇ ವೇಳೆ ಇಸ್ಲಾಮ್ ಝಕಾತನ್ನು ಕಡ್ಡಾಯಗೊಳಿಸಿತು. ಅದಕ್ಕೆ ಬಡನಿರ್ಗತಿಕರು ಅರ್ಹರೆಂದು ಘೋಷಿಸಿ ನೈಜ ಸಮಾಜವಾದದ ಅಡಿಪಾಯವನ್ನು ಹಾಕಿ ಕೊಟ್ಟಿತು. ಇಸ್ಲಾಮಿನ ಕಡ್ಡಾಯ ದಾನವು ಅತ್ಯುತ್ಕೃಷ್ಟವಾಗಿದೆ. ಹಿಂದೂ ಧರ್ಮದಲ್ಲಿ ಉಪವಾಸ ವ್ರತಗಳಿಗೂ ಬಹಳ ಮಹತ್ವವಿದೆ. ಒಂದು ತಿಂಗಳ ಚಾಂದ್ರಮಾನ ವ್ರತವು ಚಂದ್ರೋದಯದ ಪ್ರಕಾರ ಪ್ರಾರಂಭ ಮತ್ತು ಅಂತ್ಯಗೊಳ್ಳುತ್ತದೆ. ಇದು ರಮಝಾನಿನ ಉಪವಾಸಕ್ಕೆ ಸಮಾನವಾಗಿದೆ. ಆದರೆ ಅದು ಈಗ ಆಚರಣೆಯಲ್ಲಿಲ್ಲ. ಆದರೂ ಈಗಲೂ ಇತರ ಅನೇಕಾರು ವ್ರತಗಳಿವೆ. ಅವುಗಳಲ್ಲಿ ನಿರಾಹಾರ ಏಕಾದಶಿಗಳಂತಹ ವ್ರತಗಳೂ ಸೇರಿವೆ. ಆದರೆ ಈ ವ್ರತಗಳನ್ನು ವಿವಿಧ ಸಂದರ್ಭಗಳಲ್ಲಿ ವಿಕಲ ರೀತಿಯಲ್ಲಿ ಹಿಂದೂಗಳು ಆಚರಿಸುತ್ತಾರೆ. ಹೆಚ್ಚಿನಂಶ ಅವು ಮಹಿಳೆಯರಿಗೆ ಸೀಮಿತವಾಗಿವೆ. ಇದಕ್ಕೆ ವ್ಯತಿರಿಕ್ತವಾಗಿ ರಮಝಾನಿನ ಉಪವಾಸವು ಸಮಾನ, ಕಡ್ಡಾಯ, ಸುದೃಢ ಮತ್ತು ಸಾರ್ವತ್ರಿಕವಾಗಿದೆ. ಉಪವಾಸದ ಇತರ ನಿಯಮಗಳೊಂದಿಗೆ ಗೌರವಪೂರ್ಣ ಸಮನ್ವಯವನ್ನು ಹೊಂದಿದೆ. ಇಸ್ಲಾಮಿನಲ್ಲಿ ವ್ರತವು ಸಾಮೂಹಿಕವಾಗಿರುವಾಗ ಹಿಂದೂಗಳಲ್ಲಿ ವ್ರತವು ವೈಯಕ್ತಿಕವಾಗಿದೆ. ಉಪವಾಸದ ಕೊನೆಯಲ್ಲಿ ನೆರವೇರಿಸಲಾಗುವ ಬೃಹತ್ ಸಾಮೂಹಿಕ ಈದ್ ನಮಾಝ್ ಮತ್ತು ಪರಸ್ಪರ ಅಭಿನಂದನೆ ಗಳು ಸಮಾನತೆ

ಮತ್ತು ಸಹೋದರತೆಯ ಸಾಕ್ಷಾತ್ ರೂಪವನ್ನು ತೋರಿಸುತ್ತದೆ. ಹಜ್ಜ್ ಪುಣ್ಯ ಯಾತ್ರೆಯ ಸಂಕೇತವಾಗಿದೆ. ಹಿಂದೂಗಳಲ್ಲಿ ಅಸಂಖ್ಯಾತ ತೀರ್ಥಯಾತ್ರೆಗಳಿವೆ. ಅವುಗಳು ಕೇವಲ ನಂಬಿಕೆ ಅಥವಾ ಪೌರಾಣಿಕ ಕಲ್ಪನೆಗಳ ಆಧಾರದಲ್ಲಿವೆ. ಅದೇ ವೇಳೆ ಇಸ್ಲಾಮಿನ ಹಜ್ಜ್ ಕರ್ಮವು, ಏಕರೂಪವಾಗಿದ್ದು ಶ್ರದ್ಧೆ ಧಾರ್ಮಿಕತೆಗಳ ಜತೆಯಲ್ಲಿ ಐತಿಹಾಸಿಕ ಸಂಬಂಧವನ್ನೂ ಹೊಂದಿವೆ. ಒಟ್ಟಿನಲ್ಲಿ ಇಸ್ಲಾಮಿನ ಈ ಅಧ್ಯಾದೇಶಗಳು ಹಿಂದುತ್ವದಲ್ಲಿಯೂ ಶಿಥಿಲ ರೂಪದಲ್ಲಿದೆ. ಏಕೆಂದರೆ ಹಿಂದೂ ಧರ್ಮವು ಪ್ರಾಚೀನ ಧರ್ಮವಾಗಿದೆ. ಈ ಅಂಶವೂ ಮುಹಮ್ಮದ್‌ರ ಪ್ರವಾದಿತ್ವದ ಜ್ವಲಂತ ಸಾಕ್ಷಿಯಾಗಿದೆ. ಈ ನಿಯಮಗಳನ್ನು ಇಸ್ಲಾಮ್, ಹೆಚ್ಚು ಸಾರ್ಥಕ ಮತ್ತು ಪ್ರಭಾವಶಾಲಿಯನ್ನಾಗಿ ಮಾಡಿತು. ಆಶ್ಚರ್ಯಕರ ರೀತಿಯಲ್ಲಿ ಸಮಾಜಕ್ಕೆ ಫಲದಾಯಕವಾಗಿ ಮಾಡಿತು.

ಇಸ್ಲಾಮಿನ ತೌಹೀದ್(ಏಕದೇವ ವಿಶ್ವಾಸ)ನ ಹೊರತು ಇತರ ನಾಲ್ಕು ನಿಯಮಗಳಿಗೆ ಅನಿವಾರ್ಯ ಪರಿಸ್ಥಿತಿಗಳಲ್ಲಿ ವಿನಾಯಿತಿ ನೀಡಿರುವುದು ಅತ್ಯಂತ ಗಮನಾರ್ಹವಾಗಿದೆ. ತೌಹೀದ್ ಎಂಬುದು ಮನ, ಮಸ್ತಿಷ್ಕ ಮತ್ತು ಆತ್ಮಗಳಿಂದ ಸರ್ವಶಕ್ತನಾದ ದೇವನ ಮೇಲೆ ನಂಬಿಕೆಯಿರಿಸುವುದನ್ನು ಅವಲಂಬಿಸಿದೆ. ಆದ್ದರಿಂದ ಅದರಲ್ಲಿ ವಿನಾಯಿತಿಯ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅದರಲ್ಲಿ ವಿನಾಯಿತಿಯು ಶಿರ್ಕ್(ಬಹುದೇವತ್ವ) ಆಗಿದೆ. ಬೇರೆ ಧರ್ಮಗಳಲ್ಲಿ ಏಕದೇವವಾದವು ವಿನಾಯಿತಿ ಮತ್ತು ತಿದ್ದುಪಡಿಗಳಿಂದಾಗಿಯೇ ಭ್ರಷ್ಟಗೊಂಡಿವೆ. ಇಸ್ಲಾಮ್ ಪ್ರತಿಯೊಂದು ಶಿರ್ಕನ್ನು ಶಿರ್ಕ್ ಎಂದೇ ಪರಿಗಣಿಸುತ್ತದೆ. ಏಕದೇವ ವಾದವನ್ನು ಎಲ್ಲ ರೀತಿಯಿಂದ ಸುರಕ್ಷಿತಗೊಳಿಸಿರುವುದೇ ಇಸ್ಲಾಮಿನ ವೈಶಿಷ್ಟ್ಯವಾಗಿದೆ. ಇಸ್ಲಾಮ್ ಧರ್ಮವು; ಝಕಾತ್, ಉಪವಾಸ ಮತ್ತು ಹಜ್ಜ್ ಮುಂತಾದ ಕರ್ಮಗಳಲ್ಲಿ ದೈಹಿಕ ಅನಾರೋಗ್ಯ ಮತ್ತು ಆರ್ಥಿಕ ಸಂಕಷ್ಟಗಳ ಪರಿಸ್ಥಿತಿಯಲ್ಲಿ ವಿನಾಯಿತಿ ನೀಡಿದೆ. ಉದಾಹರಣೆಗಾಗಿ ಝಕಾತ್(ದಾನ) ನೀಡಲು ಅಸಮರ್ಥನಾದ ವ್ಯಕ್ತಿಯು ಗಲಭೆ, ಕ್ಷೋಭೆಗಳಿಂದ ದೂರವುಳಿಯುವುದೇ ಅವನ ಪಾಲಿನ ಝಕಾತ್ ಆಗಿದೆಯೆಂದು ಹೇಳಿದೆ. ಸರಳ ಮತ್ತು ಸಂಕ್ಷಿಪ್ತವಾಗಿರುವ ಇಸ್ಲಾಮಿನ ಈ ನಿಯಮಗಳು ಜನಸಾಮಾನ್ಯರಿಂದ ಹಿಡಿದು ವಿಶಿಷ್ಟ ಜನರಿಗೂ ಅನುಕೂಲವಾಗಿದೆ. ತೌಹೀದನ್ನು ಬಿಟ್ಟು ಝಕಾತ್, ಉಪವಾಸ ಮತ್ತು ಹಜ್ಜ್‌ನಲ್ಲಿ, ಅನಾರೋಗ್ಯ ಮತ್ತು ಆರ್ಥಿಕ ಸಂಕಷ್ಟಗಳಲ್ಲಿ ನಿರ್ಗತಿಕರಿಗೆ, ರೋಗಿಗಳಿಗೆ ಮತ್ತು ಅಂಗವಿಕಲರಿಗೂ ಇಸ್ಲಾಮ್ ವರದಾನವಾಗಿ ಪರಿಣಮಿಸಿದೆ. ಅದೇ ವೇಳೆ ಇವರೆಲ್ಲರೂ ಇತರ ಧರ್ಮಗಳಲ್ಲಿ ಎಲ್ಲರಿಂದಲೂ ಅಪಮಾನಿತರು ಮತ್ತು ನಿರ್ಲಕ್ಷಿತರಾಗಿದ್ದಾರೆ. ಇಸ್ಲಾಮ್ ವೆಚ್ಚದಾಯಕ ಕರ್ಮಗಳನ್ನು ಸಂಪೂರ್ಣ ತಿರಸ್ಕರಿಸಿದೆ. ಅದು ತನ್ನ ವ್ಯಾವಹಾರಿಕ ನಿಯಮಗಳು ಮತ್ತು ಇತರ ನೈತಿಕ ಹಾಗೂ ಸಾಮಾಜಿಕ ಉಪನಿಯಮಗಳ ಸಮನ್ವಯದಿಂದ ಶಾಶ್ವತ ಮತ್ತು ಸಾರ್ವತ್ರಿಕ ಆಧಾರದಲ್ಲಿ ಎಲ್ಲರ ಧರ್ಮವಾಗಿದೆ. ಅದರಲ್ಲಿ ಗಂಡು, ಹೆಣ್ಣು, ದರಿದ್ರ, ಅನಾಥ, ಗುಲಾಮ, ಅಂಗವಿಕಲ, ವ್ಯಕ್ತಿ, ಕುಟುಂಬ, ಸಮುದಾಯ, ರಾಷ್ಟ್ರಗಳೆಲ್ಲವೂ ಸಮ್ಮಿಳಿತವಾಗಿದೆ. ಒಟ್ಟಿನಲ್ಲಿ ಮನುಷ್ಯನ ಎಲ್ಲ ಸಮಸ್ಯೆಗಳಿಗೂ ಪರಿಹಾರ ಕ್ಷಮತೆಯನ್ನು ಹೊಂದಿದ್ದು ಇಸ್ಲಾಮ್ ಎಲ್ಲಕ್ಕಿಂತ ಹೆಚ್ಚು ಕಲ್ಯಾಣಕಾರಿಯಾಗಿದೆ.

ಸಂಕ್ಷಿಪ್ತದಲ್ಲಿ ಇಸ್ಲಾಮಿನ ವೈಶಿಷ್ಟ್ಯಗಳು ಹೀಗಿವೆ:

1. ಏಕದೇವ ವಾದವು ಇಸ್ಲಾಮಿನ ಅತಿಪ್ರಧಾನ ವೈಶಿಷ್ಟ್ಯವಾಗಿದೆ. ಹಿಂದೂ ಧರ್ಮದ ದೇವಕೃತ ವೇದಗಳಲ್ಲಿದ್ದ ಏಕದೇವ ವಾದವು ಕಾಲಕ್ರಮೇಣ ಬಹುದೇವ ವಾದದಲ್ಲಿ ಸೇರಿಕೊಂಡಿತು. ಮಾತ್ರವಲ್ಲದೆ ಬಹುದೇವ ವಾದ ಮತ್ತು ಅವತಾರ ವಾದಗಳ ಬಳಿಕ ದೇವನನ್ನು ಗೌಣಸ್ಥಾನಕ್ಕೆ ದೂಡಲಾಯಿತು.[1] ಅಂತೆಯೇ ಕ್ರೈಸ್ತರ ತ್ರಿಮೂರ್ತಿ(Trinity) ಅರ್ಥಾತ್ ದೇವ, ದೇವಪುತ್ರ ಮತ್ತು ಪವಿತ್ರಾತ್ಮಗಳೆಂಬ ಕಲ್ಪನೆಯು ಹಿಂದೂಗಳ ಅವತಾರ ವಾದಕ್ಕೆ ಸಮಾನವಾಗಿತ್ತು. ಕ್ರೈಸ್ತಧರ್ಮದಲ್ಲಿಯೂ ದೇವನು ಪ್ರಧಾನವಾಗಿ ಉಳಿಯಲಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ಇಸ್ಲಾಮಿನ ಏಕದೇವ ವಾದದಲ್ಲಿ ಯಾವುದೇ ರೀತಿಯ ಬದಲಾವಣೆಯೂ ಆಗಲಿಲ್ಲ. ಭಾವನೆಗಳೂ ಸೇರಿಕೊಳ್ಳಲಿಲ್ಲ. ಅದರ ಅಡಿಪಾಯವು ಭದ್ರವಾಗಿದ್ದು ಅದರಲ್ಲಿ ಸೇರ್ಪಡೆಯೂ ಅಸಾಧ್ಯವಾಗಿದೆ. ಇದಕ್ಕೆ ಇಸ್ಲಾಮಿನ, 'ದೇವನಲ್ಲದೆ ಅನ್ಯ ಆರಾಧ್ಯನಿಲ್ಲ ಮತ್ತು ಮುಹಮ್ಮದ್‌ರು ದೇವನ ದಾಸ ಹಾಗೂ ಸಂದೇಶವಾಹಕರಾಗಿದ್ದಾರೆಂದು ನಾನು ಸಾಕ್ಷ್ಯ ವಹಿಸುತ್ತೇನೆ' ಎಂಬ ಮೂಲಭೂತ ವಿಶ್ವಾಸ(ಸಾಕ್ಷ್ಯವಚನ)ವೇ ಕಾರಣವಾಗಿದೆ. ದೇವನು ಮುಹಮ್ಮದ್‌ರನ್ನು ಕುರ್‌ಆನಿನಲ್ಲಿ ಅತ್ಯಧಿಕವಾಗಿ 'ಅಬ್ದ್' ಅರ್ಥಾತ್ ವಿಧೇಯ ದಾಸನೆಂದು ಕರೆದಿದ್ದಾನೆ. ಆದ್ದರಿಂದ ದೇವನ ದಾಸನು ದೇವನ ಅವತಾರವೆನಿಸಲು ಸಾಧ್ಯವಿಲ್ಲ.

2. ಇಸ್ಲಾಮ್ ಮದ್ಯವನ್ನು ಎಲ್ಲ ಪಾಪಗಳ ಜನನಿಯೆಂದು ಕರೆದಿದೆ. ಆದ್ದರಿಂದ ಇಸ್ಲಾಮಿನ ಮದ್ಯಪಾನ ನಿಷೇಧವು ಕೇವಲ ನೈತಿಕತೆಗೆ ಸೀಮಿತವಾಗಿಲ್ಲ. ಅದನ್ನು ದಂಡನಾರ್ಹ ಅಪರಾಧವೆಂದು ಸಾರಿ ಅದಕ್ಕೆ ಕೊರಡೆಯೇಟಿನ ಶಿಕ್ಷೆಯನ್ನು ನಿರ್ಣಯಿಸಿದೆ. ಇಸ್ಲಾಮಿನಲ್ಲಿ ಸೈದ್ಧಾಂತಿಕವಾಗಿ ಗಾಂಜಾ, ಅಫೀಮು ಮುಂತಾದ ಎಲ್ಲ ಮಾದಕ ವಸ್ತುಗಳೂ ನಿಷಿದ್ಧವಾಗಿವೆ. ಅದೇ ವೇಳೆ ಹಿಂದೂ ಧರ್ಮದಲ್ಲಿ ಅದಕ್ಕೆ ನಿಷೇಧವೂ ಇದೆ, ಅನುಮತಿಯೂ ಇದೆ. ವಿಷ್ಣುವಿನ ಉಪಾಸಕರು ಮದ್ಯವನ್ನು ವರ್ಜ್ಯವೆಂದು ನಂಬಿದರೆ ಕಾಳಿಯ ಉಪಾಸಕರು ಅದನ್ನು ಧಾರ್ಮಿಕ ವೆಂದೂ ನಂಬುತ್ತಾರೆ. ಶಿವನಂತಹ ದೇವತೆಗಳೇ ಭಂಗಿ ಸೇದುವವರೆಂದು ಹೇಳಲಾಗಿದೆ. ಹಾಗೆಯೇ ಶೈವರೂ ಕೂಡಾ ಭಂಗಿ, ಗಾಂಜಾ ಇತ್ಯಾದಿ ಸೇದುತ್ತಾರೆ.

---

[1]ಹಿಂದೂ ಧರ್ಮದ ವಿದ್ವಾಂಸರು ವೇದಗಳಲ್ಲಿಯೂ ಬಹುದೇವ ವಾದಗಳಿವೆಯೆಂದು ನಂಬುತ್ತಾರೆ. ರಾಮಧಾರಿ ಸಿಂಹ ದಿನಕರರು ತಮ್ಮ 'ಸಂಸ್ಕೃತಿ ಕೆ ಚಾರ್ ಅಧ್ಯಾಯ್'ನಲ್ಲಿ ಬರೆಯುತ್ತಾರೆ:

"ಪ್ರಕೃತಿಯನ್ನು ವಿಶೇಷ ರೂಪದಲ್ಲಿ ಒಂದು ದೇವತೆಯೆಂದು ಸಂಕಲ್ಪಿಸಿದ ಕಾರಣದಿಂದ ವೈದಿಕರು ಬಹುದೇವ ವಾದಿಗಳಾದರು. ಇದು ವೈದಿಕ ಸಾಹಿತ್ಯದಿಂದ ಸಾಬೀತಾಗುತ್ತದೆ. ಋಗ್ವೇದವು 33 ದೇವತೆಗಳ ಅಸ್ತಿತ್ವವನ್ನು ನಂಬುತ್ತದೆ. ಆದ್ದರಿಂದ ಬ್ರಾಹ್ಮಣರಲ್ಲಿ 7ವಸು, 11 ರುದ್ರ, 12 ಆದಿತ್ಯ ಹಾಗೂ ಆಕಾಶ, ಭೂಮಿ ಹೀಗೆ ಒಟ್ಟು 33 ದೇವತೆಗಳ ಉಲ್ಲೇಖ ದೊರೆಯುತ್ತದೆ. ಋಗ್ವೇದದ ಎರಡು ಮಂತ್ರಗಳಲ್ಲಿ 3339 ದೇವತೆಗಳ ಉಲ್ಲೇಖವಿದೆ. ಆದರೆ ಸಾಯಣಾ ಚಾರ್ಯರು, ಕೇವಲ 33 ದೇವತೆಗಳಿದ್ದು ಆ ದೇವತೆಗಳ ಮಹಿಮೆಯನ್ನು ತೋರಿಸಲಿಕ್ಕಾಗಿ 3339 ದೇವತೆಗಳನ್ನು ಉಲ್ಲೇಖಿಸಲಾಗಿದೆಯೆಂದು ಬರೆದಿರುವರು."

3. ಝಕಾತ್ ಅರ್ಥಾತ್ ಕಡ್ಡಾಯ ದಾನದ ಶ್ರೇಯಸ್ಸು ಇಸ್ಲಾಮಿಗೆ ಸಲ್ಲುತ್ತದೆ. ಏಕೆಂದರೆ ಐದು ಮೂಲಭೂತ ಕರ್ಮಗಳಲ್ಲಿ ನಮಾಝ್(ಆರಾಧನೆ), ಉಪವಾಸ(ವ್ರತ), ಹಜ್ಜ್(ಕಅಬಾ ಸಂದರ್ಶನ)ಗಳಂತೆಯೇ ಝಕಾತ್ ಕೂಡಾ ಪ್ರಮುಖ ಕರ್ಮವಾಗಿದೆ. ಈ ದಾನ ಪಡೆಯುವುದಕ್ಕೆ ನಿರ್ಗತಿಕರೂ ಸಾಲ ತೀರಿಸಲಾಗದ ಸಾಲಗಾರರೂ ಅಥವಾ ವ್ಯಾಪಾರ ಮಾಡುವಷ್ಟು ಹಣವಿಲ್ಲದವರೂ ಹಕ್ಕುದಾರರಾಗಿದ್ದಾರೆ. ಕಾನೂನು ಪ್ರಕಾರ ಇಸ್ಲಾಮ್ ಶ್ರೀಮಂತರ ಸಂಪತ್ತಿನಲ್ಲಿ ಆರ್ಥಿಕವಾಗಿ ದುರ್ಬಲರಾದವರ ಹಕ್ಕನ್ನು ನಿಶ್ಚಯಿಸಿತು. ಅದೇ ವೇಳೆ, ಝಕಾತಿನ ಹಕ್ಕುದಾರರು ಝಕಾತ್ ಪಡೆಯುವುದಕ್ಕಾಗಿ ಭಿಕ್ಷುಕರಂತೆ ಶ್ರೀಮಂತರ ಬಳಿಗೆ ಅಲೆದಾಡುವ ಆವಶ್ಯಕತೆಯಿಲ್ಲ. ಶ್ರೀಮಂತರಿಂದ ಝಕಾತನ್ನು ವಸೂಲು ಮಾಡಿ ಅದರ ಹಕ್ಕುದಾರರಿಗೆ ನೀಡುವುದು ಸರಕಾರದ ಕರ್ತವ್ಯವಾಗಿದೆ. ಬಡವರನ್ನು ಈ ರೀತಿ ಯಾವ ಧರ್ಮವೂ ಗೌರವಿಸಿಲ್ಲ.

4. ಇಸ್ಲಾಮಿನಲ್ಲಿ ಎಲ್ಲ ರೀತಿಯ ಜೂಜಾಟಗಳು ನಿಷಿದ್ಧವಾಗಿವೆ. ಹಿಂದೂ ಧರ್ಮದಲ್ಲಿ ದೀಪಾವಳಿಯ ವೇಳೆ ಜೂಜಾಟ ಧಾರ್ಮಿಕ ಕಾರ್ಯವಾಗಿದೆ. ಕ್ರೈಸ್ತ ಧರ್ಮದಲ್ಲಿಯೂ ಜೂಜಾಟಕ್ಕೆ ಯಾವುದೇ ಅಡ್ಡಿಯಿಲ್ಲ.

5. ಬಡ್ಡಿ ಎಂಬುದು ಶ್ರೀಮಂತರನ್ನು ಇನ್ನಷ್ಟು ಶ್ರೀಮಂತರನ್ನಾಗಿಯೂ ಬಡವರನ್ನು ಇನ್ನಷ್ಟು ಬಡವರನ್ನಾಗಿಯೂ ಮಾಡುವಂತಹ ವ್ಯವಹಾರವಾಗಿದೆ. ಸಮಾಜವನ್ನು ಈ ಅಧಃಪತನದಿಂದ ರಕ್ಷಿಸಲಿಕ್ಕಾಗಿ ಯಾವ ಧರ್ಮವೂ ಬಡ್ಡಿಯ ಮೇಲೆ ನಿಷೇಧ ಹೇರಿಲ್ಲ. ಆದರೆ ಇಸ್ಲಾಮ್ ಧರ್ಮ ಮಾತ್ರವೇ ಬಡ್ಡಿಯನ್ನು ತ್ಯಜಿಸಬೇಕೆಂದು ಉಗ್ರವಾಗಿ ಸಾರಿದೆ. ಬಡ್ಡಿಯನ್ನು ನಿಷಿದ್ಧವೆಂದು ಸಾರಿ ಬಾಕಿಯಿರುವ ಬಡ್ಡಿಯನ್ನು ಮನ್ನಾ ಮಾಡಬೇಕೆಂದೂ ಕುರ್‌ಆನ್ ಆಜ್ಞಾಪಿಸಿತು. ಬಡ್ಡಿಯನ್ನು ತೊರೆಯದಿದ್ದರೆ ದೇವನೊಂದಿಗೂ ಅವನ ಸಂದೇಶವಾಹಕರೊಂದಿಗೂ ಯುದ್ಧ ನಡೆಸಿದಂತೆ ಎಂಬ ಎಚ್ಚರಿಕೆಯನ್ನೂ ನೀಡಿತು. (2:279)

6. ಲಂಚವನ್ನು ನಿಷಿದ್ಧವೆಂದು ಸಾರಿದ ಹೆಗ್ಗಳಿಕೆಗೂ ಇಸ್ಲಾಮ್ ಪಾತ್ರವಾಗಿದೆ (ಕುರ್‌ಆನ್, 2:188). ಪ್ರವಾದಿ ಮುಹಮ್ಮದ್‌ರು ಲಂಚ ನೀಡುವವನ ಮತ್ತು ಪಡೆಯುವವನ ಮೇಲೆ ದೇವ ಶಾಪವಿದೆಯೆಂದು ಹೇಳಿದ್ದಾರೆ.

7. ಎಲ್ಲಕ್ಕಿಂತ ಮುಂಚಿತವಾಗಿ ಇಸ್ಲಾಮ್ ಮಹಿಳೆಯರಿಗೂ ಆರ್ಥಿಕ ಹಕ್ಕನ್ನು ನೀಡಿತು. ಅದು ಮೃತರ ಸಂಪತ್ತಿನಲ್ಲಿಯೂ ಮಹಿಳೆಯರಿಗೆ ಪಾಲು ನೀಡಿತು.[1] ವಿಧವೆಯರಾದ ಸ್ತ್ರೀಯರ ಪುನರ್ವಿವಾಹದ ನಿಯಮವು ಹಿಂದೂ ಧರ್ಮದಲ್ಲಿಲ್ಲ. ಮಾತ್ರವಲ್ಲ ಮೃತನಾದ ಪತಿಯ ಶವದ ಜತೆಯಲ್ಲಿ ವಿಧವೆಯರನ್ನು ಜೀವಂತ ಸುಡುವ ರೂಢಿಯಿತ್ತು. ಚಿತೆಯಲ್ಲಿ ಉರಿಸದೆ ಉಳಿಯುವ ಮಂದಿಯು ಉತ್ತಮ ಆಹಾರ ಸೇವಿಸುವಂತಿರಲಿಲ್ಲ. ಉತ್ತಮ ಬಟ್ಟೆ ಬರೆ ಧರಿಸುವಂತಿಲ್ಲ. ಅವಳು ಶುಭಕಾರ್ಯಗಳಲ್ಲಿ ಭಾಗವಹಿಸಬಾರದು. ಅವಳು ಎಲ್ಲರಿಂದಲೂ

[1](ಕುರ್‌ಆನ್, 4:11-12, 4:33, 4:176)- ಈ ಕಾನೂನನ್ನು ನಿಶ್ಚಯಿಸಿದ ಬಳಿಕ ಕುರ್‌ಆನ್ ಹೇಳುತ್ತದೆ. ಇವು ಅಲ್ಲಾಹನ ಮೇರೆಗಳಾಗಿವೆ. ಅದರ ಉಲ್ಲಂಘನೆ ಮಾಡುವವರನ್ನು(ಪರಲೋಕ ಜೀವನದಲ್ಲಿ, ನರಕದ) ಅಗ್ನಿಗೆ ತಳ್ಳಲಾಗುವುದು. ಅದರಲ್ಲಿ ಅವರು ಸದಾ ಕಾಲವಿರುವರು ಮತ್ತು ಅದು ಅತ್ಯಂತ ಘೋರ ಯಾತನೆಯಾಗಿರುವುದು (4:14).

ತಿರಸ್ಕೃತಳಾಗಿದ್ದಳು. ಅವಳ ಜೀವನವೇ ಶೋಚನೀಯವಾಗಿತ್ತು. ಆದರೆ ಇಸ್ಲಾಮಿನಲ್ಲಿ ವಿಧವೆಯರಿಗೆ ಯಾವುದೇ ಕಠೋರ ನಿಯಮವೂ ಇಲ್ಲ. ಪತಿಯು ಮೃತನಾದ ನಾಲ್ಕು ತಿಂಗಳು ಹತ್ತು ದಿನಗಳ ನಂತರ ಅವಳು ಬೇರೊಂದು ವಿವಾಹ ಮಾಡಿಕೊಳ್ಳಬಹುದಾಗಿದೆ.

8. ಅನಿವಾರ್ಯ ಪರಿಸ್ಥಿತಿಯಲ್ಲಿ ಪತಿಯನ್ನು ತ್ಯಜಿಸುವ ಹಕ್ಕನ್ನೂ ಇಸ್ಲಾಮ್, ಮಹಿಳೆಗೆ ನೀಡಿತು. ಹಿಂದೂ ಧರ್ಮದಲ್ಲಿ ಮಹಿಳೆಗೆ ಈ ಹಕ್ಕಿಲ್ಲ. ಈಗ ನಮ್ಮ ದೇಶದ ಸಂವಿಧಾನದ ಮೂಲಕ ಮಹಿಳೆಯರಿಗೆ ಕೆಲವು ಹಕ್ಕುಗಳನ್ನು ನೀಡಲಾಗಿದೆ.

9. ಯಾರಾದರೂ ಯಾವುದೇ ಮಹಿಳೆಯ ಮೇಲೆ ಅಪವಾದ ಹೊರಿಸಿದರೆ ನಾಲ್ಕು ಸಾಕ್ಷ್ಯಗಳನ್ನು ಹಾಜರು ಪಡಿಸುವುದನ್ನು ಇಸ್ಲಾಮ್ ಅನಿವಾರ್ಯಗೊಳಿಸಿತು. ಒಂದು ವೇಳೆ ನಾಲ್ಕು ಸಾಕ್ಷ್ಯಗಳನ್ನು ಹಾಜರು ಪಡಿಸಲಾಗದಿದ್ದರೆ ಆರೋಪಿಸಿದವರಿಗೆ ಎಂಬತ್ತು ಕೊರಡೆ ಏಟಿನ ಶಿಕ್ಷೆಯನ್ನು ನಿರ್ಣಯಿಸಿತು. ಇಲ್ಲಿ ಶ್ರೀ ರಾಮಚಂದ್ರ ಮತ್ತು ಹಝ್ರತ್ ಮುಹಮ್ಮದ್‌ರ ನಡವಳಿಕೆಯು ಗಮನಾರ್ಹವಾಗಿದೆ. ಮುಹಮ್ಮದ್‌ರ ಪತ್ನಿಯಾದ ಆಯಿಶಾರ ಮೇಲೆಯೂ ಅಪವಾದ ಹೊರಿಸಲಾಗಿತ್ತು. ಅದು ಸುಳ್ಳೆಂದು ವ್ಯಕ್ತವಾದಾಗ ಆಯಿಶಾ ನಿರ್ದೋಷಿಯೆಂದು ಸಾಬೀತಾಯಿತು. ಆದರೆ ಶ್ರೀರಾಮಚಂದ್ರನು ಕೇವಲ ಸಂಶಯದಿಂದ ಸೀತಾದೇವಿಯನ್ನು ಪರಿತ್ಯಾಗ ಮಾಡಿದ್ದಾನೆ. ಆಗ ಆಕೆಯು ಅಗ್ನಿ ಪರೀಕ್ಷೆಯ ಮೂಲಕ ಪಾವಿತ್ರ್ಯವನ್ನು ಸಾಬೀತು ಪಡಿಸಬೇಕಾಯಿತು. ಒಂದು ವೇಳೆ ಶ್ರೀ ರಾಮಚಂದ್ರನ ಈ ಆದರ್ಶವನ್ನು ಎಲ್ಲ ಪುರುಷರು ಅನುಸರಿಸಲಾರಂಭಿಸಿದರೆ ಎಷ್ಟೋ ನಿರ್ದೋಷಿ ಸ್ತ್ರೀಯರ ಜೀವನವೇ ನಷ್ಟವಾದೀತು. ನಿರ್ದೋಷಿ ಸ್ತ್ರೀಯರ ಮೇಲೆ ದೋಷಾರೋಪಣೆ ಹೊರಿಸುವುದನ್ನೇ ಘೋರ ಅಪರಾಧವೆಂದು ಘೋಷಿಸಿರುವ ಇಸ್ಲಾಮಿಗೆ ಮಹಿಳೆಯರು ಕೃತಜ್ಞರಾಗಿರಬೇಕಾಗಿದೆ.

10. ಇಸ್ಲಾಮ್, ತೂಕ-ಅಳತೆಯಲ್ಲಿ ಕಡಿತ ಮಾಡುವುದನ್ನೂ ಅಪರಾಧ ಮತ್ತು ಪಾಪವೆಂದು ಸಾರಿದೆ. ಪರಲೋಕದಲ್ಲಿಯೂ ಆ ಬಗ್ಗೆ ಪ್ರಶ್ನಿಸಲಾಗುವುದು.

11. ಇಸ್ಲಾಮ್, ಅನಾಥರ ಸಂಪತ್ತನ್ನು ಕಬಳಿಸುವುದನ್ನೂ ಪಾಪವೆಂದು ಸಾರಿದೆ.

12. ದೇವನನ್ನು ಪ್ರೀತಿಸುವುದಾದರೆ ಆತನ ಸೃಷ್ಟಿಗಳನ್ನೂ ಪ್ರೀತಿಸಬೇಕೆಂದು ಇಸ್ಲಾಮ್ ಹೇಳುತ್ತದೆ.

13. ದೇವನ ದಾಸರಿಗೆ ಅತ್ಯಧಿಕ ಒಳಿತು ಮಾಡುವವನನ್ನು ದೇವನು ಪ್ರೀತಿಸುವನೆಂದು ಇಸ್ಲಾಮ್ ಹೇಳಿದೆ.

14. ಪ್ರಾಣಿಗಳೊಂದಿಗೆ ದಯೆತೋರಿಸುವವರೊಡನೆ ದೇವನೂ ದಯೆ ತೋರಿಸುತ್ತಾನೆಂದು ಇಸ್ಲಾಮ್ ಹೇಳಿದೆ.

15. ದಯೆಯು ವಿಶ್ವಾಸದ ಚಿಹ್ನೆಯಾಗಿದೆ. ಯಾರಲ್ಲಿ ದಯೆಯಿಲ್ಲವೋ ಅವನು ವಿಶ್ವಾಸವನ್ನೇ ಹೊಂದಿಲ್ಲ.

16. ತನ್ನ ಸಂಗಾತಿಯನ್ನು ತನ್ನ ಸಮಾನವೆಂದು ಪರಿಗಣಿಸದಿರುವ ತನಕ ಯಾರ ವಿಶ್ವಾಸವೂ ಪರಿಪೂರ್ಣವಾಗುವುದಿಲ್ಲ.

17. ನೆರೆಯವನು ಹಸಿದಿರುತ್ತಾ ಹೊಟ್ಟೆ ತುಂಬಾ ಉಣ್ಣುವವನು ಸತ್ಯವಿಶ್ವಾಸಿಯಲ್ಲ.

18. ಇಸ್ಲಾಮಿ ರಾಷ್ಟ್ರವು ಕುಫ್ರನ್ನು(ಅಧರ್ಮ) ಒಂದು ವೇಳೆ ಸಹಿಸಬಹುದು. ಆದರೆ ಅಕ್ರಮ ಮತ್ತು ಅನ್ಯಾಯವನ್ನು ಸರ್ವಥಾ ಸಹಿಸಲಾರದು.

19. ಯಾರ ಉಪದ್ರವಗಳಿಂದ ನೆರೆಕರೆಯವನು ಸುರಕ್ಷಿತನಿಲ್ಲವೋ ಅವನು ವಿಶ್ವಾಸಿಯಲ್ಲ.[2]

20. ಒಬ್ಬನು ಇನ್ನೊಬ್ಬಾತನ ಒಂದು ಗೇಣಿನಷ್ಟು ಭೂಮಿಯನ್ನು ಅನ್ಯಾಯವಾಗಿ ವಶದಲ್ಲಿಟ್ಟು ಕೊಂಡರೆ, ಪುನರುತ್ಥಾನ ದಿನದಂದು ಅಂತಹ ಏಳು ಭೂಮಿಗಳನ್ನು ಅವನ ಮೇಲೆ ಹೊರಿಸಲಾಗುವುದು.

21. ಇಸ್ಲಾಮಿನಲ್ಲಿರುವಂತಹ ಸಮಾನತೆ ಮತ್ತು ಬಾಂಧವ್ಯಗಳು ಜಗತ್ತಿನಲ್ಲಿರುವ ಇತರ ಯಾವುದೇ ಧರ್ಮಗಳಲ್ಲಿಲ್ಲ. ಹಿಂದೂ ಧರ್ಮದಲ್ಲಿ ಹರಿಜನರನ್ನು ತುಚ್ಛರು ಮತ್ತು ಹೀನರೆಂದು ಪರಿಗಣಿಸಲಾಗುತ್ತದೆ. ಅದರ ವಿರುದ್ಧ ಬುದ್ಧನು 2500 ವರ್ಷಗಳ ಹಿಂದೆಯೇ ಸ್ವರವೆತ್ತಿದ್ದನು. ಅಲ್ಲಿಂದ ಈ ತನಕ ಅನೇಕ ಸುಧಾರಕರು ಆ ಧೋರಣೆಯನ್ನು ಬದಲಿಸಲು ಪ್ರಯತ್ನಿಸಿದ್ದರು. ಆಧುನಿಕ ಕಾಲದಲ್ಲಿ ಗಾಂಧೀಜಿಯವರು ಹಿಂದೂಗಳಲ್ಲಿದ್ದ ಈ ಭಾವನೆಯನ್ನು ಬದಲಾಯಿಸಲಿಕ್ಕಾಗಿ ಗರಿಷ್ಠ ಪ್ರಯತ್ನಿಸಿದರೂ ಯಶಸ್ವಿಯಾಗಲಿಲ್ಲ. ಅದೇ ರೀತಿ, ಕ್ರೈಸ್ತರಲ್ಲಿಯೂ ಬಿಳಿಯ ಕರಿಯರೆಂಬ ಭೇದಭಾವವಿದೆ. ಬಿಳಿಯರು ಮತ್ತು ಕರಿಯರಿಗೆ ಪ್ರತ್ಯೇಕ ಇಗರ್ಜಿಗಳಿವೆ. ಬಿಳಿಯರ ಇಗರ್ಜಿಯಲ್ಲಿ ಕರಿಯನು ಪ್ರಾರ್ಥನೆಗಾಗಿ ಪ್ರವೇಶಿಸುವಂತಿಲ್ಲ. ದಕ್ಷಿಣ ಆಫ್ರಿಕಾದಲ್ಲಿ ಈ ಕಾಲದಲ್ಲಿಯೂ ಬಿಳಿಯ ಕ್ರೈಸ್ತರು ಕರಿಯ ಕ್ರೈಸ್ತರ ಮೇಲೆ ಅಕ್ರಮ ದೌರ್ಜನ್ಯವೆಸಗುತ್ತಿದ್ದಾರೆ. ಅದೇ ವೇಳೆ ಜಗತ್ತಿನ ನಾಲ್ಕೂ ಕಡೆಗಳಲ್ಲಿ ಸಮಾಜವಾದದ ಕೂಗು ಕೇಳಿಸುತ್ತಿದೆ. ವಿಶ್ವಸಂಸ್ಥೆಯೂ ಅಸ್ತಿತ್ವದಲ್ಲಿದೆ. ಈ ಭೇದಭಾವವನ್ನು ಇಸ್ಲಾಮ್ ಧರ್ಮವು ಆಮೂಲಾಗ್ರವಾಗಿ ಅಳಿಸಿತು. ಅದೇ ದಕ್ಷಿಣಾಫ್ರಿಕಾದಲ್ಲಿ ಓರ್ವ ಝುಲು

---

[2]ಹಝ್ರತ್ ಮುಹಮ್ಮದ್‌ರು(ಸ) ನೆರೆಹೊರೆಯವರೊಡನೆ ಉತ್ತಮ ರೀತಿಯಲ್ಲಿ ವರ್ತಿಸುವುದಕ್ಕೆ ವಿಶೇಷ ಒತ್ತು ನೀಡಿದರು. ಇದರಲ್ಲಿ ಮುಸ್ಲಿಮ್-ಮುಸ್ಲಿಮೇತರರೆಂಬ ಭೇದವಿರಿಸಲಿಲ್ಲ. ಪ್ರವಾದಿವರ್ಯರ(ಸ) ಒಂದು ವಚನ ಹೀಗಿದೆ: "ತನ್ನ ಬಳಿ ದೇವಾದೇಶಗಳೊಂದಿಗೆ ಬಂದ ಎಲ್ಲ ಸಂದರ್ಭಗಳಲ್ಲಿಯೂ ಜಿಬ್ರೀಲರು ನೆರೆಕರೆಯವರೊಂದಿಗೆ ಸದ್ವರ್ತನೆ ತೋರುವಂತೆ ಆದೇಶಿಸುತ್ತಿದ್ದರು. ಪ್ರಾಯಶಃ ವಾರೀಸು ಸೊತ್ತಿನಲ್ಲಿಯೂ ನೆರೆಕರೆಯವರನ್ನು ಹಕ್ಕುದಾರರಾಗಿ ಮಾಡಿಬಿಡಲಾಗುವುದೋ ಎಂಬ ಭಾವನೆ ಮೂಡುತ್ತಿತ್ತು. ಇಸ್ಲಾಮಿನ ಮಹಾನ್ ವಿದ್ವಾಂಸರಾದ ಇಬ್ನು ಹಜರ್‌ರು ಈ ಪ್ರವಾದಿ ವಚನದ ವ್ಯಾಖ್ಯಾನದಲ್ಲಿ, ನೆರೆಕರೆಯವರೆಂದರೆ, ಮುಸ್ಲಿಮ್, ಮುಸ್ಲಿಮೇತರ, ಮಿತ್ರ, ಶತ್ರು ಎಲ್ಲರೂ ಅದರಲ್ಲಿ ಸೇರುತ್ತಾರೆಂದು ಹೇಳಿದ್ದಾರೆ. ಹಾಗೆಯೇ ಪ್ರವಾದಿವರ್ಯರು ಕರುಣೆ ಮತ್ತು ವಿನಯಶೀಲತೆಗೂ ಹೆಚ್ಚು ಒತ್ತು ನೀಡಿದ್ದಾರೆ. "ನನ್ನನ್ನು ಯಾರಿಗೂ ಶಾಪಕೊಡುವವನಾಗಿ ಕಳುಹಿಸಲಾಗಿಲ್ಲ, ನನ್ನನ್ನು ಕರುಣಾಳುವಾಗಿ ಕಳುಹಿಸಲಾಗಿದೆ" ಎಂದು ಪ್ರವಾದಿವರ್ಯರ ಇನ್ನೊಂದು ವಚನದಲ್ಲಿದೆ. ಕರುಣೆಗೆ ಸಂಬಂಧಿಸಿದ ಪ್ರವಾದಿಯವರ ಶಿಕ್ಷಣದಲ್ಲಿ ಮುಸ್ಲಿಮ್ ಮತ್ತು ಮುಸ್ಲಿಮೇತರರು ಮಾತ್ರವಲ್ಲ ಎಲ್ಲ ಪ್ರಾಣಿಗಳೂ ಸೇರಿವೆ.

ಮುಸ್ಲಿಮನಾದ ತಕ್ಷಣವೇ ಆತನಿಗೆ ಮುಸ್ಲಿಮ್ ಸಮಾಜದಲ್ಲಿ ಸಮಾನ ಸ್ಥಾನಮಾನ ಪ್ರಾಪ್ತವಾಗುತ್ತದೆ. ಆದರೆ ಆತ ಕ್ರೈಸ್ತನಾಗುವುದರಿಂದ ಅವನಿಗೆ ಈ ಸ್ಥಾನಮಾನ ದೊರೆಯುವುದಿಲ್ಲ. ಗಾಂಧೀಜಿಯವರು ಇಸ್ಲಾಮಿನ ಈ ಪ್ರೇರಕ ಶಕ್ತಿಯನ್ನು ಹಾರ್ದಿಕವಾಗಿ ಶ್ಲಾಘಿಸಿದ್ದಾರೆ.[3]

[3]ಜನಸಾಮಾನ್ಯರಿಗೆ ವಿಷಯವು ಸರಳವಾಗಿ ಮನವರಿಕೆಯಾಗ ಬೇಕೆಂಬ ಉದ್ದೇಶದಿಂದ ಶ್ರೀ ರಾಜೇಂದ್ರ ನಾರಾಯಣ ಲಾಲ್‌ರು ಸಂಕ್ಷಿಪ್ತ ನೀತಿಯನ್ನು ಅವಲಂಬಿಸಿದ್ದಾರೆ. ಹಾಗಿದ್ದರೂ ಸಮಾನತೆ ಮತ್ತು ಬಾಂಧವ್ಯದ ಬಗ್ಗೆ ಇಸ್ಲಾಮಿನ ಕೆಲವು ಬೋಧನೆ ಮತ್ತು ಉದಾಹರಣೆಗಳನ್ನು ಇಲ್ಲಿ ಉಲ್ಲೇಖಿಸುವುದು ಸೂಕ್ತವೆನಿಸುತ್ತದೆ. ಮಾನವತೆಯನ್ನು ಇಸ್ಲಾಮ್ ಮೂಲ ರೂಪದಲ್ಲಿಯೇ ಅಖಂಡವೆಂದು ಘೋಷಿಸಿದೆ. ಮಾನವರೆಲ್ಲರೂ ಒಂದೇ ತಂದೆತಾಯಿಯ ಸಂತಾನವೆಂದೂ ಅದು ಹೇಳುತ್ತದೆ.

ಪವಿತ್ರ ಕುರ್‌ಆನಿನಲ್ಲಿ ದೇವನು ಹೀಗೆ ಹೇಳಿರುವನು:

"ಜನರೇ, ನಾವು ನಿಮ್ಮನ್ನು ಒಬ್ಬ ಪುರುಷ ಮತ್ತು ಓರ್ವ ಸ್ತ್ರೀಯಿಂದ ಉಂಟು ಮಾಡಿದೆವು. ತರುವಾಯ ನೀವು ಪರಸ್ಪರ ಪರಿಚಯ ಪಟ್ಟುಕೊಳ್ಳಲಿಕ್ಕಾಗಿ ನಿಮ್ಮ ಜನಾಂಗಗಳನ್ನೂ ಗೋತ್ರಗಳನ್ನೂ ಮಾಡಿದೆವು. ನಿಮ್ಮ ಪೈಕಿ ಅತ್ಯಧಿಕ ಧರ್ಮನಿಷ್ಠನೇ ವಾಸ್ತವದಲ್ಲಿ ಅಲ್ಲಾಹನ ಬಳಿ ಅತಿ ಹೆಚ್ಚು ಗೌರವಕ್ಕೆ ಪಾತ್ರನು. ನಿಶ್ಚಯವಾಗಿಯೂ ಅಲ್ಲಾಹ್ ಸರ್ವಜ್ಞನೂ ವಿವರಪೂರ್ಣನೂ ಆಗಿರುತ್ತಾನೆ."

(ಅಲ್ ಹುಜುರಾತ್: 13)

ಇದು ಅತ್ಯಂತ ಅರ್ಥಪೂರ್ಣ ವಚನವಾಗಿದೆ. ಇದರಲ್ಲಿ ಮುಖ್ಯವಾಗಿ ಮೂರು ವಿಷಯಗಳನ್ನು ತಿಳಿಸಲಾಗಿದೆ. ಅವುಗಳನ್ನು ಅರ್ಥ ಮಾಡಿಕೊಳ್ಳದಿರುವುದರಿಂದ ಮಾನವರೆಲ್ಲರೂ ಕುಲ, ದೇಶ, ಜನಾಂಗ ಮತ್ತು ವರ್ಣಗಳಲ್ಲಿ ಹರಿಹಂಚಾಗಿದ್ದಾರೆ. ಮಾನವನು ತಾನು ಒಂದೇ ತಂದೆ-ತಾಯಿಯ ಸಂತಾನವೆಂಬುದನ್ನು ಮರೆತು ಬಿಟ್ಟಿದ್ದಾನೆ. ಮಾನವೇತಿಹಾಸವೇ ವೈರ, ಕಲಹ, ದ್ವೇಷ ಮತ್ತು ರಕ್ತಪಾತಗಳಿಂದ ತುಂಬಿದೆ. ಇಂದು ಕೂಡ ಅದೇ ಅವಸ್ಥೆಯಿದೆ. ಇದಕ್ಕೆ ಪ್ರಸ್ತುತ ಮಿಥ್ಯ ಭೇದಭಾವಗಳೇ ಕಾರಣವಾಗಿದೆ. ಈ ವಚನದಲ್ಲಿ ಪ್ರಸ್ತುತ ವಾಸ್ತವಿಕತೆಯನ್ನು ಮಾನವನಿಗೆ ಎತ್ತಿ ತೋರಿಸಲಾಗಿದೆ. ಎರಡನೆಯದಾಗಿ ಕುಲ, ಗೋತ್ರ, ಕುಟುಂಬ, ಜನಾಂಗ ಮತ್ತು ದೇಶಗಳು ಪರಸ್ಪರ ಭಿನ್ನವಾಗಿರುವುದರ ಅರ್ಥವು, ಅವು ಒಂದಕ್ಕಿಂತ ಇನ್ನೊಂದು ಶ್ರೇಷ್ಠ ಅಥವಾ ಒಬ್ಬನು ಇನ್ನೊಬ್ಬನಿಗಿಂತ ಕೀಳೆಂದಲ್ಲವೆಂದೂ ಹೇಳಲಾಗಿದೆ. ಎಲ್ಲ ಮಾನವರೂ ಭೂಮಿಯ ಒಂದೇ ಭಾಗದಲ್ಲಿ ವಾಸಿಸಲು ಸಾಧ್ಯವಿಲ್ಲದಿರುವುದರಿಂದ ಒಬ್ಬನು ಇನ್ನೊಬ್ಬನನ್ನು ಪರಿಚಯಿಸಲಿಕ್ಕಾಗಿ ಮತ್ತು ಒಬ್ಬನು ಇನ್ನೊಬ್ಬನ ಸ್ವಾಭಾವಿಕ ಹಕ್ಕನ್ನು ಸಲ್ಲಿಸುವುದಕ್ಕಾಗಿ ಈ ಎಲ್ಲ ಭಿನ್ನತೆಯನ್ನು ಏರ್ಪಡಿಸಲಾಗಿದೆ. ಅದುವೇ ವ್ಯಾವಹಾರಿಕವಾಗಿದೆ.

ಮೂರನೆಯದಾಗಿ ಕುಲ, ಗೋತ್ರ, ವರ್ಣ, ಜನಾಂಗ ಮತ್ತು ದೇಶಗಳ ಬದಲಾಗಿ ಸಂಯಮ, ಸಚ್ಚಾರಿತ್ರ್ಯ ಮತ್ತು ಸತ್ಕರ್ಮವೇ ಶ್ರೇಷ್ಠತೆಯ ಬುನಾದಿಯೆಂದು ಮನವರಿಕೆ ಮಾಡಿಸಲಾಗಿದೆ. ಸಹನಾಶೀಲ, ಸಚ್ಚರಿತ ಮತ್ತು ಸತ್ಕರ್ಮಿಯಾಗಿರುವವನೇ ಶ್ರೇಷ್ಠನು. ಅವನು ಯಾವುದೇ ದೇಶ, ಜನಾಂಗ, ಗೋತ್ರ ಮತ್ತು ವರ್ಣದವನಾಗಿದ್ದರೂ ಸರಿ. ಇದಕ್ಕೆ ವಿರುದ್ಧವಾಗಿರುವವನೇ ಅಧಮನಾಗಿದ್ದಾನೆ. ಅವನು ಯಾವುದೇ ದೇಶ, ಗೋತ್ರ ಮತ್ತು ವರ್ಣಗಳಿಗೆ ಸೇರಿದವನಾಗಿದ್ದರೂ ಸರಿ. ಅರೇಬಿಯಾದ ಮಹಾನ್ ದೇವಸಂದೇಶವಾಹಕ ಹಝ್ರತ್ ಮುಹಮ್ಮದ್‌ರ(ಸ)

ಇಸ್ಲಾಮ್ ಖಡ್ಗದಿಂದ ವ್ಯಾಪಿಸಿದೆಯೇ?

ಜಗತ್ತಿನ ಧರ್ಮಗಳ ಪೈಕಿ ಇಸ್ಲಾಮಿನ ವಿರುದ್ಧ ನಡೆದಿರುವಷ್ಟು ಅಪಪ್ರಚಾರ ಬೇರೆ ಯಾವ ಧರ್ಮದ ಬಗ್ಗೆ ನಡೆದಿಲ್ಲವೆಂಬುದು ಅದರ ವೈಶಿಷ್ಟ್ಯವಾಗಿದೆ. ಎಲ್ಲಕ್ಕಿಂತ ಮುಂಚಿತವಾಗಿ ಮುಹಮ್ಮದ್‌ರ ಕುರೈಶಿ ಗೋತ್ರವೇ ಇಸ್ಲಾಮನ್ನು ವಿರೋಧಿಸಿತು. ಅವರು ಅಪಪ್ರಚಾರ ಮತ್ತು ಅತ್ಯಾಚಾರಗಳನ್ನು ಅಸ್ತ್ರವಾಗಿ ಬಳಸಿದರು. ಆದರೆ ಅಪಪ್ರಚಾರ ಹೆಚ್ಚಿದಂತೆಯೇ ಇಸ್ಲಾಮ್ ಎಲ್ಲೆಡೆ ವ್ಯಾಪಿಸಿ ಅಭಿವೃದ್ಧಿ ಪಥದಲ್ಲಿ ಸಾಗಿರುವುದೂ ಅದರ ವೈಶಿಷ್ಟ್ಯವಾಗಿದೆ. ಅದು ದೈವಿಕ ಧರ್ಮವೆಂಬುದಕ್ಕೂ ಸಾಕ್ಷಿಯಾಗಿದೆ. ಇಸ್ಲಾಮಿನ ವಿರುದ್ಧ ನಾನಾ ರೀತಿಯ ಅಪಪ್ರಚಾರಗಳು ನಡೆದಿವೆ ಮತ್ತು ಈಗಲೂ ನಡೆಯುತ್ತಿವೆ. ಅಂತಹ ಕುಪ್ರಚಾರಗಳ ಪೈಕಿ

ಜನಾಂಗವಾಗಿರುವ ಕುರೈಶರಿಗೆ ತಮ್ಮ ಶ್ರೇಷ್ಠತೆಯ ಬಗ್ಗೆ ಜಂಭವಿತ್ತು. ಅವರು ಇತರ ಯಾವುದೇ ಜನಾಂಗವನ್ನು ತಮಗೆ ಸರಿಸಮಾನರೆಂದೇ ಭಾವಿಸುತ್ತಿರಲಿಲ್ಲ. ಮಕ್ಕಾ ವಿಜಯದ ಐತಿಹಾಸಿಕ ಸಂದರ್ಭದಲ್ಲಿ ಕುರೈಶರನ್ನು ಅಭಿಸಂಬೋಧಿಸಿ ಪ್ರವಾದಿವರ್ಯರು(ಸ) ಹೇಳುತ್ತಾರೆ:

"ಜನರೇ, ಎಲ್ಲ ಮಾನವರನ್ನು ಎರಡು ವಿಭಾಗಗಳಾಗಿ ವಿಂಗಡಿಸಲಾಗಿದೆ. ಸತ್ಕರ್ಮಿಗಳ ಮತ್ತು ಸಹನಾಶೀಲರ ಒಂದು ವಿಭಾಗ. ಅವರೇ ದೇವನ ಬಳಿ ಶ್ರೇಷ್ಠರಾಗಿದ್ದಾರೆ. ಇನ್ನೊಂದು ದುಷ್ಕರ್ಮಿಗಳು ಮತ್ತು ಕೆಟ್ಟ ಚಾರಿತ್ರ್ಯವಂತರ ವಿಭಾಗ. ಅವರು ದೇವನ ಮುಂದೆ ಅವಮಾನಿತರಾಗಲಿದ್ದಾರೆ. ಎಲ್ಲ ಮಾನವರೂ ಆದಮನ ಸಂತತಿಯಾಗಿದ್ದಾರೆ. ಆದಮರನ್ನಾದರೋ ದೇವನು ಮಣ್ಣಿನಿಂದ ಸೃಷ್ಟಿಸಿದ್ದಾನೆ."

ಈ ರೀತಿಯ ಭಾಷಣವನ್ನು ಲಂಕಾವಿಜಯದ ಸಂದರ್ಭದಲ್ಲಿ ಶ್ರೀ ರಾಮಚಂದ್ರನಾಗಲಿ ಮತ್ತು ಕೌರವರ ವಿಜಯದ ಸಂದರ್ಭದಲ್ಲಿ ಶ್ರೀಕೃಷ್ಣನಾಗಲಿ ನೀಡಿರಲಿಲ್ಲ.

ಮಹಾನ್ ಸಂದೇಶವಾಹಕರು ತಮ್ಮ ಜೀವನದ ಕೊನೆಯ ಹಜ್ಜ್‌ನ ವೇಳೆ ಹೇಳಿದರು: "ಜನರೇ ಗಮನಿಸಿರಿ. ನಿಮ್ಮೆಲ್ಲರ ದೇವನು ಒಬ್ಬನೇ, ಯಾವನೇ ಅರಬನಿಗೆ ಅರಬೇತರನಿಗಿಂತ, ಅರಬೇತರನಿಗೆ ಅರಬನಿಗಿಂತ, ಬಿಳಿಯನಿಗೆ ಕರಿಯನಿಗಿಂತ, ಕರಿಯನಿಗೆ ಬಿಳಿಯನಿಗಿಂತ ಯಾವುದೇ ಶ್ರೇಷ್ಠತೆಯಿಲ್ಲ. ಧರ್ಮನಿಷ್ಠೆ ಮತ್ತು ದೇವಭಕ್ತಿಯ ಹೊರತು." ಈ ರೀತಿಯ ಉಪದೇಶ ಮತ್ತು ಆದೇಶಗಳು ಕೇವಲ ಮಾತಿಗೆ ಸೀಮಿತವಾಗಿರಲಿಲ್ಲ. ಮಹಾನ್ ಸಂದೇಶವಾಹಕರ ಅನುಯಾಯಿಗಳಲ್ಲಿ ಅರಬರೂ ಅರಬೇತರರೂ ಗುಲಾಮರೂ ಇದ್ದರು. ಗುಲಾಮನಾಗಿದ್ದ ವ್ಯಕ್ತಿಗೆ ಕುರೈಶರಷ್ಟು ಮಾತ್ರವಲ್ಲ ಆ ಬಳಿಕ ಮುಸ್ಲಿಮರಾಗಿದ್ದ ಕುರೈಶರಿಗಿಂತ ಹೆಚ್ಚು ಪ್ರಾಮುಖ್ಯತೆ ಲಭ್ಯವಾಗಿತ್ತು. ಒಂದೆರಡು ಶತಮಾನಗಳಲ್ಲಿ ಅರಬೇತರ ಮುಸ್ಲಿಮ್ ವಿದ್ವಾಂಸರು ಅರೇಬಿಯಾದ ಧಾರ್ಮಿಕ ನೇತಾರರಾದರು. ಇಂದಿಗೂ ಸತ್ಕಾರಕೂಟಗಳಲ್ಲಿ, ಧಾರ್ಮಿಕ ವಿದ್ಯಾಲಯಗಳಲ್ಲಿ ಮತ್ತು ಮಸೀದಿಗಳಲ್ಲಿ ಇಸ್ಲಾಮಿನ ಸಮಾನತೆ ಮತ್ತು ಸಹೋದರತೆಯನ್ನು ಕಾಣಬಹುದು. ಇವರಲ್ಲಿ ಹೆಚ್ಚಿನವರು ಮುಸ್ಲಿಮ್ ಬಾದಶಹರ ಕಾಲದಲ್ಲಿ ಮುಸ್ಲಿಮ್ ಸಂತರ ಮೂಲಕ ಮುಸ್ಲಿಮರಾದ ಹಿಂದುಳಿದ ಜಾತಿಯವರಾಗಿದ್ದಾರೆ. ಇಸ್ಲಾಮಿನ ಸಮಾನತೆ ಮತ್ತು ಸಹೋದರತೆಯ ಮನೋಹರ ಮತ್ತು ಪ್ರಭಾವಶಾಲಿ ದೃಶ್ಯವನ್ನು ಹಜ್ಜ್‌ನ ವೇಳೆ ನೋಡಬಹುದು. ಅಂದು ಅಲ್ಲಿ ಅರಬರು, ಇರಾನಿಯರು, ಅಫಘಾನಿಯರು, ತುರ್ಕರು, ಭಾರತೀಯರು, ಮಲೇಶ್ಯನರು-ಇಂಡೋನೇಷಿಯರು ಹೀಗೆ ಎಲ್ಲರೂ ಪರಸ್ಪರ ಸಹೋದರರಾಗಿ ಬಿಡುತ್ತಾರೆ.

ಇಸ್ಲಾಮ್ ಖಡ್ಗ ಬಲದಿಂದ ವ್ಯಾಪಿಸಿತೆಂಬುದು ಅತ್ಯಂತ ಪ್ರಬಲವಾಗಿದೆ. ಒಂದು ವೇಳೆ ಹಾಗಲ್ಲದಿದ್ದರೆ ಜಗತ್ತಿನಲ್ಲಿ ಅನೇಕ ಧರ್ಮಗಳಿದ್ದರೂ ಕೇವಲ ಇಸ್ಲಾಮ್ ಧರ್ಮವು ಇಷ್ಟೊಂದು ವಿಸ್ಮಯಕರವಾಗಿ ವ್ಯಾಪಿಸಿದ್ದು ಹೇಗೆ? ಈ ಪ್ರಶ್ನೆ ಅಥವಾ ಸಂಶಯಕ್ಕೆ ಸಂಕ್ಷಿಪ್ತವಾಗಿ ಹೀಗೆ ಉತ್ತರಿಸಬಹುದು, ಇಸ್ಲಾಮ್ ಉದಯಗೊಂಡ ಕಾಲದಲ್ಲಿ ಇತರ ಧರ್ಮಗಳ ಆಚಾರಹೀನ ಅನುಯಾಯಿಗಳು ಅವುಗಳ ಕುಲಗೆಡಿಸಿದ್ದರು. ಆ ಪರಿಸ್ಥಿತಿಯಲ್ಲಿ ಮಾನವ ಕಲ್ಯಾಣಕ್ಕಾಗಿ ದೇವೇಚ್ಛೆಯಂತೆ ಇಸ್ಲಾಮ್ ಜಗತ್ತಿನಾದ್ಯಂತ ವ್ಯಾಪಿಸಿತೆಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ.[1]

ಮುಹಮ್ಮದ್‌ರಿಗೆ ಪ್ರವಾದಿತ್ವ ಪ್ರಾಪ್ತಿಯಾಗುವುದಕ್ಕಿಂತ ಮುಂಚೆ ಅರಬ್ ಜನಾಂಗವು ಸಂಪೂರ್ಣ ಧರ್ಮಭ್ರಷ್ಟವಾಗಿತ್ತು. ಪಾಪಕೃತ್ಯಗಳ ತಾಣವಾಗಿತ್ತು. ಇಂತಹ ಹಾದಿ ತಪ್ಪಿದ ಜನಾಂಗವನ್ನು, ನಿಸ್ವಾರ್ಥ ವಕ್ತಾರರು ಮತ್ತು ಸಚ್ಚರಿತರನ್ನಾಗಿ ಮಾಡುವುದಕ್ಕೆ ವಿಶೇಷ ಸಾಧನಾನುಕೂಲತೆಗಳಿಲ್ಲದಿದ್ದರೂ ದೇವ ಪ್ರೇರಣೆಯಿಂದ ಮುಹಮ್ಮದ್‌ರು ಒಬ್ಬಂಟಿಯಾಗಿ ರಂಗಕ್ಕಿಳಿದರು. ಅವರ ಹೃದಯ ಪರಿಶುದ್ಧವಾಗಿತ್ತು. ಅವರ ಉಪದೇಶಗಳಿಂದ ಜನರು ಇಸ್ಲಾಮ್ ಸ್ವೀಕರಿಸಲಾರಂಭಿಸಿದರು. ಆದರೆ ಅವರ ಜನಾಂಗದ ಸರದಾರರಿಗೆ ತಮ್ಮ ಪೂರ್ವಜರ ಧರ್ಮವನ್ನು ತೊರೆದು ಮುಹಮ್ಮದ್‌ರನ್ನು ತಮ್ಮ ಧರ್ಮಗುರುವೆಂದು ಅಂಗೀಕರಿಸಿ ಅವರ ಅಧೀನವಾಗುವ ಧೈರ್ಯವಿರಲಿಲ್ಲ. ಈ ಮಂದಿ ಪ್ರವಾದಿಯವರ ಧರ್ಮಪ್ರಚಾರಕ್ಕೆ ಅಡ್ಡಿಪಡಿಸಿದರು. ಅವರು ಮತ್ತು ಅವರ ಅನುಯಾಯಿಗಳನ್ನು ಹಿಂಸಿಸಿದರು. ಇದು ಅಸಹನೀಯವಾದಾಗ ಮುಸ್ಲಿಮರ ಒಂದು ಗುಂಪು ಅಬಿಸೀನಿಯಾಕ್ಕೆ ಹಿಜ್ರತ್ ಅರ್ಥಾತ್ ಧರ್ಮದ ಹೆಸರಲ್ಲಿ ದೇಶತೊರೆದು ವಲಸೆ ಹೋದರು.

ಮಕ್ಕಾದಲ್ಲಿ ಅಕ್ರಮಗಳು ಹೆಚ್ಚಿದುವು. ಕೊನೆಗೆ ಮುಹಮ್ಮದ್‌ರು ಮತ್ತು ಅವರ ಅನುಯಾಯಿಗಳಾಗಿದ್ದ ಮುಸ್ಲಿಮರಿಗೆ ತಾಯಿನಾಡಿನಲ್ಲಿ ವಾಸಿಸುವುದೇ ದುಸ್ತರವಾಯಿತು.

---

[1]ಮಕ್ಕಾ ನಿವಾಸಿಗಳು ತಮ್ಮ ಸರ್ವಶಕ್ತಿಯನ್ನು ಬಳಸಿ ಯುದ್ಧಗಳಿಂದ ಮುಸ್ಲಿಮರ ನಿರ್ಮೂಲನಕ್ಕೆ ಪ್ರಯತ್ನಿಸುತ್ತಿದ್ದಂತಹ ಕಾಲದಲ್ಲಿ ಈ ದೇವವಚನ ಅವತೀರ್ಣವಾಯಿತು. "ವೈರಿಗಳು ಅಲ್ಲಾಹನ ಜ್ಯೋತಿಯನ್ನು ತಮ್ಮ ಬಾಯಿಯಿಂದ ಊದಿ ನಂದಿಸಲಿಚ್ಛಿಸುತ್ತಾರೆ. ಆದರೆ ಅಲ್ಲಾಹನು ತನ್ನ ಜ್ಯೋತಿಯನ್ನು ಸಂಪೂರ್ಣವಾಗಿ ಹಬ್ಬಿಸಲು ನಿರ್ಧರಿಸಿದ್ದಾನೆ. ಇದು ಸತ್ಯನಿಷೇಧಿಗಳಿಗೆ ಎಷ್ಟು ಅಪ್ರಿಯವಾದರೂ ಸರಿಯೆ. ಸನ್ಮಾರ್ಗ ಮತ್ತು ಸತ್ಯಧರ್ಮದೊಂದಿಗೆ ತನ್ನ ಸಂದೇಶವಾಹಕರನ್ನು ಅವನೇ ಕಳುಹಿಸಿರುತ್ತಾನೆ. ಅದನ್ನು ಸಕಲ ಧರ್ಮಗಳ ಮೇಲೆ ಪ್ರಬಲ ಗೊಳಿಸಲಿಕ್ಕಾಗಿ. ಬಹುದೇವ ವಿಶ್ವಾಸಿಗಳಿಗೆ ಅದು ಎಷ್ಟೇ ಅಪ್ರಿಯವಾದರೂ ಸರಿ." (ಕುರ್‌ಆನ್, 61:8,9)

ಅರೇಬಿಯಾದಲ್ಲಿ ಬಹುದೇವವಿಶ್ವಾಸಿಗಳಲ್ಲದೆ ಯಹೂದಿ ಮತ್ತು ಕ್ರೈಸ್ತರೂ ಇದ್ದರು. ಆ ಎರಡೂ ಸಮುದಾಯಗಳು ಇಸ್ಲಾಮನ್ನು ದ್ವೇಷಿಸುತ್ತಿದ್ದುವು. ಇಸ್ಲಾಮ್ ಧರ್ಮವು ಖಡ್ಗ ಬಲದಿಂದ ವ್ಯಾಪಿಸಿತೆಂದು ಕ್ರೈಸ್ತ ರಾಷ್ಟ್ರಗಳೇ ಅಪಪ್ರಚಾರ ನಡೆಸಿದ್ದುವು. ಆದರೆ ಕಾಲಕ್ರಮೇಣ ಆ ರಾಷ್ಟ್ರಗಳಲ್ಲಿಯೇ ಈ ಆರೋಪವನ್ನು ಖಂಡಿಸುವಂತಹ ವಿದ್ವಾಂಸರೂ ಹುಟ್ಟಿ ಬೆಳೆದರು. ನಮ್ಮ ದೇಶದಲ್ಲಿಯೂ ಆರೋಪಿಸುವ ಮತ್ತು ಖಂಡಿಸುವಂತಹ ಎರಡು ಬಗೆಯ ವಿದ್ವಾಂಸರಿದ್ದಾರೆ.

ಮಕ್ಕಾದಲ್ಲಿ ಇಸ್ಲಾಮ್ ಈ ಪರಿಸ್ಥಿತಿಯಲ್ಲಿದ್ದರೆ ಅತ್ತ ಮದೀನಾದಲ್ಲಿ ಅದು ಮನೆಮನೆಗೂ ವ್ಯಾಪಿಸಿತು. ಇದರಿಂದಲೇ ಜಗತ್ತಿನಲ್ಲಿ ಇಸ್ಲಾಮ್ ಹೇಗೆ ಹಬ್ಬಿತೆಂದು ಅಂದಾಜಿಸಬಹುದು. ಮದೀನಾ ನಿವಾಸಿಗಳ ಒಂದು ತಂಡವು ಹಜ್ಜ್ ಕರ್ಮ ನಿರ್ವಹಣೆಗಾಗಿ ಮಕ್ಕಾಕ್ಕೆ ಬಂದಿತ್ತು. ಅವರನ್ನು ಭೇಟಿಯಾಗಿ ಮುಹಮ್ಮದ್‌ರು ಇಸ್ಲಾಮಿನ ಬಗ್ಗೆ ಉಪದೇಶಿಸಿದರು. ಪರಿಣಾಮವಾಗಿ ಅವರು ಇಸ್ಲಾಮ್ ಸ್ವೀಕರಿಸಿದರು. ಮುಂದಿನ ವರ್ಷ ಪುನಃ ಕೆಲವು ಮದೀನಾ ನಿವಾಸಿಗಳು ಹಜ್ಜ್ ನಿರ್ವಹಿಸುವುದಕ್ಕಾಗಿ ಬಂದರು. ಮುಹಮ್ಮದ್‌ರ ಉಪದೇಶದಿಂದ ಅವರೂ ಇಸ್ಲಾಮಿಗೆ ಸೇರಿದರು. ಅವರ ವಿನಂತಿಯ ಮೇರೆಗೆ ಅವರಿಗೆ ಶಿಕ್ಷಣ ನೀಡುವುದಕ್ಕಾಗಿ ಮುಹಮ್ಮದ್‌ರು ತನ್ನೋರ್ವ ಸಂಗಾತಿಯನ್ನು ಮದೀನಾಕ್ಕೆ ಕಳುಹಿಸಿಕೊಟ್ಟರು. ಈ ಸಂಗಾತಿಯ ಮೂಲಕ ಇಸ್ಲಾಮ್ ಅಲ್ಲಿ ಮನೆಮನೆಗೂ ತಲಪಿತು. ಮೂರನೆಯ ವರ್ಷ ಹಜ್ಜ್‌ನ ಸಂದರ್ಭದಲ್ಲಿ ಮದೀನಾ ಮುಸ್ಲಿಮರ ಬಹುದೊಡ್ಡ ತಂಡ ಮಕ್ಕಾಕ್ಕೆ ಆಗಮಿಸಿತು. ಅವರು ಮುಹಮ್ಮದ್ ಮತ್ತು ಅನುಯಾಯಿಗಳು, ಮಕ್ಕಾ ತ್ಯಜಿಸಿ ಮದೀನಾಕ್ಕೆ ಬರಬೇಕೆಂಬ ಬೇಡಿಕೆಯನ್ನು ಮುಂದಿಟ್ಟರು. ಧನ, ಪ್ರಾಣ ಹಾಗೂ ಇತರೆಲ್ಲ ರೀತಿಯಲ್ಲಿ ಪ್ರವಾದಿ ಮತ್ತು ಅನುಯಾಯಿಗಳಿಗೆ ಸಹಾಯ ಸಂರಕ್ಷಣೆ ಒದಗಿಸುವುದಾಗಿ ಮದೀನಾದ ಮುಸ್ಲಿಮರು ಭರವಸೆ ನೀಡಿದರು. ಆ ಮನವಿಯನ್ನು ಸ್ವೀಕರಿಸಿದ ಮುಹಮ್ಮದ್‌ರು ಮಕ್ಕಾದ ಮುಸ್ಲಿಮರಿಗೆ ಮದೀನಾಕ್ಕೆ ತೆರಳುವ ಆದೇಶ ನೀಡಿದರು. ಅವರೆಲ್ಲರೂ ಮದೀನಾಕ್ಕೆ ತೆರಳಿದರು. ಇದು ಅಬಿಸೀನಿಯಾದ ಹಿಜ್ರತ್‌ನ ಬಳಿಕ ಎರಡನೆಯ ಐತಿಹಾಸಿಕ ಹಿಜ್ರತ್ ಆಗಿತ್ತು. ಮುಹಮ್ಮದ್‌ರ ಹತ್ಯೆಗಾಗಿ ಶತ್ರುಗಳು ಅವರ ಮನೆಗೆ ಮುತ್ತಿಗೆ ಹಾಕಿದ್ದ ಸ್ಥಿತಿಯಲ್ಲಿ ಅವರು ರಾತ್ರಿಯ ವೇಳೆ ಹಿಜ್ರತ್(ವಲಸೆ) ಹೋಗಬೇಕಾಯಿತು. ದೇವನ ರಕ್ಷಣೆಯಲ್ಲಿ ಅವರು ತಮ್ಮ ಮನೆಯಿಂದ ಸುರಕ್ಷಿತವಾಗಿಯೇ ಹೊರಟರು.[1]

ಇದು ಇಸ್ಲಾಮಿನ 13 ವರ್ಷಗಳ ಇತಿಹಾಸವಾಗಿದೆ. ಹೀಗಿರುತ್ತಾ ಇಸ್ಲಾಮ್ ತನ್ನ ಸತ್ಯ ಮತ್ತು ನೈತಿಕ ಶಕ್ತಿ ಹಾಗೂ ಪ್ರವಾದಿ ಮುಹಮ್ಮದ್‌ರ ಪ್ರಭಾವಿ ವ್ಯಕ್ತಿತ್ವದಿಂದಾಗಿ ವ್ಯಾಪಿಸಿತೆಂದು ಒಪ್ಪಲು ಯಾವ ಅಡ್ಡಿಯಿದೆ. ಯುದ್ಧಗಳನ್ನಾದರೋ ಶತ್ರುಗಳೇ ಅವರ ಮೇಲೆ ಹೇರಿದ್ದರು. ಅವರು ಆತ್ಮ ರಕ್ಷಣೆಗಾಗಿ ದೇಶ ತ್ಯಾಗ ಮಾಡಿದಂತೆಯೇ ತಮ್ಮ ಆತ್ಮ ರಕ್ಷಣೆಗಾಗಿ ಯುದ್ಧ ಮಾಡಲೂ ನಿರ್ಬಂಧಿತರಾದರು. ಮುಹಮ್ಮದ್ ಮತ್ತು ಮುಸ್ಲಿಮರು ದೇಶವನ್ನು ತೊರೆದು ಹೋದ ಬಳಿಕವೂ ಮಕ್ಕಾ ನಿವಾಸಿಗಳ ಶತ್ರುತ್ವದ ಅಗ್ನಿಯು ಶಮನವಾಗಿರಲಿಲ್ಲ. ಅವರು ಮದೀನಾದ ಮೇಲೆಯೂ ಆಕ್ರಮಣ ನಡೆಸಲಾರಂಭಿಸಿದರು. ಅಂದು ಕೇವಲ ಧರ್ಮ ರಕ್ಷಣೆ ಮಾತ್ರವಲ್ಲ, ಪ್ರಾಣ ರಕ್ಷಣೆಯ ಪ್ರಶ್ನೆಯೂ ಎದುರಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ

---

[1]ಮಕ್ಕಾದಿಂದ ಮುಸ್ಲಿಮರ ಯಾವುದೇ ಖಡ್ಗವು ಮದೀನಾಕ್ಕೆ ಹೋಗಿರಲಿಲ್ಲ. ಆ ಕಾಲದಲ್ಲಿ ಮುಸ್ಲಿಮರು ಮಕ್ಕಾದಲ್ಲಿ ವೈರಿಗಳ ಕ್ರೂರ ಹಿಂಸೆ ದೌರ್ಜನ್ಯಗಳಿಗೆ ಗುರಿಯಾಗಿದ್ದರು. ಮಕ್ಕಾದಿಂದ ಮದೀನಾಕ್ಕೆ ವಲಸೆ ಹೋದ ಮುಸ್ಲಿಮರ ಕೈಗಳಲ್ಲಿ ಖಡ್ಗವಿರಲಿಲ್ಲ. ಅವರು ಅಲ್ಲಿಗೆ ಅಭಯಾರ್ಥಿಗಳಾಗಿ ಹೋಗಿದ್ದರೇ ವಿನಾ ಸೈನಿಕರಾಗಿಯಲ್ಲ. ಹಾಗಿದ್ದರೂ ಮದೀನಾದಲ್ಲಿ ಇಸ್ಲಾಮ್ ಮನೆಮನೆಗೆ ತಲಪಿತು.

ಮುಸ್ಲಿಮರಿಗೆ ರಕ್ಷಣಾರ್ಥವಾಗಿ ದೇವನಿಂದ ಯುದ್ಧದ(ಜಿಹಾದ್) ಅನುಮತಿ ದೊರೆಯಿತು. ಮುಹಮ್ಮದ್‌ರ ಆಂದೋಲನವು ಮಕ್ಕಾದಲ್ಲಿ ಸಂಪೂರ್ಣ ಶಾಂತಿಯುತವಾಗಿತ್ತು. ಆದರೆ ಮದೀನಾದಲ್ಲಿ ಅದು ಪ್ರಬಲವಾದಾಗ ಅವರು ತಮ್ಮ ಧೋರಣೆಯನ್ನು ಬದಲಾಯಿಸಿದರೆಂದು ಇಸ್ಲಾಮಿನ ವೈರಿಗಳು ಆಕ್ಷೇಪಿಸುತ್ತಾರೆ. ಆದರೆ ಇದು ತರ್ಕಹೀನ ಟೀಕೆಯಾಗಿದೆ. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿಯೂ ಮುಹಮ್ಮದ್‌ರು ತಮ್ಮ ಅನುಯಾಯಿಗಳೊಡನೆ, 'ನೀವು ಧರ್ಮದ ರಕ್ಷಣೆ ಮಾಡಬೇಡಿರಿ. ವೈರಿಗಳಿಗೆ ಕೊರಳೊಡ್ಡಿರಿ' ಎಂದು ಹೇಳಬೇಕಾಗಿತ್ತೇ? ರಕ್ಷಣಾತ್ಮಕ ಯುದ್ಧವನ್ನು ಯಾವ ಧರ್ಮ ಅಥವಾ ಯಾವ ರಾಜನೀತಿ ವಿರೋಧಿಸಿದೆ? ಶ್ರೀ ರಾಮಚಂದ್ರನು ಪತ್ನಿಗಾಗಿ ಮತ್ತು ಶ್ರೀ ಕೃಷ್ಣನು ಭೂಮಿಗಾಗಿ ಯುದ್ಧ ಮಾಡಿದನು. ಶ್ರೀ ರಾಮಚಂದ್ರನ ಯುದ್ಧದಲ್ಲಿ ಯಾವ ರಾಷ್ಟ್ರದ ಅಥವಾ ದೇಶದ ಕಲ್ಯಾಣವಾಯಿತು? ಶ್ರೀ ಕೃಷ್ಣನ ಯುದ್ಧದಲ್ಲಿ ಅವನ ಸಂಬಂಧಿಕರ ಹಾಗೂ ಅರ್ಜುನನ ಕುಟುಂಬದ ಪರಿಹಾರವಾಯಿತು. ರಾಷ್ಟ್ರದ ಶಕ್ತಿಯು ಕ್ಷೀಣಿಸಿತು. ಆದರೆ ಮುಹಮ್ಮದ್‌ರ ಯುದ್ಧದಲ್ಲಿ ಅವರ ಜನಾಂಗದ ಕೆಲವೇ ಮಂದಿ ಮಡಿದರು. ಪ್ರವಾದಿ ಮುಹಮ್ಮದ್‌ರು ಮಕ್ಕಾ ವಿಜಯದ ಸಂದರ್ಭದಲ್ಲಿ, ತಮ್ಮನ್ನು ಮತ್ತು ತಮ್ಮ ಅನುಯಾಯಿಗಳನ್ನು 23 ವರ್ಷಗಳಿಂದ ಪೀಡಿಸಿದ್ದ ಕುಖ್ಯಾತ ಅಪರಾಧಿಗಳಿಗೂ ಕ್ಷಮೆ ನೀಡಿದರು. ಅವರ ಜನಾಂಗವು ಸುರಕ್ಷಿತವಾಗಿ ಉಳಿಯಿತು. ಇಸ್ಲಾಮ್ ಧರ್ಮವೂ ಸಂಸ್ಥಾಪನೆಯಾಯಿತು. ಗೋತ್ರಗಳಲ್ಲಿ ಹರಿಹಂಚಾಗಿದ್ದ ದೇಶವು ಇಸ್ಲಾಮಿ ವ್ಯವಸ್ಥೆಯಲ್ಲಿ ಸೇರಿ ಅಖಂಡವಾಯಿತು.

ಇಸ್ಲಾಮ್ ಖಡ್ಗದ ಬಲದಿಂದ ಪ್ರಸಾರವಾಯಿತೆಂದು ಆಪಾದಿಸುವವರು, ಅರಬ್ ಮುಸ್ಲಿಮರನ್ನು ಸೋಲಿಸಿದ್ದ ಮುಸ್ಲಿಮೇತರ ತಾರ್ತಾರಿಗಳು ವಿಜೇತರಾದ ಬಳಿಕ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದರೆಂಬ ಸತ್ಯವನ್ನು ತಿಳಿದು ಬೆರಗಾಗಬಹುದು. ಅಂತಹ ವಿಚಿತ್ರ ಘಟನೆ ಹೇಗೆ ಸಂಭವಿಸಿತು? ಖಡ್ಗದ ಬಲವು ಗೆದ್ದವರ ಬಳಿಯಿರುವುದಷ್ಟೆ. ಆದರೂ ಅವರು ಇಸ್ಲಾಮಿಗೆ ಸೋತದ್ದೇಕೆ? ಇಸ್ಲಾಮಿನ ಅದ್ಭುತ ಪ್ರಸಾರದ ಬಗ್ಗೆ ಆರೋಪಿಸುವವರ ಬಳಿ ಈ ಪ್ರಶ್ನೆಗಳಿಗೆ ಯಾವ ಉತ್ತರವಿದೆ?

ಮಂಗೋಲಿಯನರ ಕ್ರೌರ್ಯವನ್ನು ತಡೆಯುವ ಶಕ್ತಿಯು ಇಸ್ಲಾಮಿನ ಹೊರತು ಬೇರೆ ಯಾವ ಧರ್ಮದಲ್ಲಿತ್ತು? ಇಡೀ ಜಗತ್ತೇ ಮಂಗೋಲಿಯನರ ಕ್ರೌರ್ಯಗಳಿಂದ ಗಡಗಡನೆ ನಡುಗುತ್ತಿತ್ತು. ಆದರೆ ಅವರಿಗೆ ಸಭ್ಯತೆ ಮತ್ತು ಸಂಸ್ಕೃತಿಯ ಪಾಠವನ್ನು ಕಲಿಸಿ ಮಾನವರಾಗಿ ಮಾಡಿದ ಕೀರ್ತಿ ಕೇವಲ ಇಸ್ಲಾಮಿಗೆ ಸಲ್ಲುತ್ತದೆ. ಚೀನಾ, ಇಂಡೋನೇಶ್ಯಾ[1] ಮತ್ತು ಆಫ್ರಿಕಾಗಳಲ್ಲಿ ಇಸ್ಲಾಮಿನ ಪ್ರಸಾರವು ಖಡ್ಗದಿಂದ ನಡೆದಿದೆಯೇ? ಇತಿಹಾಸ ಹಾಗೆ ತಿಳಿಸುವುದಿಲ್ಲ.

ಪ್ರಾಯಶಃ ಮಧ್ಯಕಾಲೀನ ಯುರೋಪು, ಭಾರತ ಅಥವಾ ಇತರ ರಾಷ್ಟ್ರಗಳಲ್ಲಿ ನಡೆದ ಯುದ್ಧದಲ್ಲಿ ಮುಸ್ಲಿಮರು ಒಂದು ಪಕ್ಷದಲ್ಲಿದ್ದು ವಿಜಯ ಸಾಧಿಸಿರಬಹುದು. ಅದರಿಂದ ಮುಸ್ಲಿಮ್ ಸಮಾಜವೂ ಸ್ಥಾಪನೆಯಾಯಿತು. ಸೋತ ಮುಸ್ಲಿಮೇತರರ ಮೇಲೆ ಅಕ್ರಮವಾಗಿರಬಹುದು ಮತ್ತು ಇಸ್ಲಾಮ್ ರಾಷ್ಟ್ರ ಧರ್ಮವಾಗಿದ್ದುದರಿಂದ ಕೆಲವು ಅತ್ಯುತ್ಸಾಹಿಗಳಾದ

[1]ಆಗ್ನೇಷ್ಯಾದ ರಾಷ್ಟ್ರ

ಅವಿವೇಕಿ ಮುಸ್ಲಿಮರಿಂದ ಬಲಪ್ರಯೋಗವೂ ನಡೆದಿರಬಹುದು. ಆದರೆ ಆ ರೀತಿಯ ಯುದ್ಧದ ನಾಶನಷ್ಟ ಮತ್ತು ಅವಿವೇಕದ ಕೃತ್ಯಗಳನ್ನು ಇಸ್ಲಾಮಿನ ಮೇಲೆ ಆರೋಪಿಸುವುದು ಮಹಾ ಅನ್ಯಾಯವಾಗಿದೆ. ಈ ಎಲ್ಲ ಯುದ್ಧಗಳು ಮುಸ್ಲಿಮರು, ಹಿಂದೂಗಳು, ಕ್ರೈಸ್ತರು, ರಜಪೂತರು, ಮೊಗಲರು ಮತ್ತು ಪಠಾಣರು ಪರಸ್ಪರ ತಮ್ಮ ತಮ್ಮೊಳಗೆ ನಡೆಸಿದ ಯುದ್ಧಕ್ಕೆ ಸಮಾನವಾಗಿದ್ದುವು.

ಒಂದು ವೇಳೆ ನಾವು ಈ ಎಲ್ಲ ಯುದ್ಧಗಳ ರಾಜಕೀಯ ಕಾರಣಗಳನ್ನು ನಿರ್ಲಕ್ಷಿಸಿ ಹಿಂದೂ ಮತ್ತು ಮುಸ್ಲಿಮರ ಯುದ್ಧಗಳಿಗೆ ಇಸ್ಲಾಮ್ ಕಾರಣವೆಂದು ಆರೋಪಿಸಿದರೆ ಅದು ವಾಸ್ತವಿಕತೆಗೆ ವಿರುದ್ಧವಾಗಲಾರದೇ? ಭಾರತದಲ್ಲಿ ಒಂದು ಪಕ್ಷದಲ್ಲಿ ಕೇವಲ ಮುಸ್ಲಿಮರು ಮತ್ತು ಇನ್ನೊಂದು ಪಕ್ಷದಲ್ಲಿ ಕೇವಲ ಹಿಂದೂಗಳಿದ್ದು ನಡೆದಂತಹ ಯುದ್ಧಗಳು ತೀರಾ ಅಪರೂಪವಾಗಿದೆ. ಒಂದೊಮ್ಮೆ ಆರಂಭ ಕಾಲದಲ್ಲಿ ಹೀಗೆ ನಡೆದಿರಬಹುದಾದರೂ ಭಾರತ ದಲ್ಲಿ ಮುಸ್ಲಿಮರು ಸ್ಥಿರವಾಗಿ ನೆಲೆಸಿದ ಬಳಿಕ ಅಂತಹ ಯುದ್ಧಗಳೂ ನಡೆದಿಲ್ಲ. 1565ರಲ್ಲಿ ಬಹಮನಿ ಮುಸ್ಲಿಮರ ರಾಜ್ಯ ಮತ್ತು ಹಿಂದೂಗಳ ವಿಜಯನಗರ ಸಾಮ್ರಾಜ್ಯದ ಮಧ್ಯೆ ನಡೆದ ತಾಳಿಕೋಟೆ ಯುದ್ಧದಲ್ಲಿ ಮುಸ್ಲಿಮರಿಂದ ಭಾರೀ ನಾಶನಷ್ಟ ಸಂಭವಿಸಿತ್ತು. ಆದರೆ ಅದಕ್ಕಿಂತ ಮುಂಚೆ ವಿಜಯನಗರದ ಹಿಂದೂ ಅರಸನು ಅಹ್ಮದಾಬಾದ್‌ನ ಮುಸ್ಲಿಮ್ ರಾಜ್ಯವನ್ನು ಸಂಪೂರ್ಣವಾಗಿ ಧ್ವಂಸಗೊಳಿಸಿದ್ದನು. ಮಾತ್ರವಲ್ಲ ಮುಸ್ಲಿಮರ ಮೇಲೆ ಘೋರ ಅಕ್ರಮ ವೆಸಗಿದ್ದನು. ತಾಳಿಕೋಟೆ ಯುದ್ಧವು ಅದರ ಪ್ರತೀಕಾರವಾಗಿತ್ತು.

ಇಸ್ಲಾಮಿನ ಮೇಲೆ ಬಲಾತ್ಕಾರದ ಧರ್ಮಪರಿವರ್ತನೆಯ ಆರೋಪ ಹೊರಿಸುವವರು ಮೆಕ್ಸಿಕೋದಲ್ಲಿ ಕ್ರೈಸ್ತರ ಮೂಲಕ ಲಕ್ಷಾಂತರ ಕ್ರೈಸ್ತೇತರರು ಕೊಲ್ಲಲ್ಪಟ್ಟ ಘೋರ ಘಟನೆ ಯನ್ನು ಜ್ಞಾಪಿಸಬೇಕು. ಹಾಗೆಯೇ ತನ್ನ ತಾಯಿನಾಡಿನಲ್ಲಿ ಬೌದ್ಧ ಧರ್ಮವು ಸ್ವತಃ ನಿರ್ಮೂಲನಗೊಂಡಿರ ಲಿಲ್ಲ. ಬದಲಾಗಿ ಬ್ರಾಹ್ಮಣ ಪುಷ್ಯಮಿತ್ರ ಗುಣದಿಂದ ಬೌದ್ಧರನ್ನು ಕ್ರೂರವಾಗಿ ಹಿಂಸಿಸಲಾಗಿತ್ತು.

ಕ್ರೈಸ್ತರು ವಿಶೇಷತಃ ಪೋರ್ಚುಗೀಸರು ತಮ್ಮದೇ ಸಂಪ್ರದಾಯವನ್ನು ಜೀವಂತ ಸುಟ್ಟುಕೊಳ್ಳುವುದು, ಮತಾಂಧತೆ ಹಾಗೂ ಕ್ರೈಸ್ತ ಮಿಶನರಿಗಳಿಂದ ಕುಟಿಲ ಆಮಿಷಗಳ ಮೂಲಕ ನಡೆಯುವ ಮತಾಂತರಗಳು ಇವೆಲ್ಲವೂ ಕೇವಲ ಸಾಮ್ರಾಜ್ಯವಾದಿ ಪ್ರೇರಣೆಯಿಂದಾಗಿದೆ. ಬಿಳಿಯ ಕ್ರೈಸ್ತರು ಕರಿಯ ಕ್ರೈಸ್ತರ ಮೇಲೆಸಗಿದ ಘೋರ ಅಕ್ರಮ ಮತ್ತು ಹಿಂದೂಗಳು ತಮ್ಮ ಸಹಧರ್ಮೀಯರಾದ ಹರಿಜನರ ಮೇಲೆ ಪರಂಪರಾಗತವಾಗಿ ನಡೆಸುತ್ತಿರುವ ಅಕ್ರಮಗಳು, ಮುಸ್ಲಿಮರ ಧರ್ಮಾಂಧತೆಗಿಂತ ಎಷ್ಟೋ ಅಧಿಕವಾಗಿದೆ. ಒಟ್ಟಿನಲ್ಲಿ ಇಸ್ಲಾಮ್ ಅದರ ಸರಳತೆ, ಶುದ್ಧ ಸಮಾನತೆ ಮತ್ತು ನೈತಿಕ ಬಲದಿಂದ ಪ್ರಚಾರಗೊಂಡಿದೆ.

ಕಾಫಿರ್ ಶಬ್ದದ ತಾತ್ಪರ್ಯ

"ಯುದ್ಧದ ಸಂದರ್ಭಗಳಲ್ಲಿ ಕಾಫಿರರನ್ನು ಮಿತ್ರರನ್ನಾಗಿಸಬೇಡಿರಿ. ಅವರೊಂದಿಗೆ ಯುದ್ಧ ಮಾಡಿರಿ, ಅವರನ್ನು ಕಂಡಲ್ಲಿ ಕೊಲ್ಲಿರಿ" ಎಂಬ ಕುರ್‌ಆನಿನ ಹೇಳಿಕೆಯನ್ನು ಎತ್ತಿ ತೋರಿಸಿಯೂ ಇಸ್ಲಾಮಿನ ಬಗ್ಗೆ ಭೀತಿ ಹೆಚ್ಚಿಸಲಾಗುತ್ತಿದೆ.

'ಕಾಫಿರ್' ಎಂಬ ಪದವು 'ಹಿಂದೂ' ಪದದ ಪರ್ಯಾಯ ಸೂಚಕವಲ್ಲ. ಕೃತಘ್ನನೆಂಬುದೇ ಅದರ ಮೂಲಾರ್ಥ. ಅದಕ್ಕೆ 'ನಿರಾಕರಿಸುವವನು' ಎಂಬ ಅರ್ಥವೂ ಇದೆ. ಆದ್ದರಿಂದ ಮುಹಮ್ಮದ್‌ರ ಪ್ರವಾದಿತ್ವವನ್ನು ಮತ್ತು ದೈವಿಕ ಗ್ರಂಥವಾಗಿರುವ ಕುರ್‌ಆನನ್ನು ನಂಬದ ವ್ಯಕ್ತಿಯು ನಿರಾಕರಿಸುವವನೆಂದೇ ಪರಿಗಣಿಸಲ್ಪಡುತ್ತಾನೆ. ಈ ಅರ್ಥದಲ್ಲಿ ಮುಹಮ್ಮದ್ ಮತ್ತು ಕುರ್‌ಆನನ್ನು ನಂಬದವರಿಗೆ ಕಾಫಿರ್ ಪದ ಪ್ರಯೋಗವಾಗಿದೆ. ಆ ಪ್ರಕಾರ ಯಹೂದಿಗಳು, ಕ್ರೈಸ್ತರು ಮತ್ತು ಫಾರ್ಸಿಗಳಿಗೂ ಕಾಫಿರ್ ಪದ ಅನ್ವಯವಾಗುತ್ತದೆ. ಮುಸ್ಲಿಮೇತರನು ವಾಸ್ತವದಲ್ಲಿ ಮುಸ್ಲಿಮೇತರನೇ ಆಗಿರುತ್ತಾನೆ. ಒಂದು ವೇಳೆ ಮುಸ್ಲಿಮನಾಗಿರುತ್ತಾ ನಮಾಝ್ ನಂತಹ ಯಾವುದೇ ಆರಾಧನೆ ಅಥವಾ ಆಜ್ಞೆಗಳನ್ನು ತಿರಸ್ಕರಿಸಿದರೆ ಆತನೂ ಕಾಫಿರನೆನಿಸುತ್ತಾನೆ.

ವೈದಿಕ ಧರ್ಮದಲ್ಲಿ 'ನಾಸ್ತಿಕ' ಎಂಬುದು ಕಾಫಿರ್‌ನ ಪರ್ಯಾಯ ಪದವಾಗಿದೆ. ವೇದವನ್ನು ನಂಬದಿರುವ ಬುದ್ಧನನ್ನು 'ನಾಸ್ತಿಕ' ಅರ್ಥಾತ್ 'ಕಾಫಿರ್' ಎಂದು ಹೇಳಲಾಗುತ್ತದೆ. ಬೌದ್ಧ ಧರ್ಮವು ಸ್ಪಷ್ಟವಾಗಿ ಹಿಂದೂ ಧರ್ಮಕ್ಕಿಂತ ಸಂಪೂರ್ಣ ಭಿನ್ನವಾಗಿರುವ ಧರ್ಮವಾಗಿದೆ. ಈ ವಾಸ್ತವಿಕಾಂಶಗಳ ಹಿನ್ನೆಲೆಯಲ್ಲಿ ಕಾಫಿರ್ ಪದವು ಹಿಂದೂಗಳಿಗಾಗಲಿ, ನಾಸ್ತಿಕ ಪದವು ಮುಸ್ಲಿಮರಿಗಾಗಲಿ ಅವಮಾನಕಾರಿಯಾಗುವುದಿಲ್ಲ. ಅದಲ್ಲದೇ ವ್ಯಾವಹಾರಿಕವಾಗಿ ಮುಸ್ಲಿಮರು, ಹಿಂದುಗಳನ್ನು ಹಿಂದೂಗಳೆಂದೇ ಕರೆಯುತ್ತಾರೆ ಮತ್ತು ಬರೆಯುತ್ತಾರೆ. ಹಾಗೆಯೇ ಹಿಂದೂಗಳು ಮುಸ್ಲಿಮರನ್ನು ಮುಸ್ಲಿಮರೆಂದೇ ಕರೆಯುತ್ತಾರೆ. ಅದು ಸಭ್ಯತೆಯೂ ಆಗಿದೆ. ಹಾಗಿದ್ದರೂ ಇಸ್ಲಾಮಿನಲ್ಲಿ ಮುಸ್ಲಿಮೇತರರ ಬಗ್ಗೆ ಕೇವಲ 'ಕಾಫಿರ್' ಎಂಬ ಒಂದೇ ಪದವನ್ನು ಬಳಸಲಾಗಿದೆ. ಅದೇ ವೇಳೆ ಹಿಂದೂ ಧರ್ಮದಲ್ಲಿ ಹಿಂದೂಯೇತರರಿಗೆ ಅನಾರ್ಯ, ಅಸಭ್ಯ, ದಸ್ಯು, ಮ್ಲೇಚ್ಛ ಮುಂತಾದ ಅನೇಕ ಅವಮಾನಕಾರಿ ಪದಗಳಿವೆ. ಹಿಂದೂಗಳು ತಮ್ಮ ಸಹಧರ್ಮೀಯರ ಒಂದು ವಿಭಾಗವನ್ನು ಅಂತ್ಯಜ, ಚಾಂಡಾಲ ಮತ್ತು ಅಸ್ಪೃಶ್ಯರೆಂದು ಕರೆಯುತ್ತಾರೆ.

ಸಗೋತ್ರ ವಿವಾಹ

ಇಸ್ಲಾಮಿನಲ್ಲಿ ಪ್ರತಿಪಾದಿಸಲಾಗಿರುವ ಸಗೋತ್ರ ವಿವಾಹವು ಆಕ್ಷೇಪಾರ್ಹವೆಂದು ಭಾವಿಸಲಾಗುತ್ತಿದೆ. ಆದರೆ ಸಗೋತ್ರ ವಿವಾಹವು ಮನೋವೈಜ್ಞಾನಿಕ, ಕೌಟುಂಬಿಕ, ಸಾಮಾಜಿಕ, ಆರ್ಥಿಕ ದೃಷ್ಟಿಕೋನದಿಂದಲೂ ಸಮಂಜಸವಾಗಿದೆ. ಸಗೋತ್ರ ವಿವಾಹವನ್ನು ಇತರ ಧರ್ಮಗಳಲ್ಲಿಯೂ ಪ್ರತಿಪಾದಿಸಲಾಗಿದೆ. ಅದನ್ನು ವಿರೋಧಿಸುತ್ತಿರುವ ಹಿಂದೂಗಳ ಪೂರ್ಣಾವತಾರವಾಗಿರುವ ಶ್ರೀಕೃಷ್ಣನಿಂದಲೂ ಅದಕ್ಕೆ ಮನ್ನಣೆ ದೊರೆತಿದೆ. ಹಿಂದೂಗಳಲ್ಲಿ ವಿರೋಧಾಭಾಸಗಳು ಸಾರ್ವತ್ರಿಕವಾಗಿದೆ. ಅಂತೆಯೇ ವಿವಾಹದ ಬಗ್ಗೆಯೂ ವಿರೋಧಾಭಾಸಗಳಿವೆ. ಹಿಂದುಗಳು ತಮ್ಮ ಪೂರ್ವ ಮಹಾ ಪುರುಷರಿಗೆ ಮನ್ನಣೆ ನೀಡುವ ಇತಿಹಾಸವನ್ನೇ ಹೊಂದಿದ್ದರೂ ನಿಷೇಧಾತ್ಮಕ ನೈತಿಕತೆ(Negative Morality)ಯ ಹೆಸರಲ್ಲಿ ಅದರಿಂದ ದೂರ ಉಳಿಯುವುದೇ ಅವರ ಪರಂಪರೆಯಾಗಿದೆ. ಇಸ್ಲಾಮಿನಲ್ಲಿ ಸಮ್ಮತಾರ್ಹ ಮತ್ತು ಸಮ್ಮತಾರ್ಹವಲ್ಲದ ಸಗೋತ್ರ ವಿವಾಹಗಳಿಗೆ ಮನೋವೈಜ್ಞಾನಿಕ ಆಧಾರಗಳಿವೆ. ಅದೇನಿದ್ದರೂ ಒಡ

ಹುಟ್ಟಿದ ಸಹೋದರಿ ಹಾಗೂ ತಂದೆಯ ಸಹೋದರ ಪುತ್ರಿಯರಂತಹ ಸಂಬಂಧಿಕ ಸಹೋದರಿಯರ ಬಗ್ಗೆ ಸಮಾನ ಭಾವನೆಯಿರುವುದಿಲ್ಲವೆಂಬುದು ಮನೋವೈಜ್ಞಾನಿಕ ವಾಸ್ತವಿಕತೆಯಾಗಿದೆ. ಹಿಂದೂಗಳಲ್ಲಿ ಸಗೋತ್ರತೆಯ ವ್ಯಾಪಕವಲಯ ನಿರ್ಮಿಸುವುದರಿಂದಾಗಿ ಒಂದೇ ಪೀಳಿಗೆಯಲ್ಲಿ ಅಥವಾ ಎರಡನೆಯ ಪೀಳಿಗೆಯಲ್ಲಿ ಈರ್ವರು ಸಹಜಾತ ಸಹೋದರರ ಕುಟುಂಬವೇ ಪರಸ್ಪರರಿಗೆ ಅಪರಿಚಿತವಾಗಿ ಬಿಡುತ್ತದೆ. ಓರ್ವ ಶ್ರೀಮಂತ ಸಹೋದರನು ತನ್ನ ಬಡಸಹೋದರನ ಅಥವಾ ಸಹೋದರಿಯ ಮಗಳೊಂದಿಗೆ ತನ್ನ ಮಗನ ವಿವಾಹ ಮಾಡಿಸಿದರೆ ಆತನು ಅವರಿಗೆ ಅತ್ಯುತ್ತಮ ಸಹಾಯ ಮಾಡಿದಂತಾದೀತು. ಇತರ ಸಾಮಾನ್ಯ ಸಹಾಯವು ಅಷ್ಟೊಂದು ಪರಿಣಾಮಕಾರಿಯಾಗಿರುವುದಿಲ್ಲ. ಅದು ತಾತ್ಸಾರ ಭಾವನೆಯನ್ನಷ್ಟೇ ಮೂಡಿಸುತ್ತದೆ. ವಸ್ತುತಃ ಸಗೋತ್ರ ವಿವಾಹವು ಸಮಾಜವಾದದ ಮೂಲಾಧಾರವಾಗಿದೆ. ಸಗೋತ್ರ ವಿವಾಹದ ನಿಷೇಧವು ವರದಕ್ಷಿಣೆಯನ್ನು ಬೆಳೆಸುತ್ತದೆ. ಕೌಟುಂಬಿಕ ಸುಖ ನೆಮ್ಮದಿಯನ್ನು ಕೆಡಿಸುತ್ತದೆ. ಹೆಣ್ಣು ಹುಟ್ಟಿದೊಡನೆ ಆಕೆಯ ತಂದೆ ತಾಯಂದಿರಿಗೆ ಅವಳ ವಿವಾಹ ಹೇಗೆ ನೆರವೇರಿಸುವುದೆಂಬ ಚಿಂತೆ ಆವರಿಸುತ್ತದೆ. ಗೋತ್ರದಲ್ಲಿಯೇ ಯೋಗ್ಯ ಗಂಡು ಲಭ್ಯವಿದ್ದರೂ ಹುಡುಗಿಯ ತಂದೆಯ ಚಪ್ಪಲಿಯು ವರನ ಹುಡುಕಾಟದಲ್ಲಿಯೇ ಸವೆದು ಹೋಗುತ್ತದೆ. ಅಪರಿಚಿತರ ಮಧ್ಯೆ ನಡೆಯುವ ವಿವಾಹದಲ್ಲಿ ಹಲವೊಮ್ಮೆ ಕೆಟ್ಟ ಪರಿಣಾಮವುಂಟಾಗುತ್ತದೆ. ಪೂರ್ಣಾವತಾರದ ಕೃಷ್ಣನಲ್ಲಿ ಸಗೋತ್ರ ವಿವಾಹಕ್ಕೆ ಮಾನ್ಯತೆಯಿತ್ತು. ಕುಂತಿಯು ಕೃಷ್ಣ ಮತ್ತು ಸುಭದ್ರೆಯರ ಸೋದರತ್ತೆಯಾಗಿದ್ದಳು. ಅರ್ಜುನನು ಕುಂತಿಯ ಮಗನಾಗಿದ್ದ. ಆ ಪ್ರಕಾರ ಅರ್ಜುನನು, ಸುಭದ್ರೆಯ ಸೋದರ ಸಂಬಂಧಿಯಾಗಿದ್ದ. ಆದರೂ ಅವರ ವಿವಾಹ ನಡೆದಿತ್ತು. ಹಾಗೆಯೇ ಅಭಿಮನ್ಯು, ಕೃಷ್ಣ ಮತ್ತು ಬಲರಾಮರ ಸಹೋದರಿ ಪುತ್ರನಾಗಿದ್ದ. ಆದರೆ ಅವನ ವಿವಾಹವು ಕೃಷ್ಣನ ಸಹೋದರಿಯ ಮಗಳು ಅರ್ಥಾತ್ ಬಲರಾಮನ ಪುತ್ರಿ ಶಶಿಕಲಾಳೊಂದಿಗೆ ನಡೆದಿತ್ತು. ಕೃಷ್ಣನಿಗೆ ರಾಧೆಯೊಂದಿಗೆ ಅನುರಾಗವಿತ್ತು. ಸಂಬಂಧದಲ್ಲಿ ಅವಳು ಅತ್ತೆಯಾಗಿದ್ದಳು. ಪೃಥ್ವಿರಾಜ್ ಮತ್ತು ಜಯಚಂದ್ರರು ಐತಿಹಾಸಿಕ ವ್ಯಕ್ತಿಗಳಾಗಿದ್ದಾರೆ. ಅವರೀರ್ವರೂ ಚಿಕ್ಕಮ್ಮ ಸಂಬಂಧಿ ಸಹೋದರರಾಗಿದ್ದರು. ಜಯಚಂದ್ರನ ಮಗಳು ಸಂಯೋಗಿತಾಳೊಂದಿಗೆ ಪೃಥ್ವಿ ರಾಜನಿಗೆ ಪ್ರೇಮವುಂಟಾಯಿತು. ಈ ಪ್ರೇಮವು ಮನೋವೈಜ್ಞಾನಿಕವಾಗಿ ಪ್ರತಿಕೂಲವಾಗಿರಲಿಲ್ಲ. ಒಂದು ವೇಳೆ ಅವರೀರ್ವರ ಮದುವೆ ನಡೆಯುತ್ತಿದ್ದರೆ ಪೃಥ್ವಿರಾಜ ಅಥವಾ ಜಯಚಂದ್ರನು ನಾಶವಾಗುತ್ತಿರಲಿಲ್ಲ ಅಥವಾ ಅದರಿಂದ ಹಿಂದೂ ರಾಜ್ಯಕ್ಕೆ ಹಾನಿಯಾಗುತ್ತಿರಲಿಲ್ಲ. ಈ ಎಲ್ಲ ವಾಸ್ತವಿಕಾಂಶಗಳ ಹಿನ್ನೆಲೆಯಲ್ಲಿ ಸಗೋತ್ರ ವಿವಾಹ (Cognate marriage)ವನ್ನು ನಿಷೇಧಿಸಿರುವ ಬಗ್ಗೆ ಹಿಂದೂಗಳು ಹೆಮ್ಮೆ ಪಡಬೇಕಾಗಿಲ್ಲ.

ಇಸ್ಲಾಮ್ ಮತ್ತು ಗುಲಾಮ ಪದ್ಧತಿ

ಇಸ್ಲಾಮ್ ಗುಲಾಮ ಪದ್ಧತಿ(Slavery)ಯನ್ನು ರೂಢಿಗೊಳಿಸಿ ತಪ್ಪು ಮಾಡಿದೆ ಅಥವಾ ಅದು ಗುಲಾಮ ಪದ್ಧತಿಯನ್ನು ಸಮರ್ಥಿಸುತ್ತದೆಂದು ಭಾವಿಸುವವರಿದ್ದಾರೆ. ನಿಜಕ್ಕೂ ಅದೊಂದು ಭ್ರಮೆಯಾಗಿದೆ. ವಸ್ತುತಃ ಇಸ್ಲಾಮ್ ಮಾನವನನ್ನು ಮನಸ್ಸು, ಮಾತು ಮತ್ತು

ಕೃತಿಗಳಿಂದ ಸಮತಾವಾದಿಯಾಗಿ ಮಾಡಿದ ಏಕೈಕ ಸಮರ್ಥ ಧರ್ಮವಾಗಿದೆ.[1] ಗುಲಾಮ ಪದ್ಧತಿಗೆ ಸಂಬಂಧಿಸಿದಂತೆ ಇಸ್ಲಾಮ್ ಮತ್ತು ಇಸ್ಲಾಮಿನ ಪ್ರವಾದಿಯವರು ಮನೋ ವೈಜ್ಞಾನಿಕ ಪರಿಹಾರವನ್ನು ಸ್ವೀಕರಿಸಿದ್ದಾರೆ. ಇಸ್ಲಾಮ್ ಮನ ಪರಿವರ್ತನೆ ಮತ್ತು ಮಸ್ತಿಷ್ಕ ಶುದ್ಧೀಕರಣ(Brain washing) ತಂತ್ರದಿಂದ ಈ ಕೆಟ್ಟ ವ್ಯವಸ್ಥೆಯನ್ನು ನಿರ್ಮೂಲನಗೊಳಿಸಿದೆ.

---

[1]ವಸ್ತುತಃ ಗುಲಾಮ ಸಮಸ್ಯೆಯು ನಾಲ್ಕು ಪತ್ನಿಯರ ಸಮಸ್ಯೆಯಂತೆಯೇ ಇದೆ. ಅಜ್ಞಾನ ಕಾಲದ ಅರೇಬಿಯಾದಲ್ಲಿ ಗುಲಾಮ ಪದ್ಧತಿ ರೂಢಿಯಲ್ಲಿತ್ತು. ಸಾಮಾನ್ಯ ಕುಟುಂಬಗಳಲ್ಲಿಯೂ ಮೂರ್‍ನಾಲ್ಕು ಗುಲಾಮರಿರುತ್ತಿದ್ದರು. ಶ್ರೀಮಂತ ಕುಟುಂಬಗಳಲ್ಲಿ ಅತ್ಯಧಿಕ ಗುಲಾಮರಿರುತ್ತಿದ್ದರು. ಗುಲಾಮರು ಅರಬರ ಗೃಹಸ್ಥ ಜೀವನದ ಅನಿವಾರ್ಯ ಅಂಗವೆನಿಸಿದ್ದರು. ಅವರು ತಮ್ಮ ಒಡೆಯರ ಹೊಲ ಮತ್ತು ತೋಟಗಳಲ್ಲಿ ದುಡಿಯುತ್ತಿದ್ದರು. ಒಂಟೆ, ಕುರಿ, ಆಡುಗಳನ್ನು ಮೇಯಿಸುತ್ತಿದ್ದರು. ಗುಲಾಮ ಸ್ತ್ರೀಯರು ಮನೆ ಕೆಲಸ ಮಾಡುತ್ತಿದ್ದರು. ಅವರ ಊಟ, ವಸತಿಯು ಮಾಲಿಕರ ಹೊಣೆಯಾಗಿತ್ತು. ಈ ಪರಿಸ್ಥಿತಿಯಲ್ಲಿ ಇಸ್ಲಾಮ್ ಧರ್ಮವು ಗುಲಾಮರನ್ನು ಸ್ವತಂತ್ರ ಗೊಳಿಸುವ ಕಾನೂನನ್ನು ರಚಿಸದಿರುತ್ತಿದ್ದರೆ ಅವರ ಅವಸ್ಥೆ ಏನಾಗುತ್ತಿತ್ತು? ಒಂದೆಡೆ ಗುಲಾಮರು, ನಿರ್ಗತಿಕರು ಮತ್ತು ನಿರಾಶ್ರಿತರಾಗುತ್ತಿದ್ದರು. ಇನ್ನೊಂದೆಡೆ ಅರಬರ ಜೀವನ ವ್ಯವಸ್ಥೆಯೇ ಅಸ್ತವ್ಯಸ್ತವಾಗುತ್ತಿತ್ತು. ಆದ್ದರಿಂದ ಇಸ್ಲಾಮ್ ಧರ್ಮವು ಗುಲಾಮಪದ್ಧತಿಯನ್ನು ಒಮ್ಮೆಲೆ ಕೊನೆಗೊಳಿಸದೆ ಆ ಬಗ್ಗೆ ಕಾನೂನು ರೂಪಿಸಿ ಗುಲಾಮರನ್ನು ತಮ್ಮ ಮಾಲಿಕರಿಗೆ ಸಮಾನ ಗೊಳಿಸಿತು. ಪ್ರವಾದಿಯವರು ಗುಲಾಮರ ಕುರಿತು ಅವರ ಮಾಲಕರಿಗೆ ಹೀಗೆ ಆಜ್ಞಾಪಿಸಿದರು: "ಗುಲಾಮರು ನಿಮ್ಮ ಸಹೋದರರಾಗಿದ್ದಾರೆ. ಆದ್ದರಿಂದ ನಿಮ್ಮ ಅಧೀನದಲ್ಲಿರುವ ಸಹೋದರರಿಗೂ ನೀವು ತಿನ್ನುವುದನ್ನೇ ತಿನ್ನಿಸಿರಿ ಮತ್ತು ನೀವು ಉಡುವಂಥದ್ದನ್ನೇ ಅವರಿಗೂ ಉಡಿಸಿರಿ. ಅವರ ಸಾಮರ್ಥ್ಯಕ್ಕಿಂತ ಹೆಚ್ಚಿನ ಕೆಲಸ ಮಾಡಿಸಬೇಡಿರಿ. ಒಂದೊಮ್ಮೆ ಅಂತಹ ಕೆಲಸ ಕೊಟ್ಟರೆ ಅದರಲ್ಲಿ ನೀವೂ ಸಹಕರಿಸಿರಿ." ಇದರೊಂದಿಗೆ ಗುಲಾಮ ವಿಮೋಚನೆಯ ಅನೇಕ ಮಾರ್ಗಗಳನ್ನು ತೆರೆಯಲಾಯಿತು.

ಉದಾ: i. ಗುಲಾಮರನ್ನು ಸ್ವತಂತ್ರಗೊಳಿಸುವುದು ಪುಣ್ಯದಾಯಕವೆಂದು ಸಾರಲಾಯಿತು. ಆದ್ದರಿಂದ ಜನರು ಗುಲಾಮರನ್ನು ಸ್ವತಂತ್ರಗೊಳಿಸಲಾರಂಭಿಸಿದರು.

ii. ಯಾವನಾದರೂ ರಮಝಾನ್ ತಿಂಗಳಲ್ಲಿ ವಿನಾ ಕಾರಣ ಉಪವಾಸ ತೊರೆದರೆ ಅದರ ಪ್ರಾಯಶ್ಚಿತ್ತವಾಗಿ ಓರ್ವ ಗುಲಾಮನನ್ನು ಸ್ವತಂತ್ರಗೊಳಿಸಬೇಕೆಂದು ಆದೇಶಿಸಿತು.

iii. ಯಾವನಾದರೂ ಒಂದು ವಿಷಯದ ಬಗ್ಗೆ ಆಣೆ ಹಾಕಿ ಅನಂತರ ಅದನ್ನು ಉಲ್ಲಂಘಿಸಿದರೆ ಅದರ ಪ್ರಾಯಶ್ಚಿತ್ತವಾಗಿ ಓರ್ವ ಗುಲಾಮನನ್ನು ಸ್ವತಂತ್ರಗೊಳಿಸಬೇಕೆಂದು ವಿಧಿಸಿತು.

iv. ಅರಬರು ಹಲವೊಮ್ಮೆ ಕೋಪದಿಂದ ಪತ್ನಿಯನ್ನು, 'ನೀನು ನನ್ನ ತಾಯಿಗೆ ಸಮಾನ' ಎಂದು ಹೇಳುತ್ತಿದ್ದರು. ಅರ್ಥಾತ್, ಇನ್ನು ಮುಂದೆ ನಾನು ನಿನ್ನೊಂದಿಗೆ ಲೈಂಗಿಕ ಸಂಪರ್ಕವಿರಿಸಲಾರೆನೆಂಬುದೇ ಅದರ ಇಂಗಿತವಾಗಿತ್ತು. ಆ ಕೆಡುಕಿನ ನಿವಾರಣೆಗಾಗಿ ಇಸ್ಲಾಮ್ ಧರ್ಮವು, ಆತನು ಪತ್ನಿಯೊಂದಿಗೆ ಪುನಃ ಸಂಪರ್ಕ ಬೆಳೆಸಬೇಕಾದರೆ ಪ್ರಾಯಶ್ಚಿತ್ತವಾಗಿ ಓರ್ವ ಗುಲಾಮನನ್ನು ವಿಮೋಚನೆಗೊಳಿಸಬೇಕೆಂದು ನಿರ್ಣಯಿಸಿತು.

v. ದಾಸಿಯರೊಂದಿಗೆ ವ್ಯಭಿಚಾರದ ಸಾಧ್ಯತೆ ಅಧಿಕವಾಗಿದೆ. ಅದು ನೈತಿಕವಾಗಿಯೂ ಸಾಮಾಜಿಕವಾಗಿಯೂ ಭೀಕರ ದುಷ್ಪರಿಣಾಮಗಳಿಗೆ ಕಾರಣವಾಗುತ್ತದೆ. ಈ ದುಷ್ಪರಿಣಾಮಗಳ

ಪ್ರವಾದಿಯವರು ಗುಲಾಮರನ್ನು ಪ್ರತಿದಿನ 70 ಬಾರಿ ಕ್ಷಮಿಸಬೇಕೆಂದು ಆದೇಶಿಸಿದ್ದಾರೆ. ಅಂತೆಯೇ ಗುಲಾಮರನ್ನು 'ಓ ನನ್ನ ಗುಲಾಮನೇ' ಎಂದು ಕರೆಯುವ ಬದಲಾಗಿ 'ಓ ನನ್ನ ಮಗನೇ ಅಥವಾ ಮಗಳೇ ಎಂದು ಕರೆಯುವಂತೆ ಸಾರಿದ್ದಾರೆ. ಗುಲಾಮರಿಂದ ದಣಿಸುವಂತಹ ಕೆಲಸ ಮಾಡಿಸಬಾರದು ಮತ್ತು ಕಠಿಣ ಕೆಲಸಗಳಲ್ಲಿ ಅವರಿಗೆ ಸಹಾಯ ಮಾಡಬೇಕೆಂದೂ ಆಜ್ಞಾಪಿಸಿದರು. ಎಲ್ಲಕ್ಕಿಂತ ಮಿಗಿಲಾಗಿ 'ನೀವೆಲ್ಲರೂ ದೇವನ ದಾಸರು' ಎಂಬ ಆದೇಶವನ್ನು ನೀಡುವ ಮೂಲಕ ಇಸ್ಲಾಮ್ ಮತ್ತು ಮುಹಮ್ಮದ್‌ರು(ಸ) ಗುಲಾಮ ಪದ್ಧತಿಯ ಬೇರನ್ನೇ

ನಿವಾರಣೆಯ ಪೂರ್ವಭಾವಿಯಾಗಿ ಇಸ್ಲಾಮ್ ದಾಸಿಯರನ್ನು ಒಂದು ಹಂತದ ತನಕ ಮಾಲಿಕನ ಪತ್ನಿಗೆ ಸಮಾನಗೊಳಿಸಿ, ಅವರಿಗೆ ಹುಟ್ಟುವ ಮಕ್ಕಳನ್ನು ದಾಸ ಅಥವಾ ದಾಸಿಯೆಂದು ಕರೆಯದೆ ಸ್ವತಂತ್ರರೆಂದು ಘೋಷಿಸಿತು.

ಭಾರತದಲ್ಲಿಯೂ ಗುಲಾಮ ಪದ್ಧತಿ ಧಾರ್ಮಿಕ ಮನ್ನಣೆ ಗಳಿಸಿತ್ತು. ಗುಲಾಮನು ಹುಟ್ಟಿನಿಂದಲೇ ಗುಲಾಮನಾಗಿರುತ್ತಿದ್ದ. ಆದ್ದರಿಂದ ಅವನು ಯಾವುದೇ ಸ್ಥಿತಿಯಲ್ಲಿಯೂ ಗುಲಾಮಗಿರಿಯಿಂದ ಮುಕ್ತನಾಗಲು ಸಾಧ್ಯವಿರಲಿಲ್ಲ. "ಶೂದ್ರನು ಸಂಬಳಕ್ಕೆ ಗೊತ್ತು ಮಾಡಿಕೊಂಡವನಾಗಿರಲಿ ಅಥವಾ ಇಲ್ಲದಿರಲಿ ಅಂತಹ ಶೂದ್ರನಿಂದ ಬ್ರಾಹ್ಮಣನು ತನ್ನ ಸೇವೆ ಮಾಡಿಸಿಕೊಳ್ಳಬೇಕು. ಏಕೆಂದರೆ ಶೂದ್ರನು ಬ್ರಾಹ್ಮಣನ ಸೇವೆಗಾಗಿಯೇ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟಿದ್ದಾನೆ." **(ಮನುಸ್ಮೃತಿ, 8:413)**

"ಒಡೆಯನು ಶೂದ್ರನನ್ನು ಬಿಡುಗಡೆ ಮಾಡಿದರೂ ಆ ಶೂದ್ರನು ಸೇವಕ ವೃತ್ತಿಯಿಂದ ಬಿಡುಗಡೆ ಹೊಂದಲಾರನು. ಏಕೆಂದರೆ ಸೇವಕವೃತ್ತಿಯು ಶೂದ್ರನ ಸಹಜ ಕರ್ತವ್ಯವಾಗಿದೆ. ಯಾವನು ತಾನೆ ಅದನ್ನು ಬಿಡಿಸಲು ಸಾಧ್ಯ?" **(ಮನುಸ್ಮೃತಿ, 8:414)**

"ಯುದ್ಧದಲ್ಲಿ ಸೋತು ದಾಸನಾದವನು, ಅನ್ನಕ್ಕಾಗಿ ಬಯಸಿ ದಾಸನಾದವನು, ತನ್ನ ಸೇವಕಿಯ ಮಗನು, ಕೊಂಡು ತಂದವನು, ದಾನವಾಗಿ ಸಿಕ್ಕಿದವನು, ವಂಶ ಪರಂಪರೆಯಿಂದ ದಾಸವೃತ್ತಿಯನ್ನನುಸರಿಸಿದವನು ಹಾಗೂ ಶಿಕ್ಷೆಯ ನಿಮಿತ್ತವಾಗಿ ದಾಸನಾದವನು - ಹೀಗೆ ಏಳು ರೀತಿಯ ಸೇವಕರು[ದಾಸರು] ಇರುತ್ತಾರೆ." ಹೀಗೆ ಈ ಏಳು ವರ್ಗದವರನ್ನು ಗುಲಾಮಯೋನಿ ಎಂದು ಕರೆಯಲಾಗುತ್ತದೆ. **(ಮನುಸ್ಮೃತಿ, 8:415)**

"ಬ್ರಾಹ್ಮಣನು ತನ್ನ ಸೇವಕನಾದ ಶೂದ್ರನ ಹಣವನ್ನು ಹಿಂದುಮುಂದು ನೋಡದೇ ಪಡೆಯಬಹುದು. ಏಕೆಂದರೆ ಸೇವಕನಿಗೆ ಸ್ವಂತದ್ದೆಂಬುದೇನೂ ಇರುವುದೇ ಇಲ್ಲ. ತನ್ನದೆಲ್ಲವನ್ನು ಅವನು ಒಡೆಯನಿಗೆ ಒಪ್ಪಿಸತಕ್ಕದ್ದು." **(ಮನುಸ್ಮೃತಿ, 8:417)**

ಇದು ಭಾರತದಲ್ಲಿದ್ದ ಗುಲಾಮ ಪದ್ಧತಿಯ ಅವಸ್ಥೆ. ಗುಲಾಮರಿಗೆ ಅರೇಬಿಯಾದಲ್ಲಿ ಯಾವುದೇ ಪ್ರತ್ಯೇಕ ಜನಾಂಗ ಅಥವಾ ವರ್ಗವೆಂಬುದಿರಲಿಲ್ಲ. ಅವರಿಗೆ ಗುಲಾಮಗಿರಿಯಿಂದ ವಿಮೋಚನೆ ದೊರೆಯುತ್ತಿತ್ತು. ಭಾರತದಲ್ಲಿ ಗುಲಾಮಗಿರಿಯು ಧಾರ್ಮಿಕ ಪದ್ಧತಿಯಾಗಿತ್ತು. ಇಸ್ಲಾಮ್ ಅರೇಬಿಯಾಕ್ಕೆ ಆಗಮಿಸಿದ ನಂತರ ಗುಲಾಮ ವಿಮೋಚನೆಯು ಧರ್ಮದ ಒಂದು ಭಾಗವಾಯಿತು. ಮುಸ್ಲಿಮ್ ಸಂತರು ಭಾರತಕ್ಕೆ ಆಗಮಿಸಿದೊಡನೆಯೇ ಲಕ್ಷಾಂತರ ಶೂದ್ರರನ್ನು ಮೇಲೆತ್ತಿ ಆಲಿಂಗಿಸಿದರು. ಭಾರತದಲ್ಲಿರುವ ಕೋಟ್ಯಾಂತರ ಮುಸ್ಲಿಮರು ಅದೇ ಶೂದ್ರರ ಸಂತಾನವಾಗಿದ್ದಾರೆ. ಅರೇಬಿಯಾ ಮತ್ತು ಭಾರತೀಯ ಗುಲಾಮರ ಸಂತಾನವು ಮುಸ್ಲಿಮರ ಧಾರ್ಮಿಕ ನೇತಾರರಾದರು. ಆದರೆ ಹಿಂದೂಗಳ ಉಚ್ಚ ವರ್ಗವು ಇಂದಿಗೂ ಶೂದ್ರರ ಹಕ್ಕುಗಳ ವಿರುದ್ಧವಾಗಿ ಹೋರಾಡುತ್ತಿದೆ.

ಕಿತ್ತು ಹಾಕಿದರು. ಗುಲಾಮರ ಸಂಕಷ್ಟಗಳನ್ನು ನಿವಾರಿಸಿದ್ದು ಮಾತ್ರವಲ್ಲ, ಅವರ ಸ್ಥಾನವನ್ನೂ ಉನ್ನತ ಗೊಳಿಸಿದರು. ಇಸ್ಲಾಮೀ ಸಮಾನತೆಯ ಪವಾಡ ಸದೃಶ ಪ್ರಭಾವಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ. ಇದಕ್ಕೆ ಭಾರತದಲ್ಲಿದ್ದ ಗುಲಾಮ ವಂಶದ ಆಡಳಿತವೇ ಒಂದು ಜ್ವಲಂತ ಉದಾಹರಣೆಯಾಗಿದೆ. ಗುಲಾಮರು ಶಕ್ತಿಯ ಬಲದಿಂದ ಆಡಳಿತಗಾರರಾಗಲಿಲ್ಲ. ಬದಲಾಗಿ ಯೋಗ್ಯತೆಯ ಆಧಾರದಲ್ಲಿ ಸಾಮ್ರಾಟರ ಪದವಿಗೇರಿದ್ದರು.[1] ಮುಸ್ಲಿಮ್ ಸಾಮ್ರಾಟರು ಯೋಗ್ಯರಾದ ಗುಲಾಮರನ್ನು ಪುತ್ರ ಸಮಾನವಾಗಿ ಪ್ರೀತಿಸುತ್ತಿದ್ದರು. ತದ್ವಿರುದ್ಧವಾಗಿ ಆಡಳಿತಾತ್ಮಕ ಕಾನೂನುಗಳ ಹೊರತಾಗಿಯೂ ಬಿಳಿಯ ಕ್ರೈಸ್ತರು ಕರಿಯ ಕ್ರೈಸ್ತರ ಮೇಲೆ ಅತಿರೇಕವೆಸಗುತ್ತಿದ್ದರು. ಕೋಟ್ಯಾಂತರ ಹರಿಜನರ ಮೇಲೆ ಸವರ್ಣೀಯ ಹಿಂದೂಗಳ ಅಕ್ರಮವು ಈಗಲೂ ಜಾರಿಯಲ್ಲಿದೆ.[2] ಅದು(ತಥಾಕಥಿತ) ಗುಲಾಮ ಪದ್ಧತಿಯನ್ನೂ ಮೀರಿಸಿದೆ. (ಅದರ ಆರೋಪವನ್ನು ಇಸ್ಲಾಮಿನ ಮೇಲೆ ಹೊರಿಸಲಾಗುತ್ತದೆ.)

ಶವ ದಫನ ಮತ್ತು ದಹನ

ಮುಸ್ಲಿಮರು ಶವ ದಫನ ಮಾಡುವುದನ್ನು ಅವೈಜ್ಞಾನಿಕವೆಂದು ಟೀಕಿಸಲಾಗುತ್ತಿದೆ. ವಸ್ತುತಃ ಶವವನ್ನು ದಹನ ಮಾಡುವುದಕ್ಕಿಂತ ದಫನ ಮಾಡುವುದೇ ಹೆಚ್ಚು ವೈಜ್ಞಾನಿಕ ಮತ್ತು ವಿವೇಕಯುತ ಕ್ರಿಯೆಯಾಗಿದೆ. ಕ್ರೈಸ್ತರು, ಯಹೂದಿಯರು ಮತ್ತು ಮುಸ್ಲಿಮರು ದಫನಾ ಪದ್ಧತಿಯನ್ನು ಅನುಸರಿಸುತ್ತಾರೆ. ಹಿಂದೂಗಳು, ಬೌದ್ಧರು ಮತ್ತು ಸಿಕ್ಖರು ಶವಗಳನ್ನು ದಹನ ಮಾಡುತ್ತಾರೆ. ಜಗತ್ತಿನ ಬಹುಸಂಖ್ಯಾತ ಜನರು ಹೆಣಗಳನ್ನು ದಫನ(Burial) ಮಾಡುವ ಪದ್ಧತಿಯನ್ನು ಅವಲಂಬಿಸಿದ್ದಾರೆ. ಇತರೆಲ್ಲ ದೇಶಗಳಿಗಿಂತ ಯುರೋಪು ಮತ್ತು ಅಮೇರಿಕಾಗಳು ವೈಜ್ಞಾನಿಕವಾಗಿ ಬಹಳಷ್ಟು ಮುಂದುವರಿದಿವೆ. ಅಂತಹ ವೈಜ್ಞಾನಿಕವಾಗಿ ಮುಂದುವರಿದ ರಾಷ್ಟ್ರಗಳಲ್ಲಿಯೇ ದಫನ ಪದ್ಧತಿಯು ರೂಢಿಯಲ್ಲಿರುವಾಗ ಅದನ್ನು ಅವೈಜ್ಞಾನಿಕವೆನ್ನಲಾದೀತೇ? ತದ್ವಿರುದ್ಧವಾಗಿ ದಹನ ಪದ್ಧತಿ(Cremation)ಯಿಂದ ವಾಯು ಮತ್ತು ಜಲ ಮಾಲಿನ್ಯವಾಗುತ್ತದೆ. ಶವ ಉರಿದ ಬಳಿಕ ಉಳಿದ ಅವಶೇಷಗಳನ್ನು ನೀರಿಗೆಸೆಯುವುದರಿಂದ ನೀರು ಮಲಿನವಾಗುತ್ತದೆ. ಈ ತುಟ್ಟಿಯ ಕಾಲದಲ್ಲಿ ಹಿಂದೂ ಪದ್ಧತಿಯಂತೆ ಶವದಹನ ಮಾಡುವುದೂ ದುಸ್ತರವಾಗಿದೆ. ದಹನ ಕ್ರಿಯೆಯಲ್ಲಿ ಈಗ ತುಪ್ಪ, ಚಂದನ, ಅಗರಬತ್ತಿ ಇತ್ಯಾದಿ ದುಬಾರಿ ಸುಗಂಧ ದ್ರವ್ಯಗಳ ಬಳಕೆ ಸಾಧ್ಯವಿಲ್ಲ. ಈ ಮೂಲಕ ಗಂಗಾ ಮತ್ತು ಯಮುನಾ ನದಿಯ ನೀರು ಮಲಿನಗೊಂಡಿದೆಯೆಂದು ವೈದ್ಯಕೀಯ ವರದಿಗಳು ತಿಳಿಸುತ್ತಿವೆ. ಒಂದು ವೇಳೆ ದಫನ ಪದ್ಧತಿಯು ಅವೈಜ್ಞಾನಿಕವೆಂದಾದರೆ ಹಿಂದೂ ಸನ್ಯಾಸಿಗಳ ಸಮಾಧಿ ಪದ್ಧತಿಯು

[1] ಈ ಗುಲಾಮರು ರಾಜಕೀಯ ಸಾಮರ್ಥ್ಯದಿಂದ ಆಡಳಿತಗಾರರು ಮತ್ತು ಸಾಮ್ರಾಟರಾಗಿದ್ದರು. ಮಾತ್ರವಲ್ಲದೇ ಅವರು ಬುದ್ಧಿಜೀವಿಗಳು, ವಿದ್ವಾಂಸರು ಮತ್ತು ಧಾರ್ಮಿಕ ನಾಯಕರೂ ಆಗಿದ್ದರು.

[2] ಭಾರತದಲ್ಲಿ ಈಗಲೂ ಹರಿಜನರೊಂದಿಗೆ ಅಕ್ರಮವೆಸಗಲಾಗುತ್ತಿದೆ. ಪ್ರತಿರೋಧಕ ಸಂಘರ್ಷ ಮತ್ತು ನರಹತ್ಯೆ ಹೆಚ್ಚುತ್ತಿದೆ.

ಅವೈಜ್ಞಾನಿಕವಲ್ಲವೇ? ಸಮಾಧಿ ಮತ್ತು ದಫನ ಕ್ರಿಯೆಯು ಸಮಾನವಾಗಿವೆ. ಹಿಂದೂಗಳ ಶವದಹನ ಪದ್ಧತಿಯು ವೆಚ್ಚದಾಯಕವಾಗಿದೆ. ಅದೇ ವೇಳೆ ದಫನ ಪದ್ಧತಿಯು ಅಗ್ಗ, ಸರಳ, ಸಾರ್ವತ್ರಿಕ ಮತ್ತು ವ್ಯಾವಹಾರಿಕವಾಗಿದೆ. ಈ ಪದ್ಧತಿಯು ಉತ್ತರ ಧ್ರುವದ ತನಕವೂ ಸರಳವಾಗಿದೆ. ಹಿಮ ಪ್ರದೇಶದ ನಿವಾಸಿಗಳಿಗೆ ತಮ್ಮ ಶವಗಳನ್ನು ಹಿಂದೂ ಪದ್ಧತಿಯಂತೆ ಉರಿಸಲು ಸಾಧ್ಯವಿದೆಯೇ? ಇತಿಹಾಸದ ಪ್ರಕಾರ ಶವ ದಫನವೇ ಮೂಲ ಪದ್ಧತಿಯಾಗಿದೆ.[1]

ಪುನರ್ಜನ್ಮ ಸಿದ್ಧಾಂತ

ಪುನರ್ಜನ್ಮ ಸಿದ್ಧಾಂತವನ್ನು ಸರ್ವಾಂಗೀಕೃತ ಸಿದ್ಧಾಂತವೆಂಬ ನೆಲೆಯಲ್ಲಿ ನಂಬಲಾಗುತ್ತಿದೆ. ಹಾಗಿದ್ದರೂ ಹಿಂದೂಗಳ ದೇವದತ್ತ ವೇದಗಳಲ್ಲಿ ಮೂಲತಃ ಪುನರ್ಜನ್ಮದ ಸ್ಪಷ್ಟ ಉಲ್ಲೇಖವಿಲ್ಲ. ಅದು ಅನಂತರ ಮೂಡಿದ ಕಲ್ಪನೆಯಾಗಿದೆ. ಇತರೆಲ್ಲ ವಿಷಯಗಳಂತೆಯೇ ಪುನರ್ಜನ್ಮದ ಬಗ್ಗೆಯೂ ಹಿಂದುಗಳಲ್ಲಿ ವಿರೋಧಾಭಾಸವಿದೆ. ಹಿಂದೂಗಳ ಧಾರ್ಮಿಕ ಗ್ರಂಥಗಳಲ್ಲಿ ಮತ್ತು ಸಾಮಾನ್ಯ ಧಾರ್ಮಿಕ ವಿಶ್ವಾಸಗಳಲ್ಲಿ ವಿಶೇಷತಃ ಗರುಡ ಪುರಾಣದಲ್ಲಿ ಸ್ವರ್ಗನರಕಗಳಿಗೂ ಮಾನ್ಯತೆಯಿದೆ. ಹಿಂದೂಗಳಲ್ಲಿ ಮೃತನಾದವನನ್ನು ಸಾಮಾನ್ಯವಾಗಿ ಸ್ವರ್ಗವಾಸಿ ಎನ್ನಲಾಗುತ್ತದೆ. ಗೀತೆಯಲ್ಲಿ ಮೃತ್ಯುವಿನ ಬಗ್ಗೆ, ಹಳೆ ವಸ್ತ್ರ ತ್ಯಜಿಸಿ ಹೊಸವಸ್ತ್ರ ಧರಿಸುವಂತೆ ಬೇರೆ ಜೀವನ ಪಡೆಯುವುದೆಂದು ತಿಳಿಸಿ ಅರ್ಜುನನಿಗೆ ಈ ದೇಹದ ನಶ್ವರತೆಯನ್ನು ಮನವರಿಕೆ ಮಾಡಿಸಲಾಗಿದೆ. ಅದೇ ಗೀತೆಯಲ್ಲಿ ಅರ್ಜುನನಿಗೆ ಈ ರೀತಿ ಉಪದೇಶಿಸಲಾಗಿದೆ: 'ಒಂದು ವೇಳೆ ಮಡಿದರೆ ಸ್ವರ್ಗ ಸೇರುವೆ, ಗೆದ್ದರೆ ರಾಜ್ಯವನ್ನು ಅನುಭೋಗಿಸುವೆ.' ಇದರಿಂದ ಪುನರ್ಜನ್ಮ ಅಥವಾ ಪುನರಾಗಮನದ ಸಿದ್ಧಾಂತದ ಹೊರತಾಗಿಯೂ ನೈತಿಕ ಮತ್ತು ಧಾರ್ಮಿಕವಾಗಿ ಸಾಮಾನ್ಯ ಹಿಂದುಗಳಲ್ಲಿ ಸ್ವರ್ಗ-ನರಕಗಳ ನಂಬಿಕೆಯಿದೆಯೆಂದು ವ್ಯಕ್ತವಾಗುತ್ತದೆ. ಮೇಲೆ ಉದ್ಧರಿಸಿದ ಗೀತೆಯ ಶ್ಲೋಕದಲ್ಲಿ ನೈತಿಕತೆಯ ಪ್ರೇರಣೆಯು ಸ್ವರ್ಗ-ನರಕದ ವಿಶ್ವಾಸದಿಂದಲೇ ದೊರೆಯುವುದೆಂದೂ ಸಾಬೀತಾಗುತ್ತದೆ. ಅರ್ಜುನನನ್ನು ಮೂಲವಾಗಿಟ್ಟು ಮಾನವರಲ್ಲಿ ನೈತಿಕ ಮೌಲ್ಯಗಳನ್ನು ಪ್ರೇರೇಪಿಸುವುದೇ ಗೀತೆಯ ಉದ್ದೇಶವಾಗಿತ್ತು. ಅದಕ್ಕೆ 'ಸ್ವರ್ಗಪ್ರಾಪ್ತಿ'ಯ ಪ್ರೇರಣೆಯೇ ಸೂಕ್ತ ಉಪಾಧಿಯೆಂದೂ ಕೃಷ್ಣ ಭಾವಿಸಿದ್ದ. ಆದ್ದರಿಂದ ಪುನರ್ಜನ್ಮವು ಹಿಂದೂ ಧರ್ಮದ ದಾರ್ಶನಿಕ ಸಿದ್ಧಾಂತವಾಗಿದೆಯಾದರೂ ಧಾರ್ಮಿಕವಾಗಿ ಸ್ವರ್ಗ-ನರಕಗಳಿಗೂ ಮಾನ್ಯತೆಯಿದೆಯೆಂದು ವ್ಯಕ್ತವಾಗುತ್ತದೆ. ಪುನರ್ಜನ್ಮ ಸಿದ್ಧಾಂತವು ತರ್ಕಶಾಸ್ತ್ರಕ್ಕೂ ವಿರುದ್ಧವಾಗಿದೆ. ಈ ಕಲಿಯುಗದಲ್ಲಿ ಪಾಪವು ವೃದ್ಧಿಸುತ್ತಿದೆಯೆಂದು ಹೇಳಲಾಗುತ್ತಿದೆ. ಸತ್ಯ ಯುಗದಲ್ಲಿ ಪಾಪದ ಪ್ರಮಾಣವು ಕಡಿಮೆಯಿತ್ತು.

---

[1] ಇಸ್ಲಾಮಿೞ ದಫನ ಪದ್ಧತಿಯಲ್ಲಿ ಶವದ ಸ್ನಾನ ಮಾಡಿಸಿ ಕಫನ ಬಟ್ಟೆ ತೊಡಿಸಿ ಸುಗಂಧ ಲೇಪಿಸಿ ಶವಮಂಚದಲ್ಲಿ ಮಲಗಿಸಿ ಕಬರಸ್ಥಾನಕ್ಕೆ ಸಾಗಿಸಿ ಗೌರವದಿಂದ ದಫನ ಮಾಡಲಾಗುತ್ತದೆ. ಮೃತ ಸ್ತ್ರೀಯರ ದೇಹ ಭಾಗಗಳನ್ನು ಹೊರಗೆ ಕಾಣಿಸದಂತೆ ಸಂಪೂರ್ಣ ಮುಚ್ಚಲಾಗುತ್ತದೆ. ಮೃತ ಸ್ತ್ರೀಯ ದೇಹವನ್ನು ಪತಿ, ಸಹೋದರ ಅಥವಾ ಪುತ್ರರ ಹೊರತು ಅನ್ಯ ಪುರುಷರು ಸ್ಪರ್ಶಿಸುವುದು ನಿಷಿದ್ಧವಾಗಿದೆ.

ಅದೇ ವೇಳೆ ಪುಣ್ಯಗಳಿಂದ ಮಾನವ ಯೋನಿ ಮತ್ತು ಪಾಪಗಳಿಂದ ಪಶುಯೋನಿ ಪ್ರಾಪ್ತವಾಗುವುದೆಂದೂ ಹೇಳಲಾಗಿದೆ. ಹಾಗಾದರೆ ಪಾಪವು ಚರಮಸೀಮೆಗೆ ತಲಪಿರುವ ಈ ಕಲಿಯುಗದಲ್ಲಿ ಮಾನವರ ಜನಸಂಖ್ಯೆ ದಿನನಿತ್ಯ ಹೆಚ್ಚುತ್ತಿರುವುದೇಕೆ? ಮಾನವನಿಗೆ ಈ ಜನ್ಮದಲ್ಲಿ ಮಾಡಿದ ಪಾಪದ ಪ್ರಜ್ಞೆಯೇ ಇಲ್ಲದಿರುವಾಗ ಆತನಲ್ಲಿ ಪುನರ್ಜನ್ಮದ ಪ್ರಜ್ಞೆ ಹೇಗೆ ಮೂಡೀತು. ಖಂಡಿತ ಮೂಡಲಾರದು. ಈ ಹಿನ್ನೆಲೆಯಲ್ಲಿ ಪುನರ್ಜನ್ಮದ ಸಿದ್ಧಾಂತವು ನಿರರ್ಥಕವಾಗಿದೆ. ಅದು ನೀತಿಶಾಸ್ತ್ರಕ್ಕೂ ಸರಿಹೊಂದುವುದಿಲ್ಲ. ಸ್ವಲ್ಪ ಆಲೋಚಿಸಿ ನೋಡಿರಿ. ಓರ್ವ ವ್ಯಕ್ತಿಯ ಹದಿಹರೆಯದ ಪುತ್ರ ಮೃತನಾದರೆ ನಾವು ಶೋಕ ಸೂಚಕವಾಗಿ ಸಾಂತ್ವನ ಹೇಳುವುದಕ್ಕೆ ಹೋಗುತ್ತೇವೆ. ಆಗ ಆ ದುಃಖತಪ್ತ ತಂದೆಯೊಡನೆ ನೀವು ಪೂರ್ವ ಜನ್ಮದಲ್ಲಿ ಯಾರದೋ ಪುತ್ರನನ್ನು ಕೊಲೆ ಮಾಡಿದ್ದೀರೆಂದು ಹೇಳಬಹುದೇ? ದುಃಖದ ವೇಳೆಯಲ್ಲಿ ತನಗೂ ಇತರರಿಗೂ ತಾಳ್ಮೆವಹಿಸುವಂತೆ ಉಪದೇಶಿಸುವುದೇ ಸಾಂತ್ವನದ ಯೋಗ್ಯ ಕ್ರಮವಾಗಿದೆ.

ಜಿಝಿಯಾದ ವಿಮರ್ಶೆ

ಜಿಝಿಯಾದ ಕುರಿತು ಮುಸ್ಲಿಮೇತರರಲ್ಲಿ ಬಹುದೊಡ್ಡ ತಪ್ಪು ತಿಳುವಳಿಕೆಯಿದೆ. ವಸ್ತುತಃ ಈ ತೆರಿಗೆಯು ಅತ್ಯಲ್ಪ ಸಂಖ್ಯೆಯಲ್ಲಿದ್ದ ಮುಸ್ಲಿಮೇತರರ ರಕ್ಷಣಾ ತೆರಿಗೆಯಾಗಿತ್ತು. ಏಕೆಂದರೆ ಇಸ್ಲಾಮಿ ರಾಷ್ಟ್ರದಲ್ಲಿ ಮುಸ್ಲಿಮೇತರರು ದೇಶರಕ್ಷಣೆಯ ಹೊಣೆಯಿಂದ ಮುಕ್ತರಾಗಿದ್ದರು. ಅವರ ರಕ್ಷಣೆಯ ಹೊಣೆ ಮುಸ್ಲಿಮರ ಮೇಲಿತ್ತು. ಯಾವುದೇ ಸ್ಥಿತಿಯಲ್ಲಿ ಬಲವಂತದ ಮತಾಂತರ ಇಸ್ಲಾಮಿನಲ್ಲಿ ಸಮ್ಮತಾರ್ಹವಲ್ಲವೆಂಬ ಸತ್ಯಕ್ಕೆ ಜಿಝಿಯಾ ಒಂದು ಪುರಾವೆಯಾಗಿದೆ. ಏಕೆಂದರೆ ಮುಸ್ಲಿಮೇತರನು ಜಿಝಿಯಾವನ್ನು ಪಾವತಿಸಿದ ಬಳಿಕ ಧಾರ್ಮಿಕ ಸ್ವಾತಂತ್ರ್ಯದ ಪೂರ್ಣ ಹಕ್ಕನ್ನು ಪಡೆಯುತ್ತಿದ್ದನು. ಹಿಂದುತ್ವದ ಸರ್ವಸ್ವವಾಗಿದ್ದ ಬ್ರಾಹ್ಮಣರೇ ಜಿಝಿಯಾದಿಂದ ಮುಕ್ತರಾಗಿದ್ದರೆಂಬುದಕ್ಕೆ ಇತಿಹಾಸವೇ ಸಾಕ್ಷಿಯಾಗಿದೆ.

ಅಕ್ಬರ್, ಜಹಾಂಗೀರ್ ಮತ್ತು ಶಾಹಜಹಾನ್‌ರ ಆಡಳಿತ ಕಾಲದಲ್ಲಿ ಜಿಝಿಯಾವನ್ನು ಸಂಪೂರ್ಣವಾಗಿ ರದ್ದುಪಡಿಸಲಾಗಿತ್ತು.[1]

[1] ಈಗ ಎಲ್ಲಿಯೂ ಜಿಝಿಯಾ ಅಥವಾ ಜಿಹಾದ್ ರೂಢಿಯಲ್ಲಿಲ್ಲ. ಹಾಗಿದ್ದರೂ ಅವುಗಳ ಬಗ್ಗೆ ಅಪಪ್ರಚಾರ ನಡೆಸಲಾಗುತ್ತಿದೆ. ಈ ಕುರಿತು ರಾಜೇಂದ್ರಜೀಯವರಿಗೂ ಸ್ಪಷ್ಟೀಕರಣ ನೀಡಬೇಕಾಗಿ ಬಂದಿದೆ. ಅನೇಕ ಮುಸ್ಲಿಮ್ ದೇಶಗಳಲ್ಲಿಯೂ ಕ್ರೈಸ್ತರು ಮತ್ತು ಹಿಂದೂಗಳಿದ್ದಾರೆ. ಆದರೆ ಯಾವ ದೇಶದಲ್ಲಿಯೂ ಅವರಿಂದ ಜಿಝಿಯಾ ಪಡೆಯುವುದಿಲ್ಲ. ಪಾಕಿಸ್ತಾನ ಮತ್ತು ಬಾಂಗ್ಲಾದೇಶಗಳಲ್ಲಿ ಹಿಂದೂಗಳಿಂದ ಜಿಝಿಯಾ ಪಡೆಯುವುದಿಲ್ಲ. ಬಾಂಗ್ಲಾ ಮತ್ತು ಪಾಕಿಸ್ತಾನ ಸರಕಾರಗಳಿಗೆ ಇಸ್ಲಾಮಿ ನಿಯಮದಂತೆ ಹಿಂದೂಗಳಿಂದ ಜಿಝಿಯಾ ಪಡೆಯುವ ಹಕ್ಕಿಲ್ಲವೆಂಬುದನ್ನು ನಾನು ಹಿಂದೂ ಸಹೋದರರ ಗಮನಕ್ಕೆ ತರಬಯಸುತ್ತೇನೆ. ಒಂದು ವೇಳೆ ಪಾಕಿಸ್ತಾನದಲ್ಲಿ ನೈಜ ಇಸ್ಲಾಮಿ ಸಂವಿಧಾನ ಜಾರಿಯಾದರೂ ಹಿಂದೂಗಳ ಹಕ್ಕುಗಳು ಮತ್ತಷ್ಟು ಸುರಕ್ಷಿತವಾಗುತ್ತವೆ. ಆಗ ಅಲ್ಲಿನ ಸರಕಾರಗಳಿಗೆ ಪರಧರ್ಮೀಯರ ವಿಶ್ವಾಸ, ಆಚಾರ, ಭಾಷೆ ಅಥವಾ ಸಂಸ್ಕೃತಿ, ನಡವಳಿಕೆ ಇತ್ಯಾದಿಗಳಲ್ಲಿ ಹಸ್ತಕ್ಷೇಪ ನಡೆಸುವ ಯಾವುದೇ ಅಧಿಕಾರವಿರುವುದಿಲ್ಲ.

ಯುರೋಪು ಮತ್ತು ಭಾರತದಲ್ಲಿ ಇಸ್ಲಾಮಿನ ಪ್ರಭಾವ

ಯುರೋಪು ಮತ್ತು ಭಾರತದಲ್ಲಿ ಇಸ್ಲಾಮಿನ ಪ್ರವೇಶಕ್ಕೆ ಒಂದು ಪ್ರಧಾನ ಕಾರಣವೂ ಇದೆ. ಅದು ಅಲ್ಲಿನ ಮಾನವೀಯ ಬೇಡಿಕೆ ಮತ್ತು ದೈವಿಕ ಪ್ರೇರಣೆಯಾಗಿತ್ತು. ಯುರೋಪಿನಲ್ಲಿ ಮುಸ್ಲಿಮರ ಪ್ರವೇಶ ಮತ್ತು ಕ್ರೈಸ್ತ ಹಾಗೂ ಮುಸ್ಲಿಮರ ಮಧ್ಯೆ ಸಂಭವಿಸಿರುವ ಯುದ್ಧಗಳ ಬಗ್ಗೆ ಕ್ರೈಸ್ತರು ಅದನ್ನು ಶಿಲುಬೆ ಯುದ್ಧ(Crusade)ವೆಂದೂ ಮುಸ್ಲಿಮರು ಜಿಹಾದೆಂದೂ ಕರೆಯುತ್ತಾರೆ.

ಈ ಯುದ್ಧಗಳು ಯಾವುದೇ ಸ್ವರೂಪದ್ದಾಗಿದ್ದರೂ ಯುರೋಪನ್ನು ಅನಾಗರಿಕತೆಯಿಂದ ಸುಸಂಸ್ಕೃತಗೊಳಿಸುವ ನಿಟ್ಟಿನಲ್ಲಿ ಇಸ್ಲಾಮಿನ ಬಹುದೊಡ್ಡ ಕೊಡುಗೆಯಿದೆಯೆಂಬ ಸತ್ಯವನ್ನು ಮುಸ್ಲಿಮೇತರ ಇತಿಹಾಸಗಾರರೇ ಒಪ್ಪಿದ್ದಾರೆ. ಮುಸ್ಲಿಮರು ಗ್ರೀಕ್ ಸಾಹಿತ್ಯ, ದರ್ಶನಶಾಸ್ತ್ರ, ವಿಜ್ಞಾನ ಮತ್ತು ಗಣಿತಗಳ ಭದ್ರತೆ ಮತ್ತು ಅಭಿವೃದ್ಧಿಗಾಗಿಯೂ ಬಹುದೊಡ್ಡ ಕೊಡುಗೆ ನೀಡಿದ್ದಾರೆ. ಆ ಮೂಲಕ ಅವರು ಯುರೋಪನ್ನೇ ಬೆಳಗಿಸಿದ್ದರು. ಹಾಗೆಯೇ ಉನ್ನತ ಮಟ್ಟದ ಕಲೆಯು ಅವರ ಮೂಲಕವೇ ಬಂದಿದೆ. ಮುಸ್ಲಿಮರು ಆ ಬಗ್ಗೆ ಮಹಾ ಔದಾರ್ಯವನ್ನೇ ತೋರಿಸಿದ್ದರು. ಮುಸ್ಲಿಮರ ಪ್ರವೇಶದಿಂದ ಯುರೋಪು ಈ ಎಲ್ಲ ಲಾಭಗಳನ್ನು ಪಡೆಯಿತು. ಮುಸ್ಲಿಮರ ಸಂಪರ್ಕ ಕಡಿದುಕೊಂಡ ಬಳಿಕ ಯುರೋಪು ಭೌತಿಕ ಉನ್ನತಿಯೆಡೆಗೆ ಸಾಗಿದ್ದರೂ ನೈತಿಕ ಶಿಖರದಿಂದ ಕೆಳಗೆ ಉರುಳಿತು. ಅದರ ಪರಿಣಾಮವನ್ನು ಇಂದು ನಾವು ನೋಡುತ್ತಿದ್ದೇವೆ. ಇಡೀ ಯುರೋಪು ಮತ್ತು ಅಮೇರಿಕ ಮದ್ಯಪಾನ, ವ್ಯಭಿಚಾರ, ಜೂಜಾಟ, ದರೋಡೆ ಕೊಲೆಗಳಿಂದ ತುಂಬಿ ಹೋಗಿದೆ.

ಯುರೋಪಿನಲ್ಲಿ ಕ್ರೌರ್ಯದ ಬದಲಿಗೆ ಸುಸಂಸ್ಕೃತಿ ಮತ್ತು ಮಾನವೀಯತೆಯ ಅಗತ್ಯವಿದ್ದಾಗ ದೈವಿಕ ಪ್ರೇರಣೆಯಿಂದ ಅಲ್ಲಿ ಇಸ್ಲಾಮಿನ ಪ್ರವೇಶವಾಯಿತು. ಅದು ಅಲ್ಲಿ ನೈತಿಕತೆ ಮತ್ತು ಸಮಾನತೆಯ ಪ್ರಕಾಶ ಚೆಲ್ಲಿತು. ಕ್ರೈಸ್ತ ಧರ್ಮದ ಅನಾಚಾರಗಳ ನಿವಾರಣೆಗಾಗಿ ಮಾರ್ಟಿನ್ ಲೂಥರ್ ಮುಂತಾದ ಧರ್ಮ ಸುಧಾರಕರಿಗೆ ಪ್ರೇರಣೆ ನೀಡಿತು. ಹಾಗೆಯೇ ಭಾರತದಲ್ಲಿಯೂ ಮಾನವೀಯತೆಯ ಬೇಡಿಕೆ ಮತ್ತು ದೈವಿಕ ಪ್ರೇರಣೆಯ ಈಡೇರಿಕೆಗಾಗಿ ಇಸ್ಲಾಮಿನ ಪ್ರವೇಶವಾಯಿತು.

ಇಸ್ಲಾಮೀ ರಾಷ್ಟ್ರದ ಪ್ರಜೆಗಳಲ್ಲಿ 3 ವಿಧದವರಿರುತ್ತಾರೆ:

i) ಯುದ್ಧದಲ್ಲಿ ಸೋತು ಇಸ್ಲಾಮನ್ನು ಸ್ವೀಕರಿಸದೆ ತಮ್ಮ ಧರ್ಮದಲ್ಲಿಯೇ ಉಳಿಯ ಬಯಸಿದವರು. ಅವರಿಗೆ ಜಿಝಿಯಾ ಅನ್ವಯವಾಗುತ್ತದೆ.

ii) ಯುದ್ಧದಲ್ಲಿ ಸೋಲುವುದಕ್ಕಿಂತ ಮುಂಚೆ ಸಂಧಾನಮಾಡಿಕೊಂಡವರು. ಸಂಧಾನವು ಶರತ್ತಿಲ್ಲಿಯೂ ಆಗಬಹುದು. ಒಂದು ವೇಳೆ ಜಿಝಿಯಾದ ಹೊರತು ಇತರ ಶರತ್ತುಗಳಲ್ಲಿ ಸಂಧಾನವಾಗಿದ್ದರೆ ಆ ಶರತ್ತುಗಳಿಗೆ ವಿರುದ್ಧವಾಗಿ ಅವರಿಂದ ಜಿಝಿಯಾ ಸ್ವೀಕರಿಸಲಾಗುವುದಿಲ್ಲ.

iii) ಯುದ್ಧದಲ್ಲಿ ಸೋತು ಅಥವಾ ಸಂಧಾನ ಮೂಲಕವಲ್ಲದೆ ಇಸ್ಲಾಮೀ ರಾಷ್ಟ್ರದಲ್ಲಿ ವಾಸವಾಗಿರುವ ಮುಸ್ಲಿಮೇತರ ನಾಗರಿಕರಿಂದಲೂ ಜಿಝಿಯಾ ಪಡೆಯಲಾಗುವುದಿಲ್ಲ.

ಭಾರತದಲ್ಲಿಯೂ ಸರ್ವೋಚ್ಚ ಸಂಸ್ಕೃತಿಯ ವಿಕಾಸವಾಗಿತ್ತು. ಆದರೆ ಸಂಸ್ಕೃತಿಯು ಪರಾಕಾಷ್ಠೆಗೆ ತಲಪುವುದರಿಂದಲೇ ಎಲ್ಲವೂ ಆಗುವುದಿಲ್ಲ. ಅನೈತಿಕತೆ, ರಾಜಕೀಯ ಕಲಹ, ಕೆಳ ಜಾತಿಯವರ ನಿಂದನೆ ಚರಮಸೀಮೆಗೆ ತಲಪಿತ್ತು. ಧರ್ಮದಲ್ಲಿ ಭ್ರಷ್ಟಾಚಾರ ವ್ಯಾಪಿಸಿತ್ತು. ಬೌದ್ಧ ಮಠಗಳು ಅತ್ಯಾಚಾರ, ವ್ಯಭಿಚಾರ ಮತ್ತು ಮಂತ್ರ, ಮಾಟಗಾರಿಕೆಯ ಕೇಂದ್ರವಾಗಿ ಮಾರ್ಪಟ್ಟಿತ್ತು. ಹಿಂದೂ ಧರ್ಮದ ಅವಸ್ಥೆಯೂ ಅದಕ್ಕಿಂತ ಭಿನ್ನವಾಗಿರಲಿಲ್ಲ. ಅವರು ತಮ್ಮ ಪ್ರಾಚೀನ ಧರ್ಮದ ಆದರ್ಶಗಳಿಂದ ವಿಮುಖರಾಗಿದ್ದರು. ಮಾತ್ರವಲ್ಲ ಅವರು ಸಂಕುಚಿತ ಮತ್ತು ಸಂಕೀರ್ಣ ಮನೋಭಾವದವರಾಗಿದ್ದರು. ಗೀತೆಯ ಮಾತಿನಲ್ಲಿ ಹೇಳುವುದಾದರೆ, ಧರ್ಮವು ಗ್ಲಾನಿಯಾಗುತ್ತಿತ್ತು. ಈ ಅವಸ್ಥೆಯನ್ನು ದೇವನಿಂದ ಸಹಿಸುವುದು ಸಾಧ್ಯವಿರಲಿಲ್ಲ.

ಅಂತಹ ನೈಸರ್ಗಿಕ ಹಾಗೂ ಇತರ ರಾಜಕೀಯ ಕಾರಣಗಳಿಂದಾಗಿ ಭಾರತದಲ್ಲಿ ಇಸ್ಲಾಮ್ ಕ್ರಿ.ಶ. 712ರಲ್ಲಿ ಸಿಂಧ್ ಮೂಲಕ ಪ್ರಥಮವಾಗಿ ಪ್ರವೇಶಿಸಿತು. ಮುಸ್ಲಿಮರು ಸಿಂಧನ್ನು ಸುಲಭ ಅಥವಾ ಕಷ್ಟದಿಂದ ಜಯಿಸಿ ಅಲ್ಲಿ ತಮ್ಮ ಕಾನೂನನ್ನು ಜಾರಿಗೊಳಿಸಿದರು. ಅದೇ ವೇಳೆ ಹಿಂದೂಗಳೊಂದಿಗೆ ಉದಾರವಾಗಿ ವರ್ತಿಸಿದರು. ಇದರಿಂದ ಆಡಳಿತವೂ ಅವರ ಕೈ ಸೇರಿತು. ಇದು ಒಂದು ರೀತಿಯಲ್ಲಿ ಸ್ವಂತ ಸುಧಾರಣೆಗಾಗಿ ಮುಸ್ಲಿಮರು ಹಿಂದೂಗಳಿಗೆ ನೀಡಿದ ಎಚ್ಚರಿಕೆಯಾಗಿತ್ತು. ಆದರೂ ಹಿಂದೂಗಳು ವಿನಾಶದ ಹಾದಿಯಲ್ಲಿ ಸಾಗಿದರೇ ಹೊರತು ಸುಧಾರಣೆಯಾಗಲಿಲ್ಲ. ದೇವನು ಅವರಿಗೆ ಮುನ್ನೂರು ವರ್ಷಗಳ ಕಾಲಾವಕಾಶ ನೀಡಿದರೂ ಅವರು ಸುಧಾರಿಸಿಕೊಳ್ಳಲಿಲ್ಲ. ಅಪಾರ ಹಣವು ದೇವನ ಹೆಸರಲ್ಲಿ ಮಂದಿರಗಳಲ್ಲಿ ಸಂಗ್ರಹವಾಗಿತ್ತು. ಧರ್ಮದ ಪಾಳೆಯಗಾರರು ಧರ್ಮದ ಹೆಸರಲ್ಲಿಯೇ ಮಂದಿರಗಳಲ್ಲಿ ದೇವದಾಸಿಯರ ನೃತ್ಯಗಳಿಗೆ ಧಾರ್ಮಿಕ ಆಚಾರದ ಮಾನ್ಯತೆ ನೀಡಿದರು. ತತ್ಪರಿಣಾಮವಾಗಿ ದೇವ ಪ್ರಕೋಪದ ರೂಪದಲ್ಲಿ ಮಹ್ಮೂದ್ ಘಝ್ನವಿಯು ಭಾರತವನ್ನು ಆಕ್ರಮಿಸಿದನು. ಅವನು ಹದಿನೇಳು ಬಾರಿ ಭಾರತಕ್ಕೆ ಆಗಮಿಸಿ ಗಾಢ ನಿದ್ದೆಯಲ್ಲಿದ್ದ ಹಿಂದೂಗಳನ್ನು ಬಡಿದೆಬ್ಬಿಸಿ ಮರಳಿದ್ದನು. ಹಾಗಿದ್ದರೂ ಹಿಂದೂಗಳು ಸ್ವಲ್ಪವೂ ಎಚ್ಚರಗೊಳ್ಳಲಿಲ್ಲ. ದೇವನು ಪುನಃ ಅವರಿಗೆ 150 ವರ್ಷಗಳ ಕಾಲಾವಕಾಶ ನೀಡಿದನು. ಆಗಲೂ ಹಿಂದೂಗಳು ಎಚ್ಚರಗೊಳ್ಳದಿದ್ದಾಗ ದೈವಿಕ ಪ್ರೇರಣೆಯಂತೆ ಮುಹಮ್ಮದ್ ಘೋರಿ ಅವರ ಆಡಳಿತವನ್ನೇ ಕೊನೆಗೊಳಿಸಿದನು.[1]

[1]ದೇವನು ತನ್ನ ಭೂಮಿಯಲ್ಲಿ ಅತ್ಯಾಚಾರ, ಅಕ್ರಮ, ಶೋಷಣೆ ಅಥವಾ ವ್ಯಭಿಚಾರವನ್ನು ಸುದೀರ್ಘಕಾಲ ನಡೆಯಲು ಬಿಡುವುದಿಲ್ಲ. ಸುಧಾರಣೆಯ ಕಾಲಾವಕಾಶವನ್ನು ಖಂಡಿತವಾಗಿಯೂ ನೀಡುತ್ತಾನೆ. ಕೆಲವೊಮ್ಮೆ ಹಲವು ಶತಮಾನಗಳೇ ಕಳೆಯಬಹುದು. ಆದರೆ ಅನಂತರ ಅಂತಹ ಧಿಕ್ಕಾರಿ ಮತ್ತು ದುಷ್ಟ ಸಮುದಾಯವನ್ನು ಸೋಲಿಸಿ ಯಾವುದಾದರೂ ಉತ್ತಮ ಹಾಗೂ ದಕ್ಷ ಮಾನವ ಸಮುದಾಯದ ಆಡಳಿತವನ್ನು ಅವರ ಮೇಲೆ ಸ್ಥಾಪಿಸುತ್ತಾನೆ. ಈ ದೇವ ನಿಯಮವನ್ನು "Check and Balance" ತಡೆ ಮತ್ತು ಸಂತುಲನೆಯ ನಿಯಮವೆಂದೂ ಕರೆಯಲಾಗುತ್ತದೆ. ಆದ್ದರಿಂದ ಬಾಹ್ಯ ಆಕ್ರಮಣಗಳನ್ನು ಕೇವಲ ರಾಜಕೀಯ ಮತ್ತು ಲೌಕಿಕ ದೃಷ್ಟಿಕೋನದ ಹೊರತಾಗಿ ಪ್ರಸ್ತುತ ದೃಷ್ಟಿಕೋನದಿಂದಲೂ ನೋಡಬೇಕು.

ಹಲವು ಶತಮಾನಗಳ ತನಕ ಭಾರತದಲ್ಲಿ ಮುಸ್ಲಿಮರ ಆಧಿಪತ್ಯವಿತ್ತು. ಅವರು ಭಾರತವನ್ನು ತಮ್ಮ ದೇಶವೆಂದೇ ಅಂಗೀಕರಿಸಿ ಇಲ್ಲಿ ನೆಲೆಸಿದರು. ಅವರು ಇಲ್ಲಿಯೇ ಹುಟ್ಟುತ್ತಿದ್ದಾರೆ, ಬದುಕುತ್ತಿದ್ದಾರೆ ಮತ್ತು ಸಾಯುತ್ತಿದ್ದಾರೆ. ಜಗತ್ತು ಅವರನ್ನು ಭಾರತೀಯರೆಂದೇ ಪರಿಗಣಿಸುತ್ತದೆ.

ಮುಸ್ಲಿಮರ ಅಸ್ತಿತ್ವವು ಭಾರತಕ್ಕೆ ವರದಾನವಾಗಿದೆಯೆಂದೂ ಸಾಬೀತುಗೊಂಡಿದೆ. ಮುಸ್ಲಿಮ್ ಸಾಮ್ರಾಜ್ಯಗಳು, ಉತ್ತರ ಭಾರತ ಮತ್ತು ದಕ್ಷಿಣ ಭಾರತಗಳನ್ನು ಜೋಡಿಸಿದ ಕೀರ್ತಿಗೆ ಪಾತ್ರವಾಗಿದೆ. ಮುಸ್ಲಿಮರ ಸಮಾನತಾವಾದವು ಹಿಂದುಗಳನ್ನೂ ಪ್ರಭಾವಿತಗೊಳಿಸಿದೆ. ರಾಮಾನುಜ, ರಮಾನಂದ, ನಾನಕ್, ಚೈತನ್ಯರೇ ಮುಂತಾದ ಹೆಚ್ಚಿನ ಹಿಂದೂ ಸುಧಾರಕರು ಮುಸ್ಲಿಮ್ ಭಾರತದ ಕೊಡುಗೆಯಾಗಿದ್ದಾರೆ. ಭಕ್ತಿ ಚಳವಳಿಯು ಕಠೋರತೆಯನ್ನು ಬಹಳಷ್ಟು ನಿಯಂತ್ರಿಸಿತು. ಏಕದೇವ ಮತ್ತು ಸಮತಾವಾದಿಯಾಗಿರುವ ಸಿಕ್ಖ್ ಧರ್ಮ ಮತ್ತು ಆರ್ಯ ಸಮಾಜಗಳು ಇಸ್ಲಾಮಿೂ ಪ್ರಭಾವದ ಪರಿಣಾಮವಾಗಿದೆ. ಅನಿವಾರ್ಯ ಪರಿಸ್ಥಿತಿಗಳಲ್ಲಿ ವಿವಾಹ ವಿಚ್ಛೇದನ ಮತ್ತು ಪತ್ನಿ ಪುತ್ರಿಯರಿಗೆ ಸಂಪತ್ತಿನಲ್ಲಿ ಹಕ್ಕುಗಳಂತಹ ಸಮಾನತೆ ಹಾಗೂ ಸಾಮಾಜಿಕ ಸುಧಾರಣೆಗೆ ಸಂಬಂಧಿಸಿದ ಹೆಚ್ಚಿನ ಸರಕಾರಿ ಕಾನೂನುಗಳಿಗೆ ಇಸ್ಲಾಮ್ ಪ್ರೇರಣೆಯಾಗಿದೆ.

ಬಹುಪತ್ನಿತ್ವ

ಬಹುಪತ್ನಿತ್ವ ಸಂಪ್ರದಾಯವನ್ನು ಎತ್ತಿ ತೋರಿಸಿ ಪ್ರವಾದಿ ಮತ್ತು ಇಸ್ಲಾಮಿನ ಮೇಲೆ ಆರೋಪ ಹೊರಿಸಲಾಗುತ್ತಿದೆ. ಆದರೆ ಅದು ತೀರಾ ಬಾಲಿಶವಾಗಿದೆ. ಬಹುಪತ್ನಿತ್ವದ ವ್ಯವಸ್ಥೆಯು ಮುಹಮ್ಮದ್‌ರಿಗಿಂತ(ಸ) ಮುಂಚಿನ ಪ್ರವಾದಿಗಳಲ್ಲಿಯೂ ಕಂಡುಬರುತ್ತದೆ. ಆದರೆ ನಾವು ಇಲ್ಲಿ ಅದನ್ನು ಉಲ್ಲೇಖಿಸದೆ ಹಿಂದೂ ಮಹಾ ಪುರುಷರ ಉದಾಹರಣೆಯನ್ನೇ ಪ್ರಸ್ತುತಪಡಿಸುತ್ತೇವೆ.

ಹಿಂದೂಗಳ ಅವತಾರಗಳಲ್ಲಿ ಕೃಷ್ಣನನ್ನು ಪೂರ್ಣಾವತಾರವೆಂದು ನಂಬಲಾಗುತ್ತಿದೆ. ಅವನಿಗೆ ಎಂಟು ಪಟ್ಟದರಸಿಯರು ಹಾಗೂ ಇತರ 1600 ರಾಣಿಯರಿದ್ದರು. ಅದಲ್ಲದೆ ಅವನಿಗೆ ಅನೇಕ ಗೋಪಿಕಾ ಸ್ತ್ರೀಯರು ಹಾಗೂ ರಾಧೆಯೊಂದಿಗೂ ಗಾಢ ಸಂಬಂಧವಿತ್ತೆಂದು ನಂಬಲಾಗಿದೆ. ಅವನನ್ನು ಯೋಗಿ ರಾಜನೆಂದೂ ಅಂಗೀಕರಿಸಲಾಗಿದೆ. ಅವನ ಈ ಬಹುಪತ್ನಿತ್ವವನ್ನು ಆಧ್ಯಾತ್ಮಿಕವಾಗಿಯೂ ವ್ಯಾಖ್ಯಾನಿಸಲಾಗುತ್ತಿದೆ. ಅವನ ಜೀವನವು ನೀರಿನ ಕಮಲದಂತೆ ನಿರ್ಮಲವಾಗಿತ್ತು. ಅರ್ಥಾತ್, ಪ್ರತ್ಯಕ್ಷದಲ್ಲಿ ಬಹುಪತ್ನಿಯರಿದ್ದರೂ ಆತನು ಅವರಿಂದ ವಿರಕ್ತನಾಗಿದ್ದನು. ರಾಮನು ಒಂದೇ ಪತ್ನಿಯನ್ನು ಹೊಂದಿದ್ದರೂ ಅವನ ತಂದೆ ದಶರಥನು ಬಹುಪತ್ನಿಯರನ್ನು ಹೊಂದಿದ್ದನು. ಮಹಾಭಾರತದ ನಾಯಕನಾದ ಅರ್ಜುನನ ತಂದೆಗೂ ಅನೇಕ ಪತ್ನಿಯರಿದ್ದರು.

ಇಸ್ಲಾಮಿನ ಪ್ರವಾದಿ ಮುಹಮ್ಮದ್‌ರ ಬಗ್ಗೆ ಆಲೋಚಿಸುವುದಾದರೆ ಅವರು ತಮ್ಮ 25ನೆಯ ವಯಸ್ಸಿನಲ್ಲಿ, 40 ವರ್ಷದ ವಿಧವೆಯಾಗಿದ್ದ ಖದೀಜಾರನ್ನು ವಿವಾಹವಾಗಿದ್ದರು.

ತರುವಾಯ ಇಳಿವಯಸ್ಸಿನ ತನಕ ಇತರ ಪತ್ನಿಯರನ್ನು ಹೊಂದಿರಲಿಲ್ಲ. ಲೈಂಗಿಕಾಸಕ್ತಿಯು ಹೆಚ್ಚಿನಂಶ ಕೊನೆಗೊಂಡಿರುವ ಸ್ಥಿತಿಯಲ್ಲಿ ನಡೆದಿರುವ ಅವರ ಇತರ ವಿವಾಹಗಳ ಕಾರಣವು, ಅವರು ವಿವಾಹವಾಗಿದ್ದ ಆ ಸ್ತ್ರೀಯರಿಗೆ ಒಂದೋ ಸಂರಕ್ಷಣೆಯ ಅಗತ್ಯವಿತ್ತು ಅಥವಾ ಅವರ ಮೂಲಕ ಇಸ್ಲಾಮಿನ ಬೇಡಿಕೆಯನ್ನು ಈಡೇರಿಸಬೇಕಾಗಿತ್ತೆಂಬುದೇ ಆಗಿದೆ. ಈ ಸಂಬಂಧದ ಹಲವಾರು ಸಾಕ್ಷಿಗಳಲ್ಲಿ, ಅವರ ಪತ್ನಿ ಆಯಿಶಾರಿಗೆ ಪತಿಯು ತನ್ನ ಕೊಠಡಿಯಲ್ಲಿಲ್ಲವೆಂಬ ಸಂದೇಹವುಂಟಾಗಿ ಬೇರೆ ಪತ್ನಿಯರ ಬಳಿಗೆ ಹೋಗಿರಬಹುದೆಂದು ಶಂಕಿಸಿದಾಗ, ನೆಲದಲ್ಲಿ ಸಾಷ್ಟಾಂಗವೆರಗಿ ದೇವೋಪಾಸನೆಯಲ್ಲಿ ತಲ್ಲೀನರಾಗಿದ್ದ ಪ್ರವಾದಿಯವರನ್ನು ನೋಡಿದ ಘಟನೆಯೂ ಸೇರಿದೆ.[1]

---

[1] ಶ್ರೀ ರಾಜೇಂದ್ರಜೀಯವರು ಪ್ರವಾದಿವರ್ಯರ(ಸ) ಬಹುಪತ್ನಿತ್ವದ ಅಗತ್ಯವನ್ನು ವಿಶ್ಲೇಷಿಧ್ದಾರೆ. ಹಾಗಿದ್ದರೂ ಇದು ಪ್ರವಾದಿಯವರಿಗೆ ಸಂಬಂಧಿಸಿದ ವಿಶಿಷ್ಟ ವಿಷಯವಾಗಿರುವುದರಿಂದ ಅದನ್ನು ನಾವು ಇಲ್ಲಿ ಇನ್ನಷ್ಟು ಸ್ಪಷ್ಟೀಕರಿಸ ಬಯಸುತ್ತೇವೆ. ಶ್ರೀ ರಾಮಚಂದ್ರಜೀಯವರು ತಿಳಿಸಿರುವಂತೆ ಸ್ತ್ರೀಯರ ಸಂರಕ್ಷಣೆ ಹಾಗೂ ಇಸ್ಲಾಮಿನ ಧ್ಯೇಯ ಸಾಧನೆಯೂ ಪ್ರವಾದಿಯವರ ಬಹುಪತ್ನಿತ್ವಕ್ಕೆ ಕಾರಣವಾಗಿತ್ತು. ಅದರ ವಿವರಣೆ ಹೀಗಿದೆ:

i) ಪ್ರವಾದಿಯವರ ಸಮಾಜ ಮತ್ತು ದೇಶವು ಧಾರ್ಮಿಕ, ನೈತಿಕ ಮತ್ತು ರಾಜಕೀಯ ದೃಷ್ಟಿಯಿಂದ ಬಹಳಷ್ಟು ಅಧಃಪತನಗೊಂಡಿತ್ತು. ಅದನ್ನು ಸಮಗ್ರ ಕ್ರಾಂತಿಯಿಂದ ಮಾದರಿ ಸಮಾಜ ಮತ್ತು ದೇಶವಾಗಿ ರೂಪಿಸಿರುವುದೇ ಮಹಾ ಸಾಧನೆಯಾಗಿದೆ. ಇಡೀ ದೇಶವೇ ಪ್ರವಾದಿವರ್ಯರನ್ನು ವಿರೋಧಿಸುವಂತಹ ಪರಿಸ್ಥಿತಿಯಿತ್ತು. ಆ ಸಂದರ್ಭದಲ್ಲಿ ಸಂಗಡಿಗರು ಮತ್ತು ಸಹಾಯಕರೊಂದಿಗಿನ ಸಂಬಂಧವನ್ನು ಬಲಪಡಿಸುವುದು ಅತ್ಯವಶ್ಯಕವಾಗಿತ್ತು. ಹಾಗೆಯೇ ವೈರಿಗಳನ್ನು ಒಂದು ವೇಳೆ ಮಿತ್ರರನ್ನಾಗಿ ಮಾಡಲು ಸಾಧ್ಯವಾಗದಿದ್ದರೂ, ನೆಂಟಸ್ತಿಕೆಯ ಮೂಲಕ ಅವರ ವೈರತ್ವವನ್ನು ಕಡಿಮೆಗೊಳಿಸಬಹುದಾಗಿತ್ತು.

ii) ಪ್ರವಾದಿವರ್ಯರ ಪತ್ನಿಯರಾದ ಆಯಿಶಾ ಮತ್ತು ಹಫ್ಸಾರವರು ಪ್ರವಾದಿಯ ಆಪ್ತಮಿತ್ರರು ಮತ್ತು ಅನುಯಾಯಿಗಳಾಗಿದ್ದ ಹ. ಅಬೂಬಕರ್(ರ) ಮತ್ತು ಹ. ಉಮರ್‌ರ(ರ) ಪುತ್ರಿಯರಾಗಿದ್ದರು. ಝೈನಬ್‌ರು ಪ್ರವಾದಿವರ್ಯರ ಸೋದರತ್ತೆಯ ಮಗಳಾಗಿದ್ದರು. ಅವರ ವಿವಾಹವನ್ನು ಪ್ರವಾದಿಯವರು ತಮ್ಮ ಗುಲಾಮನಾಗಿದ್ದ ಹ. ಝೈದ್‌ರೊಂದಿಗೆ ನೆರವೇರಿಸಿದರು. ಅವರ ನಡುವೆ ಹೊಂದಾಣಿಕೆಯಾಗದೆ ಝೈದ್‌ರು, ಝೈನಬ್‌ರಿಗೆ ತಲಾಕ್ ನೀಡಿದರು. ವಿಚ್ಛೇದಿತ ಝೈನಬ್‌ರು ಕುಲೀನ ಮನೆತನದ ಮಹಿಳೆಯಾಗಿದ್ದರು. ಪ್ರವಾದಿಯವರೊಂದಿಗೆ ವಿವಾಹವಾಗುವುದ ರಿಂದ ಮಾತ್ರ ಅವರ ಪ್ರತಿಷ್ಠೆ ಉಳಿಯುತ್ತಿತ್ತು. ಜುವೈರಿಯಾ ಮತ್ತು ಸಫಿಯ್ಯಾ ಶ್ರೀಮಂತ ಮನೆತನದ ಪುತ್ರಿಯರಾಗಿದ್ದರು. ಯಹೂದಿಗಳು ಪ್ರವಾದಿಯವರ ಮಹಾ ವೈರಿಗಳಾಗಿದ್ದರು. ಆದ್ದರಿಂದ ಆ ಮೂವರು ಮಹಿಳೆಯರ ಪ್ರತಿಷ್ಠೆಯನ್ನು ಕಾಪಾಡುವುದು ಮತ್ತು ಯಹೂದಿಯರ ವೈರತ್ವವನ್ನು ಕಡಿಮೆಗೊಳಿಸುವುದಕ್ಕಾಗಿ ಈ ಮಹಿಳೆಯರೊಂದಿಗಿನ ವಿವಾಹವು ಪ್ರವಾದಿಯವರಿಗೆ ಅಗತ್ಯವಾಗಿತ್ತು. ಉಮ್ಮು ಹಬೀಬರು ಮಕ್ಕಾದ ಪ್ರಮುಖ ಸರದಾರ ಹಾಗೂ ಪ್ರವಾದಿಯವರ ಕಡುವೈರಿಯಾಗಿದ್ದ ಅಬೂ ಸುಫ್ಯಾನ್‌ರ ಪುತ್ರಿಯಾಗಿದ್ದರು. ಅವರ ವಿವಾಹದಿಂದಾಗಿ ಅಬೂ

ಜನಸಾಮಾನ್ಯರ ಬಹುಪತ್ನಿತ್ವ

ಇಸ್ಲಾಮ್, ಮುಸ್ಲಿಮ್ ಜನಸಾಮಾನ್ಯರಿಗೆ ನಾಲ್ಕು ವಿವಾಹವಾಗುವ ಅನುಮತಿ ನೀಡಿರುವುದನ್ನು ಆಕ್ಷೇಪಿಸುವವರಿಗೆ ಅದರ ವಾಸ್ತವಿಕತೆ ತಿಳಿದಿಲ್ಲ. ಮೊದಲನೆಯದಾಗಿ, ನಾಲ್ವರು ಪತ್ನಿಯರನ್ನು ವಿವಾಹವಾಗಬಹುದೆಂಬುದು ಕೇವಲ ಅನುಮತಿಯಾಗಿದೆಯೇ ವಿನಾ ಅದೊಂದು ಆಜ್ಞೆಯಲ್ಲ. ಎರಡನೆಯದಾಗಿ ನಾಲ್ವರು ಪತ್ನಿಯರ ಅನುಮತಿಯನ್ನು ಯಾವ ಪರಿಸ್ಥಿತಿ ಮತ್ತು ಉದ್ದೇಶದಿಂದ ನೀಡಲಾಗಿದೆಯೆಂಬುದನ್ನೂ ಅರಿತಿರಬೇಕು. ಇಸ್ಲಾಮಿನ ಆಗಮನಕ್ಕಿಂತ ಮುಂಚೆ ಅರಬರು ಹತ್ತಿಪ್ಪತ್ತು ಪತ್ನಿಯರನ್ನು ವಿವಾಹವಾಗುತ್ತಿದ್ದರು. ಆದರೆ ಅವರ ದೈನಂದಿನ ಆವಶ್ಯಕತೆಗಳನ್ನು ಪೂರೈಸುತ್ತಿರಲಿಲ್ಲ. ಅವರನ್ನು ಹಿಂಸಿಸಿ ಪೀಡಿಸುತ್ತಿದ್ದರು. ಪತ್ನಿಯರ ಮಧ್ಯೆ ನ್ಯಾಯೋಚಿತವಾಗಿ ವರ್ತಿಸುತ್ತಿರಲಿಲ್ಲ. ಈ ದುರಾಚಾರಗಳ ನಿವಾರಣೆಗಾಗಿ ನಾಲ್ವರಿಗಿಂತ ಹೆಚ್ಚು ಪತ್ನಿಯರನ್ನು ಹೊಂದಿರುವುದಕ್ಕೆ ನಿಷೇಧ ಹೇರಲಾಯಿತು. ನಾಲ್ವರು ಪತ್ನಿಯರನ್ನು ಹೊಂದುವುದಕ್ಕೆ ಅವರೊಂದಿಗೆ ಸಮಾನ ಮತ್ತು ನ್ಯಾಯದಿಂದ ವರ್ತಿಸಬೇಕೆಂಬ ಶರತ್ತನ್ನು ವಿಧಿಸಲಾಯಿತು.

ಸುಫ್ಯಾನ್‌ರ ವೈರ ಕಡಿಮೆಯಾಯಿತು. ಹಾಗೆಯೇ ಉಮ್ಮು ಸಲಮರು ಮಕ್ಕಾದ ಸರದಾರ ಮತ್ತು ಪ್ರವಾದಿವರ್ಯರ ಕಡು ವೈರಿಯಾಗಿದ್ದ ಅಬೂಜಹಲನ ಪುತ್ರಿಯಾಗಿದ್ದರು.

iii) ಪ್ರವಾದಿವರ್ಯರಿಗೆ ದೇವನು ವಹಿಸಿಕೊಟ್ಟಿದ್ದ ಧಾರ್ಮಿಕ, ನೈತಿಕ ಮತ್ತು ಸಾಂಸ್ಕೃತಿಕ ಕ್ರಾಂತಿಗೆ ಕೇವಲ ಪುರುಷರ ಶಿಕ್ಷಣ ತರಬೇತಿಗಳು ಮಾತ್ರ ಪರ್ಯಾಪ್ತವಾಗಿರಲಿಲ್ಲ. ಸ್ತ್ರೀಯರಿಗೂ ಅವುಗಳ ಆವಶ್ಯಕತೆಯಿತ್ತು. ಇಸ್ಲಾಮೀ ಶಿಷ್ಟಾಚಾರದಂತೆ ಸ್ತ್ರೀ-ಪುರುಷರ ಪರಸ್ಪರ ಸ್ವಚ್ಛಂದ ಮಿಲನವು ನಿಷಿದ್ಧವಾಗಿದೆ. ಆದ್ದರಿಂದ ಪ್ರವಾದಿಯವರು ಸ್ತ್ರೀಯರಿಗೆ ನೇರವಾಗಿ ಶಿಕ್ಷಣ ನೀಡುವಂತಿರಲಿಲ್ಲ. ಅದಲ್ಲದೆ ಪುರುಷರಲ್ಲಿ ನೇರವಾಗಿ ಹೇಳಲಾಗದಂತಹ ಮಹಿಳೆಯರಿಗೆ ಸಂಬಂಧಿಸಿದ ಅನೇಕ ವಿಷಯಗಳಿರುತ್ತವೆ. ಈ ಬೇಡಿಕೆಯನ್ನು ಪೂರೈಸುವ ನಿಟ್ಟಿನಲ್ಲಿ ಪ್ರವಾದಿವರ್ಯರು(ಸ) ವಿಭಿನ್ನ ವಯಸ್ಸಿನ ಯೋಗ್ಯ ಮಹಿಳೆಯರನ್ನು ವಿವಾಹವಾದರು. ಅವರಿಗೆ ಮಹಿಳೆಯರ ವಿಷಯಗಳಲ್ಲಿ ಸೂಕ್ತ ಶಿಕ್ಷಣ ತರಬೇತಿಗಳನ್ನು ನೀಡಿ ಅವರ ಮೂಲಕ ಸ್ತ್ರೀಯರಿಗೆ ಮಾರ್ಗದರ್ಶನ ನೀಡಿದರು.

ಪ್ರವಾದಿವರ್ಯರ ಪತ್ನಿಯರಲ್ಲಿ ಹ. ಆಯಿಶಾ ಮತ್ತು ಹ. ಉಮ್ಮು ಸಲಮ ಮಹಾ ವಿದ್ವಾಂಸೆಯರಾಗಿದ್ದರು. ಪ್ರವಾದಿವರ್ಯರ ವಚನಗಳನ್ನು "ಹದೀಸ್" ಎಂದು ಕರೆಯಲಾಗುತ್ತದೆ. ಹದೀಸ್ ಗ್ರಂಥಗಳಲ್ಲಿ ಅವರ ಪತ್ನಿಯರು ವರದಿ ಮಾಡಿದ ವಚನಗಳೂ ಇವೆ. ಇದು ಕೂಡಾ ಪ್ರವಾದಿವರ್ಯರ ಬಹುಪತ್ನಿತ್ವದ ಉದ್ದೇಶವಾಗಿತ್ತು. 25 ವರ್ಷಗಳ ಕಾಲ ತಮಗಿಂತ ಹಿರಿಯರಾಗಿದ್ದ ಹ. ಖದೀಜಾರೊಂದಿಗೆ ಜೀವನ ನಡೆಸಿರುವುದೇ ಪ್ರವಾದಿವರ್ಯರಿಗಿದ್ದ(ಸ) ಆತ್ಮ ನಿಗ್ರಹ ಶಕ್ತಿಯನ್ನು ಸೂಚಿಸುತ್ತದೆ. ಹ. ಖದೀಜಾರ ವಿಯೋಗದ ಬಳಿಕ ಅವರು ಹ. ಸೌದಾರನ್ನು ವಿವಾಹವಾದರು. ಅವರೂ ವೃದ್ಧೆ ಹಾಗೂ ವಿಧವೆಯಾಗಿದ್ದರು. ಅವರ ಜತೆಯಲ್ಲಿ 4 ವರ್ಷ ಸಹಬಾಳ್ವೆ ನಡೆಸಿದರು. ಅವರ ಇತರ ವಿವಾಹಗಳು 53ನೇ ವಯಸ್ಸಿನಲ್ಲಿ ಅಂದರೆ ಲೈಂಗಿಕಾಸಕ್ತಿ ದುರ್ಬಲವಾಗಿರುವ ಕಾಲದಲ್ಲಿ ನಡೆದಿತ್ತು. ಅದೇ ವೇಳೆ ಈ ಎಲ್ಲ ಪತ್ನಿಯರಿದ್ದರೂ ರಾತ್ರಿ ವೇಳೆ ಅವರು ಕಾಲು ಬಾತು ಹೋಗುವಷ್ಟರ ಮಟ್ಟಿಗೆ ನಮಾಝ್‌ನಲ್ಲಿ ತಲ್ಲೀನರಾಗಿರುತ್ತಿದ್ದರು.

ಬಹುಪತ್ನಿತ್ವವು ಸರ್ವ ಸಾಮಾನ್ಯವಾಗಿದ್ದ ಸಮಾಜಕ್ಕೆ ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ವಿವಾಹವಾಗಬಾರದೆಂದು ಆಜ್ಞಾಪಿಸಿದ್ದರೆ ಅವರು ಒಂದು ವೇಳೆ ಓರ್ವ ಪತ್ನಿಗಿಂತ ಹೆಚ್ಚು ವಿವಾಹವಾಗದಿದ್ದರೂ ಕದ್ದು ಮುಚ್ಚಿ ಆ ಆಜ್ಞೆಯನ್ನು ಖಂಡಿತವಾಗಿಯೂ ಉಲ್ಲಂಘಿಸುತ್ತಿದ್ದ ರೆಂಬುದನ್ನು ಇಲ್ಲಿ ಜ್ಞಾಪಿಸಬೇಕಾಗಿದೆ. ಆ ಮೂಲಕ ಸಚ್ಚರಿತ ಸಮಾಜವು ರೂಪುಗೊಳ್ಳುತ್ತಿ ರಲಿಲ್ಲ. ಇಸ್ಲಾಮಿನ ನಿರ್ದಿಷ್ಟ ಧ್ಯೇಯವು ದೂಷಣೆಗೆ ಗುರಿಯಾಗುತ್ತಿತ್ತು. ಒಂದಕ್ಕಿಂತ ಹೆಚ್ಚು ಪತ್ನಿಯರ ಅಗತ್ಯವು ಅಂದಿನ ಅರಬ್ ಸಮುದಾಯಕ್ಕೆ ಮಾತ್ರ ಸೀಮಿತವಾಗಿದ್ದುದಲ್ಲ. ಅದು ಈಗಲೂ ಇದೆ. ಹಾಗೆಯೇ ವಿವಿಧ ದೇಶಗಳ ಸಮಾಜಗಳಿಗೂ ಇರಬಹುದು. ವೈಯಕ್ತಿಕವಾಗಿ ನಮ್ಮ ಸಮಾಜಕ್ಕೂ ಅದರ ಅಗತ್ಯವಿದೆ. ಆದ್ದರಿಂದ, ಸಮಾಜವನ್ನು ಪರಿಶುದ್ಧವಾಗಿರಿಸುವ ನಿಟ್ಟಿನಲ್ಲಿ ಇಸ್ಲಾಮಿನ ಬಹುಪತ್ನಿತ್ವದ ನಿಯಮವು ಅತ್ಯಂತ ದೂರದರ್ಶಿಯಾಗಿದೆಯೆಂದು ವಿವೇಕವಂತರೆಲ್ಲರೂ ಒಪ್ಪಬಹುದು.[1]

ಈ ವಿಶ್ಲೇಷಣೆಯಿಂದ ನಾಲ್ವರು ಪತ್ನಿಯರ ಅನುಮತಿಯಿಂದ, ಹತ್ತಿಪ್ಪತ್ತು ಪತ್ನಿಯರನ್ನಿರಿಸುವ ಕ್ರಮವು ನಿಷೇಧಿಸಲ್ಪಟ್ಟಿತೆಂದು ಸ್ಪಷ್ಟವಾಗುತ್ತದೆ. ಇನ್ನೊಂದೆಡೆಯಲ್ಲಿ ಸಮಾಜಕ್ಕೆ ಕಳಂಕವಾಗಿದ್ದ ವ್ಯಭಿಚಾರ, ವೇಶ್ಯಾವೃತ್ತಿ ಹಾಗೂ ಇರಿಸಿಕೊಳ್ಳುವ ಪದ್ಧತಿಯ ಬಾಗಿಲು ಸಹಾ ಮುಚ್ಚಲ್ಪಟ್ಟಿತು. ನಾಲ್ವರನ್ನು ವಿವಾಹವಾಗುವ ಅನುಮತಿಗೆ, ಎಲ್ಲ ಪತ್ನಿಯ ರೊಂದಿಗೆ ಸಮಾನತೆ ಮತ್ತು ನ್ಯಾಯಪಾಲನೆಯ ಶರತ್ತನ್ನು ಹೇರಿ ಒಂದು ರೀತಿಯಲ್ಲಿ ಬೇಜವಾಬ್ದಾರಿ ವಿವಾಹಗಳನ್ನು ನಿಯಂತ್ರಿಸಲಾಯಿತು. ಈ ನಿಯಂತ್ರಣದಿಂದಾಗಿ ನಾಲ್ಕು ವಿವಾಹವಾಗುವುದೂ ಕಡಿಮೆಯಾಯಿತು.

ಈ ಧಾರ್ಮಿಕ ನಿಯಮವನ್ನು ಅಂದಿನ ಧರ್ಮನಿಷ್ಠ ಸಮಾಜವು ಪ್ರಾಮಾಣಿಕವಾಗಿ ಪಾಲಿಸುತ್ತಿತ್ತೆಂಬುದನ್ನೂ ಇಲ್ಲಿ ಜ್ಞಾಪಿಸಬೇಕು. ಆದರೆ ಇಂದು ಏಕಪತ್ನಿತ್ವದ ಸಮರ್ಥಕರು ಹಾಗೂ ಒಂದಕ್ಕಿಂತ ಅಧಿಕ ವಿವಾಹವನ್ನು ವಿರೋಧಿಸುವ ಜನರ ಆಚರಣೆ ಹೇಗಿದೆ? ಅವರ ಸಮಾಜದ ಅವಸ್ಥೆ ಏನಾಗಿದೆ? ಇಸ್ಲಾಮಿನ ಬಹುಪತ್ನಿತ್ವ ನಿಯಮದ ವಿರುದ್ಧ ಅತ್ಯಧಿಕ ಅಪಪ್ರಚಾರವನ್ನು ಯುರೋಪು ಮತ್ತು ಅಮೇರಿಕಾದ ಕ್ರೈಸ್ತರು ನಡೆಸಿದ್ದಾರೆ. ಆ ದೇಶಗಳಲ್ಲಿ ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ಹೊಂದುವುದನ್ನು ನಿಷೇಧಿಸಲಾಗಿದೆ. ಹಾಗಿದ್ದರೂ ವ್ಯಭಿಚಾರದ ಮೂಲಕ ಅದರ ಬಾಗಿಲು ನಾಲ್ಕು ದಿಕ್ಕುಗಳಿಗೂ ತೆರೆದುಕೊಂಡಿದೆ. ಇರಿಸಿಕೊಂಡವಳು, ಸೊಸೈಟಿ ಗರ್ಲ್, ಕಾಲ್ ಗರ್ಲ್, ವೇಶ್ಯೆಯರು ಮತ್ತು ನೈಟ್‌ಕ್ಲಬ್‌ಗಳಿವೆ. ಜನಸಾಮಾನ್ಯರು ಮತ್ತು ಗಣ್ಯರೆಂಬ ಭೇದವಿಲ್ಲದೆ ವ್ಯಭಿಚಾರವು ವ್ಯಾಪಕವಾಗಿದೆ. ಅದರಲ್ಲಿ ಪಾರ್ಲಿಮೆಂಟ್ ಸದಸ್ಯರು, ಸಚಿವರು ಮತ್ತು ಪಾದ್ರಿಗಳೂ ಸೇರಿದ್ದಾರೆ. ಈ ವಿಷಯದಲ್ಲಿ ಸ್ತ್ರೀಯರ ಸ್ಥಿತಿಯೂ

[1]ವೇಶ್ಯಾವೃತ್ತಿ, ದೇಹಮಾರಾಟ, ಅನೈತಿಕ ಅಥವಾ ಅಕ್ರಮ ಲೈಂಗಿಕ ಸಂಬಂಧ, ಅಧಿಕೃತ ವೇಶ್ಯಾವಾಟಿಕೆ, ಕಾಲ್‌ಗರ್ಲ್-ಇತ್ಯಾದಿಗಳು ಹಾಗೂ ಅವುಗಳಿಂದಾಗುತ್ತಿರುವ ಅಸಂಖ್ಯಾತ ಅನೈತಿಕ ಸಾಮಾಜಿಕ ಅಪರಾಧಗಳು, ಕೆಡುಕುಗಳು ಮತ್ತು ಸಮಸ್ಯೆಗಳಿಗೆ ಬಹುಪತ್ನಿತ್ವವನ್ನು ಕೈ ಬಿಟ್ಟಿರುವುದೇ ಕಾರಣವಾಗಿದೆ. ಇಸ್ಲಾಮ್ ಧರ್ಮವು ಬಹುಪತ್ನಿತ್ವವನ್ನು ಅನುಮತಿಸುವ ಮೂಲಕ ಅಂತಹ ಎಲ್ಲ ಕೆಡುಕುಗಳಿಂದ ಮುಸ್ಲಿಮ್ ಸ್ತ್ರೀ-ಪುರುಷರನ್ನೂ ಕುಟುಂಬ ಮತ್ತು ಸಮಾಜವನ್ನೂ ರಕ್ಷಿಸಿದೆ.

ಪುರುಷರಿಗಿಂತ ಭಿನ್ನವಾಗಿಲ್ಲ. ಸ್ತ್ರೀಯರಲ್ಲಿ ವ್ಯಭಿಚಾರಿಣಿಯರಿಲ್ಲದ ಯಾವ ವರ್ಗವೂ ಇಲ್ಲ. ವ್ಯಭಿಚಾರವು ಸಾರ್ವತ್ರಿಕವಾಗಿರುವ ಇಂತಹ ಕಡೆಗಳಲ್ಲಿ ಒಂದಕ್ಕಿಂತ ಹೆಚ್ಚು ಪತ್ನಿಯರ ಅಗತ್ಯವೇನಿದೆ? ಒಬ್ಬಳಿಗಿಂತ ಹೆಚ್ಚು ಪತ್ನಿಯರ ತಾಪತ್ರಯವನ್ನು ಯಾಕೆ ಹೊರಬೇಕು? ಈಗ ಅಲ್ಲಿ ಸ್ತ್ರೀ-ಪುರುಷರು ಪರಸ್ಪರ ವಿವಾಹವಾಗದೆಯೇ ಲೈಂಗಿಕ ಸುಖ ಅನುಭವಿಸುವಂತಹ ವರ್ಗವೇ ಹುಟ್ಟಿಕೊಂಡಿದೆ.

ನಾವು ನಮ್ಮ ದೇಶದ ಮೇಲೆಯೂ ಒಮ್ಮೆ ದೃಷ್ಟಿ ಹಾಯಿಸಬೇಕು. ನಮ್ಮ ದೇಶವೂ ಈ ಎಲ್ಲ ಕೆಡುಕುಗಳಿಂದ ಸಂಪೂರ್ಣ ಮುಕ್ತವಾಗಿಲ್ಲ. ಧರ್ಮದ ಪ್ರಭಾವವು ಕುಸಿದು ಕಾನೂನು ಬದ್ಧ ನಿಯಮಗಳೂ ದುರ್ಬಲಗೊಂಡಿವೆ.[1]

ಹಿಂದೂಗಳು ದೇವನ ಬಗ್ಗೆ ಆಲೋಚಿಸುವುದಾದರೆ, ಪೂರ್ಣಾವತಾರವಾಗಿರುವ ಶ್ರೀಕೃಷ್ಣನೇ ಬಹುಪತ್ನಿಯರನ್ನು ಹೊಂದಿದ್ದನು. ಹಿಂದೂಗಳ ಪೌರಾಣಿಕ ಮತ್ತು ಐತಿಹಾಸಿಕ ಮಹಾಪುರುಷರೂ ಬಹುಪತ್ನಿಯರನ್ನು ಹೊಂದಿದ್ದರು. ಹಿಂದೂ ಧರ್ಮದಲ್ಲಿ ಬಹುಪತ್ನಿತ್ವ ದೊಂದಿಗೆ ಬಹುಪತಿತ್ವದ ಉಲ್ಲೇಖವೂ ಇವೆ. ಪಾಂಡವರ ಪತ್ನಿ ದ್ರೌಪದಿಯು ಬಹುಪತಿಯರನ್ನು ಹೊಂದಿದ್ದಳು.

---

[1] ಇಸ್ಲಾಮ್, ಪ್ರತಿಯೊಂದು ಮೌಲ್ಯಗಳಲ್ಲಿಯೂ ಸಮಾಜವನ್ನು ಶುದ್ಧವಾಗಿರಿಸ ಬಯಸುತ್ತದೆ. ಎಲ್ಲ ಕರ್ಮಗಳ ಪೈಕಿ ವ್ಯಭಿಚಾರವು ಅತ್ಯಂತ ಹೇಯ ಕರ್ಮವಾಗಿದೆ. ಇಸ್ಲಾಮ್ ಒಂದಕ್ಕಿಂತ ಹೆಚ್ಚು ಪತ್ನಿಯರನ್ನು ವಿವಾಹವಾಗುವ ಅನುಮತಿ ನೀಡಿ ವ್ಯಭಿಚಾರವನ್ನು ಮಹಾಪಾಪ ಮತ್ತು ನೈತಿಕ ಹಾಗೂ ಸಾಮಾಜಿಕ ಅಪರಾಧವೆಂದು ಘೋಷಿಸಿತು. ಅದಕ್ಕೆ ಕಠೋರ ಶಿಕ್ಷೆಯನ್ನೂ ನಿರ್ಧರಿಸಿತು. ಅವಿವಾಹಿತ ಸ್ತ್ರೀ ಮತ್ತು ಪುರುಷರಿಗೆ ನೂರು ಕೊರಡೆಯೇಟು ಶಿಕ್ಷೆ ಮತ್ತು ವಿವಾಹಿತ ವ್ಯಭಿಚಾರಿಗಳಿಗೆ ಕಲ್ಲೆಸೆದು ಕೊಲ್ಲುವ ಶಿಕ್ಷೆಯನ್ನು ಆದೇಶಿಸಲಾಗಿದೆ. ಯುರೋಪಿನ ತಥಾಕಥಿತ ಸಜ್ಜನರು ಮತ್ತು ಮಾನವ ಪ್ರೇಮಿಗಳು ಈ ಶಿಕ್ಷೆಯನ್ನು ಕಠೋರ ಮಾತ್ರವಲ್ಲ, ರಾಕ್ಷಸೀಯವೆಂದೂ ಹೇಳುತ್ತಾರೆ. ಅವರು ವ್ಯಭಿಚಾರವನ್ನು ನಿಷಿದ್ಧ ಕರ್ಮವೆಂದು ಒಪ್ಪದಿರುವುದೇ ಅದಕ್ಕೆ ಕಾರಣವಾಗಿದೆ. ವ್ಯಭಿಚಾರವು ಐರೋಪ್ಯನರ ಜೀವನದ ಒಂದು ಅವಿಭಾಜ್ಯ ಅಂಗವೆನಿಸಿದೆ. ಸುಮಾರು ಮೂರುವರೆ ವರ್ಷಗಳ ಹಿಂದಿನ ಮಾತು. ಡಬ್ಲಿನ್ ಯುನಿವರ್ಸಿಟಿಯ ಓರ್ವ ಪ್ರೊಫೆಸರ್‌ರ ಅಧ್ಯಕ್ಷತೆಯಲ್ಲಿ ಯುರೋಪಿನ ವಿಶ್ವವಿಖ್ಯಾತ ಕಾನೂನು ತಜ್ಞರ ಒಂದು ತಂಡವು ಇಸ್ಲಾಮೀ ಕಾನೂನುಗಳು ವಿಶೇಷತಃ ಅದರ ಶಿಕ್ಷಾ ವಿಧಾನಗಳ ಅಧ್ಯಯನ ಮತ್ತು ಆ ಕುರಿತು ವಿಚಾರವಿನಿಮಯಕ್ಕಾಗಿ ಸೌದಿ ಅರೇಬಿಯಾಕ್ಕೆ ಬಂದಿತ್ತು. ಅವರು ಅಲ್ಲಿನ ಅಪರಾಧ ಪತ್ತೆ ವಿಭಾಗವನ್ನು ಸಂದರ್ಶಿಸಿದಾಗ, ಆ ದೇಶದಲ್ಲಿ ಅಪರಾಧಗಳ ಸ್ಥಿತಿಗತಿಗಳ ಅವಲೋಕನಕ್ಕೆ ಸಂಪೂರ್ಣ ಅನುಮತಿ ನೀಡಲಾಗಿತ್ತು. ಅವರು ಅಲ್ಲಿನ ಅಂಕಿಅಂಶಗಳನ್ನು ತಿಳಿದು ಆಶ್ಚರ್ಯ ಚಕಿತರಾದರು. ಯುರೋಪಿನ ನಗರಗಳ ಜನಸಂಖ್ಯೆಗೆ ಸಮವಾದ ಜನಸಂಖ್ಯೆಯಿರುವ ಅರೇಬಿಯಾದ ನಗರಗಳಲ್ಲಿ ಅಪರಾಧಗಳ ಸಂಖ್ಯೆ 1000ಕ್ಕೆ 1 ಆಗಿತ್ತು. ಅಂದರೆ ಯುರೋಪಿನಲ್ಲಿ 1000 ಅಪರಾಧಗಳು ನಡೆಯುವಾಗ ಅರೇಬಿಯಾದಲ್ಲಿ ಕೇವಲ ಒಂದು ಅಪರಾಧ ನಡೆಯುತ್ತಿತ್ತು.

ಆ ತಂಡದ ದೃಷ್ಟಿಯಲ್ಲಿ ವ್ಯಭಿಚಾರಕ್ಕೆ ಕಲ್ಲೆಸೆದು ಕೊಲ್ಲುವ ಮತ್ತು ಕಳ್ಳತನಕ್ಕೆ ಕೈಕತ್ತರಿಸುವ ಶಿಕ್ಷೆಯು ಅಮಾನುಷವಾಗಿತ್ತು. ಯಾವನಾದರೂ ಸಾಮಾನ್ಯ ಅರಬ್ ವ್ಯಕ್ತಿಯ ಹಸ್ತಗಳಲ್ಲಿ ಒಂದು ಕೋಟಿ ಡಾಲರ್‌ಗಳನ್ನು ಕೊಟ್ಟು ಕಳುಹಿಸಿದರೂ ಅದು ಸುರಕ್ಷಿತವಾಗಿ ನಿರ್ದಿಷ್ಟ ಸ್ಥಳಕ್ಕೆ ತಲಪುವುದೆಂದು

ಇಸ್ಲಾಮಿನ ಬಹುಪತ್ನಿತ್ವ ಪದ್ಧತಿಯು, ಮುಸ್ಲಿಮೇತರರ ನಿಷಿದ್ಧ ವೇಶ್ಯಾವೃತ್ತಿ ಮತ್ತು ಇರಿಸಿಕೊಳ್ಳುವ ಪದ್ಧತಿಯಿಂದ ಸಮಾಜ, ಮಹಿಳಾ ವರ್ಗ, ವೇಶ್ಯೆಯರು ಮತ್ತು ಇರಿಸಿಕೊಳ್ಳುವುದರಿಂದ ಹುಟ್ಟುವ ನಿಷ್ಪಾಪಿ ಸಂತಾನಗಳ ಮಟ್ಟಿಗೆ ಬಹಳಷ್ಟು ಉತ್ತಮ ಮತ್ತು ಗೌರವಾರ್ಹವಾಗಿದೆಯೆಂದು ಯಾವನೇ ನಿಷ್ಪಕ್ಷಮತಿಗೆ ಮನವರಿಕೆಯಾಗದಿರಲಾರದು.

ಇಸ್ಲಾಮಿನ ಪರ್ದಾಪದ್ಧತಿ

ಇಸ್ಲಾಮ್ ಪ್ರತಿಪಾದಿಸುವ ಪರ್ದಾಪದ್ಧತಿಯು ಸ್ತ್ರೀಪುರುಷರಲ್ಲಿ ಪಕ್ಷಪಾತ ಮತ್ತು ಮಹಿಳೆಯರ ಆರೋಗ್ಯ ಹಾಗೂ ಪ್ರಗತಿಗೆ ಪ್ರತಿಕೂಲವಲ್ಲವೇ ಎಂದು ಪ್ರಶ್ನಿಸಲಾಗುತ್ತಿದೆ.

ಆ ತಂಡಕ್ಕೆ ತಿಳಿಸಲಾಯಿತು. ಆಗ ಯುರೋಪಿನಲ್ಲಿ ಪ್ರತಿದಿನ ಡಕಾಯಿತಿ ಮತ್ತು ಅನೇಕ ಕೊಲೆಗಳು ನಡೆಯುತ್ತಿದ್ದುವು. ಇಸ್ಲಾಮೀ ವ್ಯವಸ್ಥೆಯ ಪ್ರಭಾವವನ್ನು ಮನಗಂಡ ಆ ತಂಡದ ಸದಸ್ಯರಿಗೆ ತಮ್ಮ ತಪ್ಪು ತಿಳುವಳಿಕೆಯ ಬಗ್ಗೆ ನಾಚಿಕೆಯಾಯಿತು. ಅವರು ತಮ್ಮ ದೇಶಕ್ಕೆ ಹಿಂತಿರುಗಿದ ಬಳಿಕ ಕರೆದ ಪತ್ರಿಕಾಗೋಷ್ಠಿಯಲ್ಲಿ, "ಅಪರಾಧಗಳ ನಿಯಂತ್ರಣಕ್ಕೆ ಇಸ್ಲಾಮೀ ವ್ಯವಸ್ಥೆಯು ಅತಿ ಸಮರ್ಥವಾಗಿದ್ದು ಮುಸ್ಲಿಮರು ಆ ಬಗ್ಗೆ ಹೆಮ್ಮೆ ಪಡಬಹುದೆಂದು" ಹೇಳಿದರು.

ಕೊನೆಯದಾಗಿ, ಹಿಂದೂ ಧರ್ಮದಲ್ಲಿ ವ್ಯಭಿಚಾರದ ಬಗ್ಗೆ ಯಾವ ನಿಯಮಗಳಿವೆಯೆಂದು ನೋಡೋಣ. ಮನುಸ್ಮೃತಿಯ ಕೆಲವು ನಿಯಮಗಳು ಹೀಗಿವೆ: "ಅಬ್ರಾಹ್ಮಣನು ಬ್ರಾಹ್ಮಣ ಸ್ತ್ರೀಯನ್ನು ಹೀಗೆ ಸಂಗ್ರಹಣದ ಮೂಲಕ ಭೋಗಿಸಿದರೆ ಅವನು ಮರಣದಂಡನೆಗೆ ಅರ್ಹನಾಗುತ್ತಾನೆ. ನಾಲ್ಕೂ ವರ್ಣದವರು ತಮ್ಮ ತಮ್ಮ ಹೆಂಡಂದಿರನ್ನು ಸದಾಕಾಲಕ್ಕೂ ರಕ್ಷಿಸಿಕೊಂಡಿರತಕ್ಕದು." (ಮನುಸ್ಮೃತಿ, 8:359)

"ಬೇರೆಯವರ ಹೆಂಡಂದಿರನ್ನು[ಪರಸ್ತ್ರೀಯರನ್ನು] ಕೆಡಿಸುವ ಅಥವಾ ಕೆಡಿಸಲಿಚ್ಛಿಸುವಂಥವರ ಅಂಗಾಂಗಗಳನ್ನು ಕತ್ತರಿಸಿ ಹಾಕಿಸಿ ಅವರನ್ನು ದೇಶಬಿಟ್ಟು ಓಡಿಸಬೇಕು." (ಮನುಸ್ಮೃತಿ, 8:352)

"ಅವಳ ಗಂಡನು ಅಥವಾ ರಕ್ಷಕನು ನಿಷೇಧಿಸಿದರೆ ಅಂಥ ಪರಸ್ತ್ರೀಯೊಡನೆ ಮಾತಾಡಬಾರದು. ನಿಷೇಧವಿದ್ದಾಗಲೂ ಮಾತನಾಡಿದರೆ ಹಾಗೆ ಮಾತನಾಡಿದವನಿಗೆ ಒಂದು ಸುವರ್ಣದ ದಂಡವು ವಿಧಿಸಲ್ಪಡಬೇಕು. ನಟರು ಅಥವಾ ಗಾಯಕರ ಹೆಂಡಂದಿರ ವಿಷಯದಲ್ಲಿ ಈ ತರಹ ಪರಸತಿಯ ರೊಡನೆ ಮಾತನಾಡುವುದನ್ನು ನಿಷೇಧಿಸಲಾಗದು. ಏಕೆಂದರೆ ಪರಪುರುಷ ಸಂಪರ್ಕಕ್ಕೆ ತಮ್ಮ ಹೆಂಡಂದಿರನ್ನು ಪ್ರೇರೇಪಿಸಿ ಅವರೇ ಸಜ್ಜುಗೊಳಿಸುತ್ತಾರೆ." (ಮನುಸ್ಮೃತಿ, 8:361,362)

"ಸಂಭೋಗವನ್ನು ಒಲ್ಲೆ ಎಂದ ಕನ್ಯೆಯನ್ನು ಅವಳ ಇಚ್ಛೆಗೆ ವಿರುದ್ಧವಾಗಿ ಭೋಗಿಸಿ ಕೆಡಿಸಿದರೆ ಅವನನ್ನು ಅಂಗಚ್ಛೇದ, ಲಿಂಗಚ್ಛೇದ ಮುಂತಾದ ಶಿಕ್ಷೆಗೆ ಒಳಪಡಿಸಬೇಕು. ಸಂಭೋಗವನ್ನು ಬಯಸಿದಂತಹ ಕನ್ಯೆಯ ಜತೆಗೆ ಕೂಡಿದರೆ ಹಿಂಸೆ-ಹೊಡೆತ ಇತ್ಯಾದಿ ಶಿಕ್ಷೆ ವಿಧಿಸಬಾರದು." (ಮನುಸ್ಮೃತಿ, 8:364)

"ತನಗಿಂತ ಮೇಲುಜಾತಿಯವನೊಡನೆ ಸಂಭೋಗ ಬಯಸಿ ಕೂಡಿಕೊಂಡ ಕನ್ಯೆಗೆ ದಂಡ ಹಾಕಬಾರದು. ತನಗಿಂತ ಕೀಳುಜಾತಿಯವನೊಡನೆ ಸಂಭೋಗ ಬಯಸಿದ ಕನ್ಯೆಯನ್ನು ಮನೆಯಲ್ಲಿಯೇ ಗೃಹಬಂಧನದಲ್ಲಿರಿಸಬೇಕು." (ಮನುಸ್ಮೃತಿ, 8:365)

"ಉತ್ತಮ ಜಾತಿ ಕನ್ಯೆಯನ್ನು ಭೋಗಿಸಿದ ಹೀನಜಾತಿಯವನು ವಧೆಗೆ ಅರ್ಹನಾಗುತ್ತಾನೆ. ತನ್ನದೇ ಜಾತಿಯ ಹೆಣ್ಣನ್ನು ಭೋಗಿಸಿದ ವಿಷಯವು ಅವಳ ತಂದೆಗೆ ಗೊತ್ತಾದರೆ ಕನ್ಯಾಶುಲ್ಕವನ್ನು ದಂಡವಾಗಿ ತೆತ್ತು ಅವಳನ್ನು ಮದುವೆ ಮಾಡಿಕೊಳ್ಳಬೇಕು." (ಮನುಸ್ಮೃತಿ, 8:366)

ಇಸ್ಲಾಮಿನ ಪರ್ದಾ ಪದ್ಧತಿಯು ಅತ್ಯಂತ ಸೂಕ್ತ ಮತ್ತು ಆವಶ್ಯಕವಾಗಿದೆಯೆನ್ನುವುದೇ ಅದಕ್ಕೆ ನಮ್ಮ ಉತ್ತರವಾಗಿದೆ.

ಇಸ್ಲಾಮಿನಲ್ಲಿ ಪುರುಷ ಮತ್ತು ಸ್ತ್ರೀ ಸಮಾನತೆಯ ಬಗ್ಗೆ ಹೇಳುವುದಿದ್ದರೆ, ಅದು ಮೊತ್ತಮೊದಲಾಗಿ ಸ್ತ್ರೀ ಕುಲಕ್ಕೆ ಆರ್ಥಿಕ ಹಕ್ಕು ನೀಡಿರುವ ಧರ್ಮವಾಗಿದೆ. ಅನಿವಾರ್ಯ ಪರಿಸ್ಥಿತಿಗಳಲ್ಲಿ ಸ್ತ್ರೀಯರಿಗೆ ಖುಲಾದ(ಪತಿತ್ಯಾಗ) ಹಕ್ಕನ್ನೂ ನೀಡಿತು. ಹಾಗೆಯೇ ಎಲ್ಲ ಪರಿಸ್ಥಿತಿಗಳಲ್ಲಿಯೂ ಮಹರ್ ಪಡೆಯುವ ಹಕ್ಕನ್ನು ನಿರ್ಣಯಿಸಿತು. ತದ್ವಿರುದ್ಧವಾಗಿ ಹಿಂದೂಗಳಲ್ಲಿ ವಿಧವೆಯರನ್ನು ಜೀವಂತವಾಗಿ ಸುಡಲಾಗುತ್ತಿತ್ತು. ಅವರಿಗೆ ಸ್ವತಂತ್ರ ಅಸ್ತಿತ್ವವೇ ಇರಲಿಲ್ಲವೆನ್ನಬೇಕಾಗಿದೆ. ಇಸ್ಲಾಮಿನಲ್ಲಿ, ಪತಿಯು ಮೃತನಾದ 4 ತಿಂಗಳು 10ದಿನಗಳ ಬಳಿಕ ವಿವಾಹವಾಗುವ ಮತ್ತು ನೆಮ್ಮದಿಯಿಂದ ಬಾಳುವ ಹಕ್ಕನ್ನು ಇಸ್ಲಾಮ್ ವಿಧವೆಯರಿಗೆ ನೀಡಿತು.[1] ಹಿಂದೂ ಧರ್ಮದಲ್ಲಿ ವಿಧವೆಯರಿಗೆ ಎರಡನೆಯ ವಿವಾಹವಾಗುವ ಮತ್ತು ನೆಮ್ಮದಿಯಿಂದ ಬಾಳುವ ಹಕ್ಕಿರಲಿಲ್ಲ. ಅವಳು ತನ್ನ ಕುಟುಂಬದಲ್ಲಿಯೇ ತಿರಸ್ಕೃತಳು ಮತ್ತು ಅಪಮಾನಿತಳಾಗಿರಬೇಕಾಗಿತ್ತು. ಕ್ರೈಸ್ತ ರಾಷ್ಟ್ರಗಳಲ್ಲಿ ಮಹಿಳೆಯರಿಗೆ ಸಂಪತ್ತಿನ ಹಕ್ಕನ್ನು ಈಗಲೂ ಸಂಪೂರ್ಣವಾಗಿ ನೀಡಲಾಗಿಲ್ಲ. ಹಿಂದೆ ಯುರೋಪಿನ ವಿದ್ವಾಂಸರ ಮಧ್ಯೆ, ಸ್ತ್ರೀಯರಿಗೆ ಆತ್ಮವಿದೆಯೋ ಇಲ್ಲವೋ ಎಂಬ ಬಗ್ಗೆಯೂ ಚರ್ಚೆ ನಡೆಯುತ್ತಿತ್ತು.

ಪರ್ದಾವು ಸ್ತ್ರೀಯರ ಆರೋಗ್ಯ ಹಾಗೂ ಪ್ರಗತಿಗೆ ಪ್ರತಿಕೂಲವಾಗುವುದಾದರೂ ಹೇಗೆ? ಆರೋಗ್ಯಕ್ಕಾಗಿ ಸ್ತ್ರೀಯರು ತೆರೆದು ಕೊಂಡು ನಡೆದಾಡಬೇಕಾಗಿರುವುದು ಅನಿವಾರ್ಯವೇ? ಸ್ತ್ರೀಯರಿಗೆ ಕೇವಲ ಅನ್ಯ ಪುರುಷರ ಮುಂದೆ ಪರ್ದಾದ ಆಜ್ಞೆಯಿದೆ. ಆಕೆಯು ಪತಿಯ ಜತೆಗೂಡಿ ಬುರ್ಖಾಧರಿಸಿ ವಿಹಾರ ನಡೆಸಬಹುದು. ಇದಕ್ಕೆ ಯಾವ ನಿಷೇಧವನ್ನೂ ಹೇರಲಾಗಿಲ್ಲ.

ಮುಸ್ಲಿಮ್ ಸ್ತ್ರೀಯರು ಆರೋಗ್ಯವಂತರಲ್ಲದಿದ್ದರೆ ಅವರು ಆರೋಗ್ಯವಂತ ಮಕ್ಕಳಿಗೆ ಜನ್ಮ ನೀಡುವುದು ಹೇಗೆ? ಮುಸ್ಲಿಮರು ಆರೋಗ್ಯವಂತರಾಗಿರುವುದು ಹೇಗೆ? ಮುಸ್ಲಿಮರ ಕ್ಷಿಪ್ರ ದಿಗ್ವಿಜಯಕ್ಕೆ ಜಗತ್ತೇ ಚಕಿತಗೊಂಡಿತ್ತು. ಈ ಮುಸ್ಲಿಮರು ಆ ತಾಯಂದಿರ ಸಂತಾನವಾಗಿರಲಿಲ್ಲವೇ? ಅವರ ಕಾಲದಲ್ಲಿ ಕಟ್ಟುನಿಟ್ಟಿನಿಂದ ಪರ್ದಾ ಆಚರಿಸಲಾಗುತ್ತಿತ್ತು.

ಸ್ತ್ರೀಯ ಸ್ವಾಸ್ಥ್ಯ, ಪ್ರಗತಿ, ಸಮಾನತೆ ಇತ್ಯಾದಿಗಳೆಲ್ಲವೂ ಐರೋಪ್ಯರು ಹುಟ್ಟು ಹಾಕಿರುವ ಪ್ರಶ್ನೆಗಳಾಗಿವೆ. ಅವರು ಸ್ತ್ರೀಯರನ್ನು ಕಾಮುಲಾಲಸೆಯ ವಸ್ತುವಾಗಿ ಮಾರ್ಪಡಿಸಿದ್ದಾರೆ. ಎಲ್ಲ ಧರ್ಮ ಮತ್ತು ಪ್ರಾಚೀನ ಸಂಸ್ಕೃತಿಗಳಲ್ಲಿ ಸಂಪಾದನೆಯು ಪುರುಷರ ಕರ್ತವ್ಯವಾಗಿತ್ತು. ಮನೆಯು ಸ್ತ್ರೀಯರ ಕ್ಷೇತ್ರವಾಗಿತ್ತು. ಹಾಗಾದರೆ ಹಿಂದೂ ಧರ್ಮ ಮತ್ತು ಅದರ ಸಂಸ್ಕೃತಿಯಲ್ಲಿ ಸಂಪಾದಿಸುವ ಹೊಣೆಯನ್ನು ಸ್ತ್ರೀಯರ ಮೇಲೆ ಯಾವಾಗ

---

[1]ಗರ್ಭವತಿಯಾಗಿರುವ ಪ್ರಾರಂಭ ಹಂತದಲ್ಲಿಯೇ ವಿಧವೆ(ವಿವಾಹ ವಿಚ್ಛೇದಿತೆ)ಯಾಗಿದ್ದರೆ, ಆಕೆಯು ಗರ್ಭವತಿಯೆಂದು ಸ್ಪಷ್ಟವಾಗಲಿಕ್ಕಾಗಿ 4 ತಿಂಗಳು ಮತ್ತು 10 ದಿನಗಳ ತಡೆಯನ್ನು ವಿಧಿಸಲಾಗಿದೆ. ಹೊಸ ವಿವಾಹದಿಂದಾಗುವ ಯಾವ ದಾಂಪತ್ಯ ಸಂಬಂಧಕ್ಕೆ ಪೂರ್ವಪತಿಯ ಸಂತಾನದಿಂದ ಉದ್ಭವಿಸಬಹುದಾದ ಜಟಿಲ ಸಮಸ್ಯೆಗಳಿಂದ ಹಾನಿಯಾಗಬಾರದೆಂಬುದೇ ಅದರ ಉದ್ದೇಶವಾಗಿದೆ.

ಹೊರಿಸಲಾಯಿತು? ಪುರುಷ ಮತ್ತು ಸ್ತ್ರೀ ಸಮಾನತೆ ಹಾಗೂ ಸಮಾನ ಹಕ್ಕುಗಳ ಸಮಸ್ಯೆಯ ಬಗ್ಗೆ ಹೇಳುವುದಿದ್ದರೆ ಸ್ತ್ರೀಯರ ಹಕ್ಕುಗಳಿಗಾಗಿ ವಾದಿಸುವವರು ಪ್ರಥಮವಾಗಿ ದೇವನೊಡನೆ ಸ್ತ್ರೀಪುರುಷರನ್ನು ಸಮಾನಗೊಳಿಸ ಬೇಕೆಂದು ಪ್ರಾರ್ಥಿಸಬೇಕು. ಪುರುಷರೂ ಸಂತಾನಗಳಿಗೆ ಜನ್ಮ ನೀಡಲಿ. ಆ ಕಷ್ಟವನ್ನು ಕೇವಲ ಸ್ತ್ರೀಯರು ಮಾತ್ರ ಹೊರುವುದೇಕೆ? ದೇಹಶಾಸ್ತ್ರ ಮತ್ತು ಮನೋಶಾಸ್ತ್ರ ಪ್ರಕಾರ ಸ್ತ್ರೀಯರ ದೇಹ ಮತ್ತು ಮನಸ್ಸು ಕೋಮಲವಾಗಿರುತ್ತದೆ. ಅವರ ಸಂರಕ್ಷಣೆಗೆ ಪರ್ದಾ ಅತ್ಯುಪಯುಕ್ತವಾಗಿದೆ. ಅದು ಅವರನ್ನು ಕೆಟ್ಟ ನೋಟದಿಂದ ರಕ್ಷಿಸುತ್ತದೆ. ಕೆಟ್ಟ ನೋಟವು ಹಲವೊಮ್ಮೆ ಅಪಹರಣ, ಬಲಾತ್ಕಾರಗಳಂತಹ ಭೀಕರ ಪರಿಣಾಮಗಳಿಗೂ ಕಾರಣವಾಗುತ್ತದೆ. ಏನಿದ್ದರೂ ಪಥ್ಯವನ್ನು ನಿರ್ಲಕ್ಷಿಸಿ ರೋಗಿಯಾಗುವುದು ಬುದ್ಧಿವಂತಿಕೆಯಲ್ಲ.[1]

ಗೋವಧೆಯ ಸಮಸ್ಯೆ

ಇಸ್ಲಾಮ್ ಧರ್ಮವು ಹಂದಿ ಮಾಂಸವನ್ನು ನಿಷೇಧಿಸಿದೆ. ಆದರೆ ಗೋಮಾಂಸವನ್ನು ನಿಷೇಧಿಸಿಲ್ಲ. ಇದು ಸರಿಯೇ ಎಂದು ಪ್ರಶ್ನಿಸಲಾಗುತ್ತದೆ. ಆದರೆ ಈ ಪ್ರಶ್ನೆಯು ವಿವೇಕ ಪೂರ್ಣವಲ್ಲ. ಹಂದಿ ಮತ್ತು ಗೋವಿನ ವ್ಯತ್ಯಾಸವನ್ನು ಜನಸಾಮಾನ್ಯನೂ ತಿಳಿದಿದ್ದಾನೆ. ಹಂದಿ

---

[1] ಸ್ತ್ರೀತನ ಮತ್ತು ಪಾತಿವ್ರತ್ಯಕ್ಕೆ ಯಾವುದೇ ಬೆಲೆನೀಡದ ಸ್ತ್ರೀ ಸಂರಕ್ಷಕರು ಸ್ತ್ರೀಯರ ಪರ್ದಾದ ಬಗ್ಗೆ ಈ ರೀತಿ ಆಕ್ಷೇಪಿಸುವುದು ಸಹಜವಾಗಿದೆ. ಅವರು ಸ್ತ್ರೀಯರನ್ನು ಕೇವಲ ಪುರುಷರ ಕಾಮ ಪಿಪಾಸೆಯನ್ನು ಪೂರೈಸುವ ವಸ್ತುವಾಗಿ ಮಾತ್ರ ತಿಳಿದಿದ್ದಾರೆ. ಅಂತಹ ಮಹಾನುಭಾವರಿಗೆ ಪರ್ದಾ ನಿಯಮದ ಸಾರ್ಥಕತೆ ಹೇಗೆ ತಿಳಿದೀತು?

ಮಹಿಳೆಗೆ ಪುರುಷನಲ್ಲಿ ಮತ್ತು ಪುರುಷನಿಗೆ ಮಹಿಳೆಯಲ್ಲಿರುವ ಆಕರ್ಷಣೆಯು ನೈಸರ್ಗಿಕ ವಾಗಿದೆ. ಆದ್ದರಿಂದ ಪುರುಷನನ್ನು ನೋಡಿ ಮಹಿಳೆಯೂ ಮಹಿಳೆಯನ್ನು ನೋಡಿ ಪುರುಷನೂ ಸಹಜವಾಗಿ ಆಕರ್ಷಿತರಾಗುತ್ತಾರೆ.

ಸ್ತ್ರೀಯರ ಪರ್ದಾರಾಹಿತ್ಯವೇ ವ್ಯಭಿಚಾರದ ಹೆಬ್ಬಾಗಿಲಾಗಿದೆ. ಇಸ್ಲಾಮ್ ಅದನ್ನು ಪರ್ದಾದಿಂದ ಮುಚ್ಚುತ್ತದೆ. ಪಾತಿವ್ರತ್ಯವು ಸ್ತ್ರೀಯರ ಅಮೂಲ್ಯ ಸಂಪತ್ತಾಗಿದೆ. ಇಸ್ಲಾಮ್ ಅದರ ಸಂರಕ್ಷಕವಾಗಿದೆ. ಪರ್ದಾ ವಿರೋಧಿಗಳು ಅದರ ದರೋಡೆಕೋರರಾಗಿದ್ದಾರೆ. ಪರ್ದಾ ಸಂಪ್ರದಾಯವು ಭಾರತಕ್ಕೂ ಅಪರಿಚಿತವಾಗಿಲ್ಲ. ಮುಸ್ಲಿಮರು ಭಾರತಕ್ಕೆ ಆಗಮಿಸಿದಾಗ ಹಿಂದೂಗಳು ಪರ್ದಾಧಾರಿಗಳಾದ ಮುಸ್ಲಿಮ್ ಮಹಿಳೆಯರನ್ನು ನೋಡಿ ಅದರ ಉಪಯುಕ್ತತೆಯನ್ನು ಮನಗಂಡರು. ಹಿಂದೂಗಳಲ್ಲಿಯೂ ಅದು ರೂಢಿಯಾಯಿತು. ಆದರೆ ಇಂದು ಹಿಂದೂಗಳಲ್ಲಿ ಪರ್ದಾಧಾರಣೆಯು ಮುಸ್ಲಿಮರ ಅನುಕರಣೆ ಮತ್ತು ತಮ್ಮ ಪ್ರಾಚೀನ ಸಂಸ್ಕೃತಿಗೆ ವಿರುದ್ಧವೆಂಬ ಭಾವನೆಯಿದೆ. ಆದ್ದರಿಂದ ಪರ್ದಾವನ್ನು ತೊರೆಯಲಾಗಿದೆ. ಯುವತಿಯರು ತಮ್ಮ ಮೇಲು ವಸ್ತ್ರವನ್ನೇ ತ್ಯಜಿಸಿದ್ದಾರೆ. ಯುವತಿಯರು ಕೈಯಿಲ್ಲದ ದೇಹದ ಹೆಚ್ಚಿನ ಭಾಗ ತೆರೆದಿರುವಂತಹ ಗಿಡ್ಡ ರವಿಕೆಗಳನ್ನು ಧರಿಸುತ್ತಾರೆ. ಸೀರೆಯೂ ಸೇರಿದಂತೆ ಬಿಗಿಯಾದ ಉಡುಪು ಧರಿಸಿ ದೇಹದ ಪ್ರತಿಯೊಂದು ಉಬ್ಬುತಗ್ಗುಗಳು ಎದ್ದು ತೋರುತ್ತದೆ. ಇದರಿಂದಾಗಿಯೇ ನಾವು ವಾರ್ತಾಪತ್ರಿಕೆಗಳಲ್ಲಿ ಯುವತಿಯರ ಅತ್ಯಾಚಾರ ಮತ್ತು ಅಪಹರಣಗಳ ಸುದ್ದಿಯನ್ನು ದಿನನಿತ್ಯ ಓದುತ್ತೇವೆ. ಇದೇ ಸ್ಥಿತಿ ಮುಂದುವರಿದರೆ, ಮಾನವನು ಪ್ರಾಣಿ ಸಮಾನವಾಗಿರುವಂತಹ ಯುರೋಪು ಮತ್ತು ಅಮೇರಿಕಾಗಳ ಸ್ಥಿತಿಗೆ ಭಾರತವೂ ತಲಪಬಹುದು.

ಅದೆಂತಹ ಕೊಳಕು ಪ್ರಾಣಿ? ಗೋವುಗಳನ್ನು ಹಿಂದೂ ಮುಸ್ಲಿಮರೆಲ್ಲರೂ ಸಾಕುತ್ತಾರೆ. ಆದರೆ ಹಂದಿಯನ್ನು ಕೆಲವು ಜಾತಿಯವರು ಮಾತ್ರ ಸಾಕುತ್ತಾರೆ. ಇಸ್ಲಾಮ್, ಹಂದಿ ಮಾಂಸಕ್ಕೆ ನಿಷೇಧ ಹೇರಿರುವುದು ತರ್ಕ ಬದ್ಧವಾಗಿದೆ.[1]

ಗೋಮಾಂಸದ ವಿಷಯದಲ್ಲಿ ಅದನ್ನು ಸಮ್ಮತಾರ್ಹವೆನ್ನಲಾಗಿದೆಯೇ ಹೊರತು ಕಡ್ಡಾಯವೆಂದು ಹೇಳಿಲ್ಲ. ಇಸ್ಲಾಮಿನ ಎಲ್ಲ ನಿಯಮಗಳೂ ವಿವೇಕ, ಬುದ್ಧಿ, ಜ್ಞಾನ ಮತ್ತು ತರ್ಕದಲ್ಲಿ ಆಧಾರಿತವಾಗಿದೆಯೇ ಹೊರತು ಕೇವಲ ಧಾರ್ಮಿಕ ಭಾವನೆಯನ್ನು ಅವಲಂಬಿಸಿಲ್ಲ. ಇಸ್ಲಾಮ್ ಧರ್ಮವು ಅಪ್ಪಟ ಏಕದೇವವಾದಿಯಾಗಿದೆ. ಅದು ಗೋವನ್ನು ಪೂಜನೀಯವೆಂದು

[1] ರಾಜೇಂದ್ರ ನಾರಾಯಣ ಲಾಲ್‌ಜೀಯವರು ಕೇವಲ ಗೋವಧೆಯ ಸಮಸ್ಯೆಯನ್ನು ಸಂಕ್ಷಿಪ್ತವಾಗಿ ಚರ್ಚಿಸಿದ್ದಾರೆ. ಆದರೊಂದಿಗೆ ಪ್ರಾಣಿ ಹಿಂಸೆಯ ಸಮಸ್ಯೆಯನ್ನೂ ಸೇರಿಸಿದ್ದಾರೆ. ಇಸ್ಲಾಮ್, ಪ್ರಾಣಿ ಹಿಂಸೆಯನ್ನು ಅನುಮತಿಸಿದೆಯೆಂಬ ಆರೋಪವನ್ನೂ ಹೊರಿಸಿದ್ದಾರೆ. ಆದ್ದರಿಂದ ಅದರ ಔಚಿತ್ಯದ ಬಗ್ಗೆಯೂ ಚರ್ಚಿಸುವುದು ಅಗತ್ಯವಾಗಿದೆ. ವಸ್ತುತಃ ಈ ಸಮಸ್ಯೆಯನ್ನು ಗೋರಕ್ಷಣೆಯ ವಿಷಯವನ್ನು ಭಾವುಕಗೊಳಿಸಲಿಕ್ಕಾಗಿ ಹುಟ್ಟು ಹಾಕಲಾಗಿದೆ. ಅದು ಬುದ್ಧಿ, ಜ್ಞಾನ, ವಿಜ್ಞಾನ, ಕಾರ್ಯ, ವ್ಯವಹಾರ ಇತ್ಯಾದಿ ಯಾವುದಕ್ಕೂ ಸರಿಹೊಂದುವುದಿಲ್ಲ.

ಸ್ವತಃ ಹಿಂದೂ ಧರ್ಮದಲ್ಲಿ ಮಾಂಸಾಹಾರದ ಅನುಮತಿಯಿದೆಯೆಂಬುದು ವಾಸ್ತವಿಕವಾಗಿದೆ. ಮನುಸ್ಮೃತಿಯ 5ನೇ ಅಧ್ಯಾಯದ ಈ ಕೆಳಗಿನ ಶ್ಲೋಕವನ್ನು ನೋಡಿರಿ. "ಯಜ್ಞಗಳಿಗಾಗಿ ಅಥವಾ ಸಜ್ಜನರ ಮರಣ ಘೋಷಣೆಗಾಗಿ ಯೋಗ್ಯವಾದ ಪಶು-ಪಕ್ಷಿಗಳನ್ನು ವಧಿಸುವುದರಲ್ಲಿ ದೋಷವಿಲ್ಲ. ಏಕೆಂದರೆ ಅಗಸ್ತ್ಯ ಮುನಿಯು ಆ ರೀತಿ ಮಾಡಿದ್ದಾರೆ." **(ಮನುಸ್ಮೃತಿ, 5:22)**

"ಪ್ರಾಚೀನ ಕಾಲದಲ್ಲಿ ಋಷಿಮುನಿಗಳು, ಬ್ರಾಹ್ಮಣರು ಮತ್ತು ಕ್ಷತ್ರಿಯರು ನಡೆಸುತ್ತಿದ್ದ ಯಜ್ಞಗಳಲ್ಲಿಯೂ, ಪಶು, ಪಕ್ಷಿಗಳ ಮಾಂಸವನ್ನು ಬಳಸಲಾಗುತ್ತಿತ್ತು."

(ಮನುಸ್ಮೃತಿ, 5:23)

"ಯಜ್ಞಗಳ ಮಂತ್ರಗಳ ಮೂಲಕ ಪವಿತ್ರೀಕರಿಸಲಾದ ಮಾಂಸವು ಭಕ್ಷ್ಯಯೋಗ್ಯವಾಗಿದೆ. ಬ್ರಾಹ್ಮಣರಿಗೆ ಮಾಂಸ ತಿನ್ನುವ ಇಚ್ಛೆಯುಂಟಾದರೆ ಆಗ ಅದನ್ನು ತಿನ್ನಬಹುದು. ಆದರೆ ಶಾಸ್ತ್ರೋಕ್ತ ವಿಧಿಯಲ್ಲಿ ಅಥವಾ ಅನಿರೀಕ್ಷಿತವಾಗಿ ಪ್ರಾಣಿಗಳಿಗೆ ಏನಾದರೂ ತೊಂದರೆಯಾದರೂ ತಿನ್ನಬಹುದು. ಅನ್ಯಥಾ ಕೂಡದು." **(ಮನುಸ್ಮೃತಿ, 5:27)**

"ಯಾವುದಾದರೂ ಶ್ರಾದ್ಧ ಅಥವಾ ಮಧುಪರ್ಕದಂತಹ ವಿಧಿಗಳಿಗೆ ನಿಯುಕ್ತವಾಗಿದ್ದರೂ ಮಾನವನು ಮಾಂಸ ತಿನ್ನದಿದ್ದರೆ ಅವನು ಸತ್ತ ನಂತರ 21 ಜನ್ಮಗಳ ವರೆಗೂ ಪಶುವಾಗುತ್ತಿರುತ್ತಾನೆ."

(ಮನುಸ್ಮೃತಿ, 5:35)

ಸಂತ ವಿನೋಬಾಭಾವೆಯವರು ಗೀತಾ ಪ್ರವಚನದಲ್ಲಿ ಹೇಳಿದ್ದರು: 4 ಭವಭೂತಿಯ ಉತ್ತರ ರಾಮ ಚರಿತದಲ್ಲಿ ಒಂದು ಪ್ರಸಂಗ ಬಂದಿದೆ. ವಾಲ್ಮೀಕಿಯ ಆಶ್ರಮಕ್ಕೆ ವಶಿಷ್ಠ ಮುನಿಯು ಆಗಮಿಸಿದನು. ಅವನ ಸತ್ಕಾರಕ್ಕಾಗಿ ಒಂದು ಸಣ್ಣ ದನದ ಕರುವನ್ನು ವಧಿಸಲಾಯಿತು. ಆಗ ಒಬ್ಬ ಚಿಕ್ಕ ಹುಡುಗ ದೊಡ್ಡ ಹುಡುಗನೊಡನೆ ಕೇಳುತ್ತಾನೆ: "ಇಂದು ನಮ್ಮ ಆಶ್ರಮಕ್ಕೆ ಗಡ್ಡಧಾರಿಯೊಬ್ಬರು ಆಗಮಿಸಿದ್ದರು. ಅವರು ನಮ್ಮ ಕರುವನ್ನು ಕೊಂದರು. ಆಗ ದೊಡ್ಡ ಹುಡುಗ ಉತ್ತರಿಸುತ್ತಾನೆ: ಅಯ್ಯೋ ಅವರು ವಶಿಷ್ಠ ಮುನಿಗಳು, ಹಾಗೆ ಹೇಳಬಾರದು." **(ಗೀತಾ ಪ್ರವಚನ, ಅಧ್ಯಾಯ: 8, ಪುಟ: 256)**

ನಂಬುವುದಿಲ್ಲ. ಸಾಮಾಜಿಕ ಮತ್ತು ಆರ್ಥಿಕ ಬೇಡಿಕೆಗಳಿಗನುಗುಣವಾಗಿ ಗೋವಧೆಯನ್ನು ಇಸ್ಲಾಮ್ ಕೂಡಾ ನಿಷೇಧಿಸಬಹುದಾಗಿದೆ.

ಆದರೆ ಅದು ಮುದಿ ಹಾಗೂ ನಿರುಪಯೋಗಿ ಎಮ್ಮೆ-ದನಗಳ ಮೇಲೆ ನಿಷೇಧ ಹೇರಲಾರದು. ಏಕೆಂದರೆ ಅವು ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಯಿಂದ ಸಂಪೂರ್ಣ ನಷ್ಟ ದಾಯಕವಾಗಿದೆ.

ಹಿಂದುತ್ವದ ಬಗ್ಗೆ ಹೇಳುವುದಿದ್ದರೆ, ಸಿಂಧೂ ಕಣಿವೆಯ ಸಂಸ್ಕೃತಿಯ ಹಿಂದೂಗಳು ಗೋವಿಗೆ ಧಾರ್ಮಿಕ ಮಾನ್ಯತೆ ನೀಡಿರಲಿಲ್ಲ. ಕೃಷಿ ಸಂಸ್ಕೃತಿಯ ಜನಕರಾದ ಆರ್ಯರು ಆರ್ಥಿಕ ದೃಷ್ಟಿಯಿಂದ ಗೋವಧೆ ನಡೆಸಬಹುದೆಂದು ನಂಬಿದ್ದರು. ಹಾಗಿದ್ದರೂ ವಿಶೇಷ ಉತ್ಸವಗಳಲ್ಲಿ ಆರ್ಯರು ಎತ್ತಿನ ಮಾಂಸವನ್ನು ಉಪಯೋಗಿಸುತ್ತಿದ್ದರು. ಕಾಲಕ್ರಮೇಣ ಯಜ್ಞಗಳಲ್ಲಿ ಅತ್ಯಧಿಕ ಪ್ರಾಣಿ ಹಿಂಸೆ ನಡೆಯುತ್ತಿತ್ತು. ಗೋಮೇಧ ಯಜ್ಞವನ್ನು ನಡೆಸಲಾಗುತ್ತಿತ್ತು. ಈ ಕ್ರೂರ ಹಿಂಸೆಯ ಪ್ರಕ್ರಿಯೆಯಾಗಿ ಬೌದ್ಧ ಧರ್ಮದಲ್ಲಿ ಅಹಿಂಸೆ ಅಭಿವ್ಯಕ್ತವಾಯಿತು. ಹಾಗಿದ್ದರೂ ಅದು ವ್ಯಾವಹಾರಿಕವೆಂದು ಸಾಬೀತಾಗಲಿಲ್ಲ. ಪ್ರಾಯಶಃ ಹೆಚ್ಚಿನ ಬೌದ್ಧರು ಮಾಂಸಾಹಾರಿಗಳಾಗಿದ್ದಾರೆ. ದೇವ ದೇವತೆಯರಿಗಾಗಿ ಕೋಣ, ಕುರಿಗಳ ಬಲಿದಾನವೂ ನಡೆಯುತ್ತಿದೆ.[1]

ಜಗತ್ತಿನ ಎಲ್ಲ ನಾಗರಿಕ ಮತ್ತು ಅನಾಗರಿಕ ಜನಾಂಗಗಳು ಹಾಗೂ ಜಗತ್ತಿನ ಎಲ್ಲ ಧರ್ಮಗಳ ಅನುಯಾಯಿಗಳು ಮಾಂಸಾಹಾರಿಗಳಾಗಿದ್ದಾರೆ. ಭಾರತದಲ್ಲಿ ಬ್ರಾಹ್ಮಣರ ಒಂದು ಸಣ್ಣ ವಿಭಾಗವನ್ನು ಹೊರತು ಪಡಿಸಿ, ಇತರೆಲ್ಲ ಹಿಂದೂಗಳು ಮಾಂಸ-ಮೀನು ತಿನ್ನುತ್ತಾರೆ.

ದೇವ-ದೇವತೆಯರಿಗಾಗಿ ಕೋಣ-ಕುರಿಗಳನ್ನು ಬಲಿಯರ್ಪಿಸುತ್ತಾ, ಮಾಂಸ-ಮೀನು ತಿನ್ನುತ್ತಾ ಇಸ್ಲಾಮಿನ ಮೇಲೆ ಪ್ರಾಣಿಹಿಂಸೆಯ ಆರೋಪ ಹೊರಿಸುವುದು ಹಾಸ್ಯಾಸ್ಪದ ಮತ್ತು ಮೌಢ್ಯವಾಗಿದೆ. ಇಸ್ಲಾಮ್ ಯಾವುದಾದರೊಂದು ದೇಶ ಅಥವಾ ಜನಾಂಗಕ್ಕೆ ಸೀಮಿತವಾಗಿರುವ ಧರ್ಮವಲ್ಲ. ಇಡೀ ವಿಶ್ವದ ದೈವಿಕ ಧರ್ಮವಾಗಿದೆ. ಜಗತ್ತಿನಲ್ಲಿ ಅನೇಕ ದೇಶಗಳಿವೆ. ಅಲ್ಲಿನ ನಿವಾಸಿಗಳ ಆಹಾರದಲ್ಲಿ ಮೀನು-ಮಾಂಸ ಸೇರಿವೆ. ಹೀಗಿರುತ್ತಾ ಸಾರ್ವತ್ರಿಕವಾಗಿರುವ ಇಸ್ಲಾಮ್ ಧರ್ಮವು ಪ್ರಾಣಿವಧೆಯನ್ನು ನಿಷೇಧಿಸುವುದಾದರೂ ಹೇಗೆ?

ಇಸ್ಲಾಮೀ ರಾಷ್ಟ್ರ

ಸಾಮಾನ್ಯವಾಗಿ ರಾಮರಾಜ್ಯ, ವಿಕ್ರಮಾದಿತ್ಯ ಮತ್ತು ಅಶೋಕರಂತಹ ಮಾದರಿ ರಾಜ್ಯಗಳು ಇಸ್ಲಾಮಿನಿಂದ ಸ್ಥಾಪಿತವಾಗಿಲ್ಲವೆಂದು ಭಾವಿಸಲಾಗುತ್ತಿದೆ. ಆದರೆ ಅದು ವಾಸ್ತವಿಕವಲ್ಲ.[2]

ರಾಮರಾಜ್ಯಕ್ಕೆ ಪೌರಾಣಿಕತೆ ಮತ್ತು ಕಾಲ್ಪನಿಕತೆ ಆಧಾರವಾಗಿದೆಯೇ ವಿನಾ ಇತಿಹಾಸ ವಲ್ಲ. ಅದು ಸೀತಾ ಪರಿತ್ಯಾಗ ಮತ್ತು ಬ್ರಾಹ್ಮಣ ವಾದದ ಪೋಷಕ ತತ್ವಗಳಿಂದಾಗಿ ಈ ಆಧುನಿಕ

---

[1]ಇಂತಹ ಅನೇಕ ಆಧಾರಗಳಿರುವ ವಿದ್ವಾಂಸರ ಪುಸ್ತಕಗಳು ನಮ್ಮ ಬಳಿಯಿವೆ. ದೆಹಲಿಯ 'ಸರಿತಾ' ಮಾಸಿಕದಲ್ಲಿ ಗೋವಧೆಯ ಕುರಿತು ರತನ್‌ಲಾಲ್ ಬನ್ಸಲ್‌ರ ಅನೇಕ ಲೇಖನಗಳು ಪ್ರಕಟವಾಗಿವೆ.

[2]ಇಸ್ಲಾಮೀ ರಾಷ್ಟ್ರದ ವಾಸ್ತವಿಕತೆಯನ್ನು ಜನಸಾಮಾನ್ಯರು ಅರಿತಿಲ್ಲ. ಇಸ್ಲಾಮೀ ರಾಷ್ಟ್ರದ

ಕಾಲದಲ್ಲಿ ಚರ್ಚಾಸ್ಪದವಾಗಿದೆ. ಅದಲ್ಲದೆ ತುಳಸಿದಾಸರು ಬರೆದಿರುವ ರಾಮಾಯಣವನ್ನು ಸ್ವತಃ ಹಿಂದೂಗಳೇ ದಕ್ಷಿಣ ಭಾರತದಲ್ಲಿ ಗೌರವಿಸುವುದಿಲ್ಲ. ಹಾಗೆಯೇ ಅಶೋಕನ ಧರ್ಮಸಾಮ್ರಾಜ್ಯವೂ ಬೌದ್ಧರಿಂದ ಅತಿ ವಂಚಿತವಾಗಿದೆ. ಅಶೋಕನು ಬದುಕಿರುವ ತನಕ ಮಾತ್ರ ಆ ಸಾಮ್ರಾಜ್ಯ ಉಳಿದಿತ್ತು. ಅನಂತರ ಅದು ಅವಸಾನವಾಯಿತು. ಆತನು ಭಾರತೀಯ ಸಮುದಾಯವನ್ನು ಅತ್ಯಂತ ದುರ್ಬಲಗೊಳಿಸಿದ್ದನು. ಅಶೋಕನ ಕಾಲಾನಂತರ ಭಾರತದ ಇತಿಹಾಸವು ಹಲವು ಶತಮಾನಗಳ ತನಕ ಅಂಧಕಾರದಲ್ಲಿತ್ತು. ಬೌದ್ಧ ಧರ್ಮವು ಪ್ರಸಾರ ನೀತಿಗೆ ಪ್ರಸಿದ್ಧವಾಗಿದೆಯೇ ವಿನಾ ಮಾದರಿ ಅಥವಾ ಸ್ಥಾಯೀ ಆಡಳಿತಕ್ಕೆ ಪ್ರಸಿದ್ಧವಾಗಿಲ್ಲ. ಅಶೋಕನ ಸಾಧನೆಗಳನ್ನು ಡಾ| ಭಂಡಾರ್‌ಕಾರ್ ಕಟುವಾಗಿ ಟೀಕಿಸಿದ್ದಾರೆ. ವಸ್ತುತಃ ವಿಕ್ರಮಾದಿತ್ಯನ ಯುಗವು ಸ್ವರ್ಣ ಯುಗವಾಗಿತ್ತು. ಆದರೆ ಅದು ಜಾಗತಿಕ ಮಟ್ಟದಲ್ಲಿ ಆಗಿರಲಿಲ್ಲ. ಆಗ ಭಾರತದಲ್ಲಿ ಹಿಂದೂಗಳೇ ಪ್ರಮುಖರಾಗಿದ್ದರು. ಈ ದೃಷ್ಟಿಯಲ್ಲಿ ಶೇರ್‌ಶಾ, ಅಕ್ಬರ್, ಜಹಾಂಗೀರ್ ಮತ್ತು ಶಾಹಜಹಾನರ ಐತಿಹಾಸಿಕ ಸ್ವರ್ಣ ಯುಗವು ಪ್ರಭಾವಶಾಲಿ ಮತ್ತು ಪ್ರಶಂಸನೀಯವಾಗಿತ್ತು. ಏಕೆಂದರೆ ಅವರ ಸಾಮ್ರಾಜ್ಯವು ವಿಶಾಲವಾಗಿತ್ತು. ಪ್ರಜೆಗಳು ಹಿಂದೂ ಬಹುಸಂಖ್ಯಾತರಾಗಿದ್ದರೂ ಆಡಳಿತಗಾರರು ಅಲ್ಪಸಂಖ್ಯಾತ ವರ್ಗದವರಾಗಿದ್ದರು. ಅವರ ಧಾರ್ಮಿಕ ಔದಾರ್ಯ ಮತ್ತು ಅವರ ಕಾಲದಲ್ಲಿದ್ದ ಸುಖ ಸಮೃದ್ಧಿಯು ವಿಕ್ರಮಾದಿತ್ಯನ ಕಾಲಕ್ಕಿಂತಲೂ ಹೆಚ್ಚು ಪ್ರಭಾವಶಾಲಿಯಾಗಿತ್ತು. ಜಾಗತಿಕ ದೃಷ್ಟಿಕೋನದಲ್ಲಿ ಮುಹಮ್ಮದ್‌ರ ನಾಲ್ಕರು ಖಲೀಫರ ಸರಳ ಮಾದರಿ ಮತ್ತು ಆ ಬಳಿಕ ಖಲೀಫಾ ಹಾರೂನ್ ರಶೀದ್‌ರ ಆಡಳಿತಕ್ಕೆ ಇತಿಹಾಸದಲ್ಲಿ ಬೇರೆ ಉದಾಹರಣೆಯಿಲ್ಲ. ದೂರ ಹೋಗಬೇಕಾಗಿಲ್ಲ, ಇಂದಿನ ಕಾಲದಲ್ಲಿಯೇ ಬೆಲೆಯೇರಿಕೆ, ಅಸಹನೆ ಮತ್ತು ಉನ್ನತಾಧಿಕಾರಿಗಳಲ್ಲಿ ಭ್ರಷ್ಟಾಚಾರದ ಮಹಾರೋಗ ವ್ಯಾಪಿಸಿದೆ. ಈ ಸಂದರ್ಭದಲ್ಲಿ ಮೌಲ್ಯಗಳನ್ನು ಎತ್ತಿ ಹಿಡಿದ ಅಲ್ಲಾವುದ್ದೀನ್, ಸಹಿಷ್ಣುತೆಗೆ ಶೇರ್‌ಶಾ ಮತ್ತು ಮಹಾಸಾಮ್ರಾಟ್‌ರಲ್ಲಿ ವೈಯಕ್ತಿಕ ಚಾರಿತ್ರ್ಯಕ್ಕಾಗಿ ಔರಂಗಝೇಬ್ ಸಹಜವಾಗಿ ನೆನಪಾಗುತ್ತಾರೆ.

ಸಿದ್ಧಾಂತವು ಸರ್ವೋಚ್ಚವಾಗಿದೆ. ಜಗತ್ತು ಮತ್ತು ಅದರ ಸಕಲ ಸೃಷ್ಟಿಗಳು ದೇವನಿಗೆ ಸೇರಿವೆ. ಅವನೇ ಅವುಗಳ ಪ್ರಭು ಮತ್ತು ಆಡಳಿತಗಾರನಾಗಿದ್ದಾನೆ. ಮಾನವನು ಆತನ ಪ್ರತಿನಿಧಿಯಾಗಿದ್ದಾನೆ. ಈ ಪ್ರತಿನಿಧಿಗೆ ತನಗೆ ಬೇಕಾದಂತೆ ಆಡಳಿತ ನಡೆಸುವ ಅಧಿಕಾರವಿಲ್ಲ. ದೇವದತ್ತ ಸಂವಿಧಾನದಂತೆ ಆಡಳಿತ ನಡೆಸುವುದು ಅವನ ಕರ್ತವ್ಯವಾಗಿದೆ. ಈ ಸಿದ್ಧಾಂತವು ಬುನಾದಿಯಾಗಿಲ್ಲದ ರಾಷ್ಟ್ರಗಳಲ್ಲಿ ಆಡಳಿತಗಾರ ಮುಸ್ಲಿಮನಾಗಿದ್ದರೂ ಅದು ಇಸ್ಲಾಮೀ ರಾಷ್ಟ್ರವೆನಿಸಲಾರದು. ಭಾರತದಲ್ಲಿ ಮುಸ್ಲಿಮರು ಸ್ಥಾಪಿಸಿದ್ದ ರಾಜ್ಯವು ಇಸ್ಲಾಮೀ ರಾಜ್ಯವಾಗಿರಲಿಲ್ಲ. ಪವಿತ್ರ ಕುರ್‌ಆನ್ ಇಸ್ಲಾಮೀ ರಾಷ್ಟ್ರದ ಸಂವಿಧಾನವಾಗಿದೆ. ದೇವ ಸಂದೇಶವಾಹಕರಾದ ಮುಹಮ್ಮದ್‌ರು(ಸ) ಸ್ಥಾಪಿಸಿದ್ದ ರಾಷ್ಟ್ರವೇ ಇಸ್ಲಾಮೀ ರಾಷ್ಟ್ರ. ಪ್ರವಾದಿವರ್ಯರ(ಸ) ಉತ್ತರಾಧಿಕಾರಿಗಳಾದ ಖಲೀಫರಾದ ಅಬೂಬಕರ್, ಉಮರ್, ಉಸ್ಮಾನ್ ಮತ್ತು ಅಲೀಯವರು ಮಾದರಿ ಇಸ್ಲಾಮೀ ಆಡಳಿತಗಾರರಾಗಿದ್ದರು. ಅವರು ಮಾದರಿ ದೇವಭಕ್ತರಾಗಿದ್ದರು. ಅವರು ಸರಳ ಜೀವನ ನಡೆಸುತ್ತಿದ್ದ ಫಕೀರ ಆಡಳಿತಗಾರರಾಗಿದ್ದರು. ಅವರಂತಹ ಪ್ರಜಾಪಾಲಕ, ನ್ಯಾಯಶೀಲ, ನಿಸ್ವಾರ್ಥ ಮತ್ತು ಸರಳ ಜೀವನ ನಡೆಸುತ್ತಿದ್ದ ಆಡಳಿತಗಾರರಿಗೆ ಸರಿಸಾಟಿಯಾದ ಬೇರೊಂದು ಉದಾಹರಣೆ ಇತಿಹಾಸದಲ್ಲಿ ದೊರೆಯಲಾರದು.

ಮುಸ್ಲಿಮರು ಮತ್ತು ಪ್ರತ್ಯೇಕತಾವಾದ

ಮುಸ್ಲಿಮರನ್ನು ಪ್ರತ್ಯೇಕತಾವಾದಿಗಳೆಂದೂ ಆರೋಪಿಸಲಾಗುತ್ತಿದೆ. ಔಷ್ಟ್ರಿಕ, ನೀಗ್ರೊ, ಮಂಗೋಲ ಇತ್ಯಾದಿ ಅದೆಷ್ಟೋ ಜನಾಂಗಗಳು ಭಾರತಕ್ಕೆ ಬಂದು ಹಿಂದೂಗಳೊಂದಿಗೆ ವಿಲೀನರಾಗಿದ್ದಾರೆ. ಆದರೆ ಮುಸ್ಲಿಮರು ತಮ್ಮ ಅನನ್ಯತೆಯನ್ನು ಉಳಿಸಿಕೊಂಡಿದ್ದಾರೆ. ಮುಸ್ಲಿಮರ ಮೇಲೆ ಈ ಆರೋಪ ಹೊರಿಸುವವರು ಅದರ ಕಾರಣದ ಬಗ್ಗೆ ಆಲೋಚಿಸುವುದಿಲ್ಲ. ಮುಸ್ಲಿಮರಿಗಿಂತ ಮುಂಚೆ ಭಾರತಕ್ಕೆ ಆಗಮಿಸಿದವರಲ್ಲಿ ಹಿಂದೂಗಳ ಬಳಿಯಲ್ಲಿದ್ದಂತಹ ಧರ್ಮವಿರಲಿಲ್ಲ. ಅಂತಹ ವಿದ್ಯೆ ಅಥವಾ ಜ್ಞಾನವೂ ಇರಲಿಲ್ಲ. ಆದ್ದರಿಂದ ಅವರು ಹಿಂದೂಗಳೊಂದಿಗೆ ಲೀನವಾದರು. ಇವರಿಂದಾಗಿ ಹಿಂದೂ ಧರ್ಮವೇ ವಿಕೃತವಾಯಿತು. ಪ್ರಚಲಿತ ಹಿಂದೂ ಧರ್ಮವು ಪ್ರಾಚೀನ ವೈದಿಕ ಧರ್ಮವಲ್ಲ. ಅದು ಅನೇಕ ಧರ್ಮಗಳ ಸಮ್ಮಿಶ್ರಣವಾಗಿದೆ.

ಇತರ ಜನಾಂಗಗಳಿಗೆ ಹೋಲಿಸಿದರೆ ಮುಸ್ಲಿಮರು ಒಂದು ಮಹಾನ್ ಧರ್ಮ, ಒಂದು ಮಹಾನ್ ಧರ್ಮಗ್ರಂಥವಾಗಿರುವ ಕುರ್‌ಆನ್, ಓರ್ವ ಮಹಾನ್ ನೇತಾರರಾದ ಅಂತಿಮ ಪ್ರವಾದಿ ಮುಹಮ್ಮದ್‌ರ ಮಾದರಿ ಜೀವನ ಚರಿತ್ರೆ ಮತ್ತು ಇತಿಹಾಸ ಸಹಿತ ಬಂದಿದ್ದರು. ಅವರು ಪರಿಶುದ್ಧ ಏಕದೇವವಾದಿಗಳಾಗಿದ್ದರು. ಅವರಿಗೆ 'ಲಾ ಇಲಾಹ ಇಲ್ಲಲ್ಲಾಹ್'(ದೇವನ ಹೊರತು ಅನ್ಯ ಆರಾಧ್ಯರಿಲ್ಲ) ಎಂಬ ವಚನವು ಆಧಾರವಾಗಿತ್ತು. ದೇವರ ಹೊರತು ಬೇರೆ ಯಾರ ಮುಂದೆಯೂ ಶಿರಬಾಗುವುದಿಲ್ಲವೆಂಬ ಅಭಿಮಾನವನ್ನು ಅವರು ಹೊಂದಿದ್ದರು.

ಇಲ್ಲಿ ಅಸಂಖ್ಯಾತ ದೇವಾಲಯಗಳಿದ್ದುವು. ಅದರಲ್ಲಿ ಕಾಲ್ಪನಿಕ ದೇವಿ-ದೇವತೆಯರ ಪೂಜೆ, ಉಪಾಸನೆ ಮತ್ತು ಆರಾಧನೆ ರೂಢಿಯಲ್ಲಿತ್ತು. ಪಶು-ಪಕ್ಷಿಗಳನ್ನು ಪೂಜಿಸಲಾಗುತ್ತಿತ್ತು. ಇಲ್ಲಿ ಅವತಾರವಾದಕ್ಕೆ ಮನ್ನಣೆಯಿತ್ತು. ಅಲ್ಲಿ ಮುಹಮ್ಮದ್‌ರು ದೇವೋಪಾಸಕ, ಭಕ್ತ ಮತ್ತು ಅಂತಿಮ ಸಂದೇಶವಾಹಕರಾಗಿದ್ದರು. ಇಲ್ಲಿ ಬ್ರಾಹ್ಮಣವಾದವಿತ್ತು. ಸ್ಪೃಶ್ಯ-ಅಸ್ಪೃಶ್ಯಗಳಿದ್ದುವು. ಉಚ್ಚ-ನೀಚತೆಯಿತ್ತು. ಮುಸ್ಲಿಮರಲ್ಲಿ ಇಂತಹ ಯಾವುದೇ ಭೇದಭಾವವಿರಲಿಲ್ಲ. ಎಲ್ಲರೂ ಸಮಾನರಾಗಿದ್ದರು.

ಮುಸ್ಲಿಮರು ತಮ್ಮ ಸಂಸ್ಕೃತಿ, ಭಾಷೆ ಇತ್ಯಾದಿಗಳನ್ನು ಸುರಕ್ಷಿತವಿರಿಸಲು ಬಯಸಿದರೆ ಅವರ ಮೇಲೆ ಪರಕೀಯರೆಂಬ ಮುದ್ರೆ ಒತ್ತಲಾಗುತ್ತಿದೆ. ಸ್ವತಃ ಹಿಂದೂಗಳ ಪರಿಸ್ಥಿತಿ ಹೇಗಿದೆ? ಎಲ್ಲರೂ ಹಿಂದೂಗಳೇ ಆಗಿದ್ದರೂ ಅವರ ಭಾಷೆಗಳು ಯಾಕೆ ಭಿನ್ನವಾಗಿವೆ? ಭಾಷೆಗಳ ಆಧಾರದಲ್ಲಿ ರಾಜ್ಯಗಳನ್ನು ಯಾಕೆ ವಿಂಗಡಿಸಲಾಯಿತು? ದಕ್ಷಿಣ ಭಾರತದ ಹಿಂದೂವು ಹಿಂದೀ ಭಾಷೆಯನ್ನೇ ವಿರೋಧಿಸುತ್ತಾನೆ. ಸಿಕ್ಖರು ತಮಗೆ ಪ್ರತ್ಯೇಕ ರಾಜ್ಯಬೇಕೆಂದು ಬಯಸುತ್ತಾರೆ. ಕಾಶ್ಮೀರದಲ್ಲಿ ಮುಸ್ಲಿಮರ ಬಹುಮತವಿದೆ. ಅದು ಜಮ್ಮುವಿನ ಹಿಂದೂಗಳಿಗೆ ಅಸಹನೀಯವಾಗಿದೆ. ಅವರು ಜಮ್ಮುವನ್ನು ಹಿಮಾಚಲ ಪ್ರದೇಶಕ್ಕೆ ಸೇರಿಸಬೇಕೆಂದು ಬಯಸುತ್ತಾರೆ. ಎಲ್ಲ ರಾಜ್ಯಗಳೂ ಕೇಂದ್ರದಿಂದ ಹೆಚ್ಚಿನ ಅಧಿಕಾರ ಅರ್ಥಾತ್, ಹೆಚ್ಚು ಸ್ವಾತಂತ್ರ್ಯವನ್ನು ಅಪೇಕ್ಷಿಸುತ್ತಿವೆ. ಹಾಗಿದ್ದರೂ ಪ್ರತ್ಯೇಕತೆ ಮತ್ತು ಪರಕೀಯತೆಯ ಆರೋಪಗಳನ್ನು ಮುಸ್ಲಿಮರ ಮೇಲೆಯೇ

ಹೊರಿಸಲಾಗುತ್ತಿದೆ. ಇದೆಂತಹ ನ್ಯಾಯ? ಕೆಲವು ಮೂಲ ವಿಶ್ವಾಸಗಳ ಹೊರತು ಮುಸ್ಲಿಮರು ಯಾವ ವಿಷಯಗಳಲ್ಲಿ ರಾಷ್ಟ್ರದಿಂದ ಪ್ರತ್ಯೇಕವಾಗಿದ್ದಾರೆ? ಪೊಲೀಸ್, ಪಿ.ಏ.ಸಿ. ಹಾಗೂ ಇತರ ವಿಭಾಗಗಳಲ್ಲಿ ಅವರ ಅನುಪಾತಕ್ಕೆ ತಕ್ಕಂತೆ ಸ್ಥಾನ ನೀಡಲಾಗಿಲ್ಲ. 30 ವರ್ಷಗಳಿಂದ ಅವರ ಮೇಲೆ ಅನ್ಯಾಯವೆಸಗಲಾಗಿದೆ.

ಮುಸ್ಲಿಮರು ಮತ್ತು ಪರಕೀಯತೆ

ಮುಸ್ಲಿಮರ ದೃಷ್ಟಿಕೋನವು ರಾಷ್ಟ್ರೀಯವಾಗಿಲ್ಲ. ಅವರು ಅರಬ್ ಹಾಗೂ ಇತರ ಮುಸ್ಲಿಮ್ ರಾಷ್ಟ್ರಗಳಿಂದ ಪ್ರೇರಣೆ ಪಡೆಯುತ್ತಿದ್ದಾರೆಂದೂ ಹೇಳಲಾಗುತ್ತದೆ. ಇದು ತೀರಾ ಸುಳ್ಳು ಮತ್ತು ಘೋರ ತಪ್ಪು ತಿಳುವಳಿಕೆಯಾಗಿದೆ. ಭಾರತದಲ್ಲಿ ಮುಸ್ಲಿಮರ ಸ್ಥಿರ ಆಡಳಿತವು ಕ್ರಿ.ಶ. 712ರಿಂದ 1857ರ ತನಕವಿತ್ತು. ಅವರು ಭಾರತಕ್ಕಾಗಿಯೇ ಬದುಕಿ ಭಾರತಕ್ಕಾಗಿಯೇ ಮಡಿದಿದ್ದರು. ಪರಕೀಯರಾದ ಜನರು ಯಾವುದೇ ದೇಶದಲ್ಲಿ 1000 ವರ್ಷಗಳಿಂದ ವಾಸಿಸಲಾರರೆಂಬುದು ಸಾಮಾನ್ಯ ಜ್ಞಾನವಿರುವವರಿಗೂ ಮನವರಿಕೆಯಾದೀತು. ಮಾತ್ರವಲ್ಲ ಅವರೇ ಅಲ್ಲಿನ ಆಡಳಿತಗಾರರಾಗಿದ್ದರು. ಒಂದು ವೇಳೆ ಮುಸ್ಲಿಮರು ಪರಕೀಯರೆಂದಾಗಿದ್ದರೆ ಬಹುಸಂಖ್ಯಾತರಾಗಿದ್ದ ಹಿಂದೂಗಳು ಅವರ ವಿರುದ್ಧ ಸಾಮೂಹಿಕ ಹೋರಾಟ ನಡೆಸುತ್ತಿದ್ದರು. ಆದರೆ ಸಾವಿರ ವರ್ಷಗಳ ಅವಧಿಯಲ್ಲಿ ಆ ರೀತಿ ಆಗಿಲ್ಲ.

ಪ್ರಾರಂಭದ ಅರ್ಥಾತ್ ಮುಸ್ಲಿಮರು ಇಲ್ಲಿ ಸ್ಥಿರವಾಸ ಹೂಡುವುದಕ್ಕಿಂತ ಮುಂಚಿನ ಘಟನೆಗಳನ್ನು ಹೊರತುಪಡಿಸಿದರೆ, ಉಳಿದ 11 ಶತಮಾನಗಳಲ್ಲಿ ಒಂದು ಕಡೆ ಕೇವಲ ಹಿಂದೂಗಳು ಮತ್ತು ಇನ್ನೊಂದು ಕಡೆ ಕೇವಲ ಮುಸ್ಲಿಮರು ನಿಂತು ಹೋರಾಡಿದ ಯುದ್ಧಗಳೇ ನಡೆದಿಲ್ಲ. ತದ್ವಿರುದ್ಧವಾಗಿ ಹಿಂದೂಗಳ ರಕ್ಷಕ ಜಾತಿಯಾಗಿರುವ ರಜಪೂತರೇ ಮುಸ್ಲಿಮ್ ಸಾಮ್ರಾಜ್ಯದ ಆಧಾರ ಸ್ತಂಭವಾಗಿದ್ದರು. ಮೊಗಲ್ ಸಾಮ್ರಾಜ್ಯದ ಮಾನ್‌ಸಿಂಹನ ಮೂಲಕ ಸಾಧಿಸಲಾದ ಕಾಬೂಲ್ ವಿಜಯವನ್ನು ಭಾರತದ ವಿಜಯವೆಂದೇ ತಿಳಿಯಲಾಗುತ್ತಿದೆ. ಶಿವಾಜಿಯ ಸೇನೆಯಲ್ಲಿಯೂ ಮುಸ್ಲಿಮರಿದ್ದರು. ಹೆಚ್ಚೇಕೆ ರಾಜಾ ಜಯಸಿಂಹ ಔರಂಗಝೇಬನ ಸೇನಾಪತಿಯಾಗಿದ್ದ. ಹಿಂದೂ ಜನಾಂಗವು ಮುಸ್ಲಿಮ್ ರಾಜ್ಯವನ್ನು ಪರಕೀಯ ರಾಜ್ಯವೆಂದು ಎಂದೂ ಪರಿಗಣಿಸಿಲ್ಲವೆಂದು ಇತಿಹಾಸದಿಂದ ಖಚಿತಗೊಂಡಿದೆ. ತದ್ವಿರುದ್ಧವಾಗಿ 1857ರಲ್ಲಿ ಭಾರತೀಯ ಆಡಳಿತಗಾರರು ದುರ್ಬಲಗೊಂಡಾಗ ಹಿಂದೂ-ಮುಸ್ಲಿಮರು ಬ್ರಿಟಿಷ್ ಆಡಳಿತದ ವಿರುದ್ಧ ತಮ್ಮದೇ ರೀತಿಯಿಂದ ಸತತವಾಗಿ ಪ್ರತಿಭಟಿಸ ತೊಡಗಿದರು. 1857ರಲ್ಲಿ ಮೊಗಲ್ ಸಾಮ್ರಾಟ ಬಹದ್ದೂರ್ ಶಾರ ನೇತೃತ್ವದಲ್ಲಿ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದಿತ್ತು. ಈ ಮೊಗಲ್ ಸಾಮ್ರಾಟನ ನಾಯಕತ್ವವನ್ನು ಹಿಂದೂಗಳು ಒಮ್ಮತದಿಂದ ಸ್ವೀಕರಿಸಿದ್ದರು. ಒಟ್ಟಿನಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಸ್ಲಿಮರ ಕೊಡುಗೆಯು ಹಿಂದೂಗಳಿಗೆ ಸಮಾನವಾಗಿತ್ತು. 1920-21ರ ವೇಳೆಗೆ ಕಾಂಗ್ರೆಸ್ ಪ್ರಬಲಗೊಂಡಾಗ ಮುಸ್ಲಿಮರು ತಮ್ಮ

ಖಿಲಾಫತ್ ಆಂದೋಲನವನ್ನು ಅದರಲ್ಲಿ ವಿಲೀನಗೊಳಿಸಿದರು. 1916ರಲ್ಲಿ ಜಿನ್ನಾರ ಪ್ರಭಾವದಿಂದಾಗಿ ಕಾಂಗ್ರೆಸ್‌ನೊಂದಿಗೆ ಸಂಪೂರ್ಣ ಸ್ವಾಯತ್ತತೆಗಾಗಿ ಒಪ್ಪಂದವಾಯಿತು. ಭಾರತಕ್ಕೆ ಸ್ವಾತಂತ್ರ್ಯ ಸಿಗುವವರೆಗೂ ಸಂಪೂರ್ಣ ಮುಸ್ಲಿಮ್ ಬಾಹುಳ್ಯವಿದ್ದ ಗಡಿಪ್ರಾಂತ್ಯವು ಖಾನ್ ಅಬ್ದುಲ್ ಗಫ್ಫಾರ್‌ಖಾನ್‌ರ ನೇತೃತ್ವದಲ್ಲಿ ಕಾಂಗ್ರೆಸ್‌ನ ಜತೆಯಲ್ಲಿತ್ತು. ಸುಭಾಸ್ ಚಂದ್ರಬೋಸರ 'ಆಝಾದ್ ಹಿಂದ್ ಫೌಜ್'ನಲ್ಲಿಯೂ ಮುಸ್ಲಿಮರ ಕೊಡುಗೆಯಿತ್ತು. ಕ್ರಾಂತಿಕಾರಿಗಳಲ್ಲಿ ಅಶ್ಫಾಕುಲ್ಲಾ ಸ್ಮರಣೀಯರಾಗಿದ್ದಾರೆ. ಅಬುಲ್ ಕಲಾಮ್ ಆಝಾದ್‌ರಿಲ್ಲದ ಕಾಂಗ್ರೆಸ್‌ನ ಕಲ್ಪನೆಯೇ ಅಪೂರ್ಣವಾಗುತ್ತದೆ. ಪಾಕಿಸ್ತಾನದ ನಿರ್ಮಾಣವಾಯಿತು ನಿಜ. ಅದರ ಜನಕ ಜಿನ್ನಾರು ರಾಜಕೀಯ ವ್ಯಕ್ತಿಯಾಗಿದ್ದರು. ಕ್ರಿ.ಶ. 1937ರಲ್ಲಿ ಮಂತ್ರಿಮಂಡಲದಲ್ಲಿ 2 ಸ್ಥಾನಗಳನ್ನು ಮುಸ್ಲಿಮ್ ಲೀಗ್‌ಗೆ ನೀಡುವ ಭರವಸೆಯನ್ನು ಕಾಂಗ್ರೆಸ್ ಕೊಟ್ಟಿತ್ತು. ಆದರೆ ಚುನಾವಣೆಯ ಯಶಸ್ಸಿನ ದರ್ಪದಿಂದ ಅದು ತನ್ನ ವಾಗ್ದಾನವನ್ನು ಉಲ್ಲಂಘಿಸಿತು. ಮಾತ್ರವಲ್ಲ, ಆ ಈರ್ವರು ಸದಸ್ಯರು ಕಾಂಗ್ರೆಸ್‌ಗೆ ಸೇರಬೇಕೆಂಬ ಶರತ್ತನ್ನು ವಿಧಿಸಿತು. ಇದು ಜಿನ್ನಾರಿಗೆ ತೀರಾ ಅವಮಾನವಾಗಿತ್ತು. ಪಾಕಿಸ್ತಾನದ ನಿರ್ಮಾಣಕ್ಕೆ ಕೇವಲ ಮುಸ್ಲಿಮ್ ನಾಯಕರು ಹೊಣೆಗಾರರಲ್ಲ. ಬದಲಾಗಿ ಹಿಂದೂ ಕಾಂಗ್ರೆಸ್ ನೇತಾರರ ದೂರದರ್ಶಿತ್ವದ ಕೊರತೆ, ಹಠ ಮತ್ತು ಕಚ್ಚಾಟವೂ ಕಾರಣವಾಗಿತ್ತು. ಚೌಕಾಶಿ ಮತ್ತು ದಾಂಧಲೆಗಳಿಗೂ ಒಂದು ಮಿತಿಯಿರುತ್ತದೆ. ವಸ್ತುತಃ ಪಾಕಿಸ್ತಾನದ ನಿರ್ಮಾಣವು ಹಿಂದೂಗಳು ಅಥವಾ ಮುಸ್ಲಿಮರಿಂದ ಆಗಿಲ್ಲ. ಅದನ್ನು ದೂರದರ್ಶಿತ್ವವಿಲ್ಲದ ಹಿಂದೂ-ಮುಸ್ಲಿಮ್ ನೇತಾರರು ಮಾಡಿದರು. ಅದರಲ್ಲಿಯೂ ಕಾಂಗ್ರೆಸ್‌ನ ಹೊಣೆ ಅಧಿಕವಾಗಿದೆ. ಒಂದೆಡೆಯಲ್ಲಿ ಕಾಂಗ್ರೆಸ್ ಸಮಸ್ತ ಭಾರತೀಯರ ಪ್ರತಿನಿಧಿಯೆಂದು ಹೇಳಿಕೊಳ್ಳುತ್ತಿತ್ತು. ಇನ್ನೊಂದೆಡೆಯಲ್ಲಿ ವಿಶೇಷವಾಗಿ ಹಿಂದೂಗಳನ್ನು ಪ್ರತಿನಿಧಿಸುವುದಾಗಿಯೂ ಹೇಳುತ್ತಿತ್ತು. ಅದೇನಿದ್ದರೂ ಸಂಭವಿಸಬೇಕಾಗಿದ್ದುದು ಸಂಭವಿಸಿತು. ಪಾಕಿಸ್ತಾನದ ವಿರುದ್ಧ ಎರಡೆರಡು ಯುದ್ಧಗಳು ನಡೆದಿವೆ. ಅವುಗಳಲ್ಲಿ ಭಾರತೀಯ ಮುಸ್ಲಿಮರು ಪಾಕ್ ಪಕ್ಷ ವಹಿಸಿದ್ದರೇ? ಮೇಜರ್ ಅಬ್ದುಲ್ ಹಮೀದ್‌ರ ಬಲಿದಾನವು ಐತಿಹಾಸಿಕ ಬಲಿದಾನವಲ್ಲವೇ? ಕಾಶ್ಮೀರವು ಭಾರತದಲ್ಲಿ ಸೇರಿಕೊಂಡ ಹೆಗ್ಗಳಿಕೆಯೂ ಅಲ್ಲಿನ ಬಹುಸಂಖ್ಯಾತ ಮುಸ್ಲಿಮರಿಗೆ ಸಲ್ಲುವುದಿಲ್ಲವೇ? ಮಹಾಕವಿ ಇಕ್ಬಾಲ್‌ರಿಗಿಂತ ಉತ್ತಮವಾದ ರಾಷ್ಟ್ರಗೀತೆ, ಸಮುದಾಯ ಗೀತೆಯನ್ನು ಬೇರೆ ಯಾರು ಬರೆದಿದ್ದಾರೆ? ಒಂದು ವೇಳೆ ಮಲಿಕ್ ಮುಹಮ್ಮದ್ ಜಾಯಸಿ, ರಝ್ಖಾಖಾನ್, ಕುತಬನ್, ಶೇಖ್, ಕಬೀರ್, ರಹೀಮ್ ಮತ್ತು ಎಲ್ಲಕ್ಕಿಂತ ಮಿಗಿಲಾಗಿ ಹಿಂದಿಯ ಜನಕನಾದ ಖುಸ್ರೋರನ್ನು ಹಿಂದಿಯಿಂದ ಬೇರ್ಪಡಿಸಿದರೆ ಹಿಂದಿಯ ಮಹತ್ವ ಎಲ್ಲಿ ಉಳಿದೀತು? ಸ್ವತಂತ್ರ ಭಾರತದಲ್ಲಿ ಮುಸ್ಲಿಮರು ಎಂದಾದರೂ ಹಿಂದಿಯನ್ನು ವಿರೋಧಿಸಿದ್ದಾರೆಯೇ? ಅದಕ್ಕೆ ವ್ಯತಿರಿಕ್ತವಾಗಿ ದಕ್ಷಿಣ ಭಾರತದ ಹಿಂದೂಗಳೇ ಹಿಂದಿ ವಿರೋಧಿಗಳಾಗಿದ್ದಾರೆ. ಅದೇ ವೇಳೆ ಶೇಕ್ ಅಬ್ದುಲ್ಲ ಹಿಂದಿಯ ರಕ್ಷಣೆಗಾಗಿ ಸ್ವರವೆಬ್ಬಿಸಿದ್ದರು. ಹಾಗಿದ್ದರೂ ಉರ್ದುವಿಗೆ ಸ್ವತಂತ್ರ ಭಾರತದಲ್ಲಿ ದ್ವಿತೀಯ

ಭಾಷೆಯ ಸ್ಥಾನಮಾನ ನೀಡಬೇಕೆಂಬ ಮುಸ್ಲಿಮರ ಕೋರಿಕೆಯನ್ನು ಈ ತನಕ ಈಡೇರಿಸಲಾಗಿಲ್ಲ. ಮಕ್ಕಾ ಮದೀನಾ ಮುಸ್ಲಿಮರ ಪುಣ್ಯ ಕ್ಷೇತ್ರಗಳಾಗಿವೆ. ಅಲ್ಲಿಂದ ಪ್ರೇರಣೆ ಪಡೆಯುವ ಸಮಸ್ಯೆ ಏನಿದೆ? ಒಂದು ವೇಳೆ ಇಂಗ್ಲೆಂಡಿನ ಬ್ರಿಟಿಷನು ಜೆರೂಸಲೇಮ್‌ನ ಭಕ್ತನಾಗಿದ್ದರೆ ಅವನು ಇಂಗ್ಲೆಂಡಿಗೆ ಪರಕೀಯನಾಗಿ ಬಿಡುತ್ತಾನೆಯೇ? ಸ್ವತಂತ್ರ ನೇಪಾಳದ ಹಿಂದೂವು, ಕಾಶಿಯ ಭಕ್ತನಾಗಿಲ್ಲವೇ? ಮುಸ್ಲಿಮರು ಪರಕೀಯರು, ಅರೇಬಿಯಾ ಹಾಗೂ ಇತರ ಮುಸ್ಲಿಮ್ ರಾಷ್ಟ್ರಗಳಿಂದ ಪ್ರೇರಣೆ ಪಡೆಯುತ್ತಾರೆಂಬ ಹಿಂದೂಗಳ ಆರೋಪದಲ್ಲಿ, ಅವರಿಗೆ ಭಾರತದ ಹೊರಗೆ ತೀರ್ಥಕ್ಷೇತ್ರವಿಲ್ಲವೆಂಬುದೂ ಸೇರಿದೆ. ನೇಪಾಳದಲ್ಲಿದೆಯಾದರೂ ಅದರೊಂದಿಗೆ ಸ್ವತಂತ್ರ ಭಾರತದ ಸಂಬಂಧವು ಉತ್ತಮವಾಗಿಲ್ಲ.

ಲೇಖಕರ ಪರಿಚಯ

ಶ್ರೀ ರಾಜೇಂದ್ರ ನಾರಾಯಣ ಲಾಲ್‌ಜೀಯವರು 1916ರ ಮಾರ್ಚ್ 8ರಂದು ರಾಜಸ್ಥಾನದ ಭರತಪುರದಲ್ಲಿ ಜನಿಸಿದರು. ಅವರ ಶಿಕ್ಷಣ-ದೀಕ್ಷೆಗಳೆಲ್ಲವೂ ವಾರಣಾಸಿಯಲ್ಲೇ ನಡೆಯಿತು.

ಕ್ವೀನ್ಸ್ ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಮುಗಿಸಿದ ಬಳಿಕ 1940ರಲ್ಲಿ ಕಾಶಿಯ ಹಿಂದೂ ವಿಶ್ವವಿದ್ಯಾಲಯದಿಂದ "ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ಇತಿಹಾಸ"ದಲ್ಲಿ ಎಮ್. ಎ. ಪದವಿ ಗಳಿಸಿದ ಅವರಿಗೆ ಸಂಸ್ಕೃತ ಮತ್ತು ಧರ್ಮಗಳ ಕುರಿತು ಬಹಳ ಹಿಂದಿನಿಂದಲೇ ಆಸಕ್ತಿಯಿತ್ತು. ಹೈಸ್ಕೂಲ್ ಮತ್ತು ಇಂಟರ್ ಮೀಡಿಯಟ್‌ಗಳೆರಡರಲ್ಲಿಯೂ ಸಂಸ್ಕೃತದಲ್ಲಿ ಅತ್ಯಧಿಕ ಅಂಕಗಳನ್ನು ಪಡೆದು ರಾಜರ ಸ್ಕಾಲರ್ ಶಿಪ್ ತನ್ನದಾಗಿಸಿಕೊಂಡರು. ಗೀತಾ ಪರೀಕ್ಷೆಯಲ್ಲಿ ಹಿಂದೂ ವಿಶ್ವವಿದ್ಯಾಲಯದಿಂದಲೂ ಪದಕ ಪಡೆದರು. ವಾರಣಾಸಿ, ಮಿರ್ಜಾಪುರ, ಗೋರಖ್‌ಪುರ ಮತ್ತು ಜೈನ್‌ಪುರ ನಗರಪಾಲಿಕೆಗಳಲ್ಲಿ 33 ವರ್ಷಗಳ ಕಾಲ ಸೇವೆ ಸಲ್ಲಿಸಿ 1976ರಲ್ಲಿ ನಿವೃತ್ತರಾದರು. ಆ ಬಳಿಕ ಆತ್ಮಶಾಂತಿಗಾಗಿ ಹಿಂದೂ ಧರ್ಮದ ಜತೆಗೆ ಇತರ ಧರ್ಮಗಳ ಅಧ್ಯಯನವನ್ನೂ ಆರಂಭಿಸಿದರು. ಮುಹಮ್ಮದಲಿ ಮತ್ತು ಬಶೀರ್ ಅಹ್ಮದ್‌ರು ಬರೆದ 'ಕುರ್‌ಆನ್ ಆ್ಯಂಡ್ ಇಸ್ಲಾಮಿಕ್ ರಿವ್ಯೂ' ಹಾಗೂ ಇತರ ವಿದ್ವಾಂಸರ ಬರಹಗಳ ಅಧ್ಯಯನದ ಮೂಲಕ ಅವರಿಗೆ ಇಸ್ಲಾಮಿನ ಪರಿಚಯವಾಯಿತು.